ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 28 ಸೋಮವಾರ 2025

ಸಂಪುಟ: 46 | ಸಂಚಿಕೆ: 13 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪಾಕ್ ವಿರುದ್ಧ ಯುದ್ಧ ಬೇಡವೆಂದು ಹೇಳಿಲ್ಲ

• ಉಲ್ಟಾ ಹೊಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ • ಅಗತ್ಯ ಬಿದ್ದರೆ ಯುದ್ಧ ಅನಿವಾರ್ಯ • ಪಾಕ್ ವಿರುದ್ಧ ಕೇಂದ್ರದ ಕ್ರಮಗಳಿಗೆ ಸಂಪೂರ್ಣ ಸಹಕಾರ

ಬೆಂಗಳೂರು, ಏ.27– ಪಾಕಿಸ್ತಾನದ ವಿರುದ್ಧ ಯುದ್ಧ ಮಾಡುವುದೇ ಬೇಡವೆಂದು ನಾನು ಹೇಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉಲ್ಟಾ ಹೊಡೆದಿದ್ದಾರೆ.

ಪಾಕಿಸ್ತಾನದ ಮೇಲೆ ಭಾರತ ಯುದ್ಧ ಮಾಡಬಾರದು ಎಂದು ಸಿಎಂ ಸಿದ್ದರಾಮಯ್ಯ ನೀಡಿದ್ದ ಹೇಳಿಕೆ ಸಾಕಷ್ಟು ವೈರಲ್ ಆಗಿತ್ತು. ಸಿದ್ದರಾಮಯ್ಯ ಹೇಳಿಕೆಯನ್ನು ಬಳಸಿಕೊಂಡು ಪಾಕಿಸ್ತಾನ ಮಾಧ್ಯಮಗಳೂ ಕೂಡ ಸುದ್ದಿ ಪ್ರಸಾರ ಮಾಡಿದ್ದವು. ಇದರ ಬೆನ್ನಲ್ಲೇ ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಟೀಕೆಗಳು ವ್ಯಕ್ತವಾಗಿದ್ದವು. ಇದನ್ನೇ ಅಸ್ತ್ರವಾಗಿಸಿಕೊಂಡ ವಿರೋಧ ಪಕ್ಷದ ನಾಯಕರು ಸಿದ್ದರಾಮಯ್ಯ ವಿರುದ್ಧ ತಿರುಗಿಬಿದ್ದಿದ್ದರು. ಈ ಬಗ್ಗೆ ವಿವಾದ ಜೋರಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಸಿದ್ದರಾಮಯ್ಯ, ಪಾಕಿಸ್ತಾನದ ವಿರುದ್ಧ ಯುದ್ಧ ಮಾಡುವುದೇ ಬೇಡವೆಂದು ನಾನು ಹೇಳಿಲ್ಲ. ಯುದ್ಧ ಅನಿವಾರ್ಯವಾದರೆ ಮಾತ್ರ ಮಾಡಬೇಕು ಎನ್ನುತ್ತಾ



ಸ್ಪಷ್ಟನೆ ನೀಡಿದ್ದಾರೆ.

ಯುದ್ಧದ ಕುರಿತು ನಾನು ನೀಡಿದ ಹೇಳಿಕೆಯ ಬಗ್ಗೆ ಪರ–ವಿರೋಧದ ಚರ್ಚೆಗಳು ನಡೆಯುತ್ತಿರುವುದನ್ನು ಗಮನಿಸಿದ್ದೇನೆ. ಯುದ್ಧ ಎನ್ನುವುದು ಯಾವುದೇ ದೇಶದ ಅಂತಿಮ ಆಯ್ಕೆಯೇ ಹೊರತು, ಯುದ್ಧವೇ ಮೊದಲ ಇಲ್ಲವೇ ಏಕೈಕ ಆಯ್ಕೆಯಲ್ಲ. ಶತ್ರುವನ್ನು ಮಣಿಸುವ ಉಳಿದೆಲ್ಲ ಆಯ್ಕೆಗಳು ವಿಫಲವಾದಾಗ ಮಾತ್ರ ಯುದ್ಧಕ್ಕೆ ಹೊರಡಬೇಕು.

ಪಹಲ್ಗಾಮ್‌ನಲ್ಲಿ ನಡೆದ ಪಾಕ್ ಪ್ರೇರಿತ ಉಗ್ರರ ದಾಳಿಗೆ ನಮ್ಮ ಗೂಢಚರ್ಯೆ ಮತ್ತು ಭದ್ರತಾ ವ್ಯವಸ್ಥೆಯ ವೈಫಲ್ಯ ಕಾರಣ ಎನ್ನುವುದು ದೇಶದ ಜನತೆಗೆ ಮತ್ತು ಕೇಂದ್ರ ಸರ್ಕಾರಕ್ಕೂ ಈಗ ಮನವರಿಕೆಯಾಗಿದೆ. ಮೊದಲು ಈ ಲೋಪವನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳು ನಡೆಯದಂತೆ ಎಚ್ಚರಿಕೆ ವಹಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿದೆ.

ಸಿಂಧೂ ನದಿ ಒಪ್ಪಂದದ ರದ್ದತಿಯೂ ಸೇರಿದಂತೆ ಕೇಂದ್ರ ಸರ್ಕಾರ ಕೆಲವು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. ಕೇಂದ್ರ ಸರ್ಕಾರ ಮುಂದೆ ಇದಕ್ಕಿಂತಲೂ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ ಎನ್ನುವ ಭರವಸೆ ನಮಗಿದೆ. ಅವುಗಳನ್ನೆಲ್ಲ ಬಹಿರಂಗಪಡಿಸುವ ಅಗತ್ಯವಿಲ್ಲ. ಅಂತಹ ಕ್ರಮಗಳಿಗೆ ನಮ್ಮ ಸಂಪೂರ್ಣ ಸಹಕಾರ ಇದೆ. ■6ನೇ ಪುಟಕ್ಕೆ

ಭಾರತದಿಂದ ಶತ್ರು ರಾಷ್ಟ್ರಗಳ ಹಡಗುಗಳನ್ನು ಉಡಾಯಿಸಬಲ್ಲ ಯಶಸ್ವಿ ಕ್ಷಿಪಣಿ ಪರೀಕ್ಷೆ

ಎಕ್ಸ್‌ನಲ್ಲಿ ಕ್ಷಿಪಣಿ ಪರೀಕ್ಷೆಯ ದೃಶ್ಯಗಳನ್ನು ಹಂಚಿಕೊಂಡಿರುವ ನೌಕಾಪಡೆ



ನೌಕಾಪಡೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಚಿತ್ರ.

ನವದೆಹಲಿ, ಏ.27– ಪಹಲ್ಗಾಮ್ ಉಗ್ರರ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವಂತೆಯೇ, ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರದಲ್ಲಿ ಶತ್ರು ರಾಷ್ಟ್ರಗಳ ಹಡಗುಗಳನ್ನು ಉಡಾಯಿಸಬಲ್ಲ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದು, ಅದರ ದೀರ್ಘ ಶ್ರೇಣಿಯ ನಿಖರ ದಾಳಿಯ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕ್ಷಿಪಣಿ ಪರೀಕ್ಷೆಯ ದೃಶ್ಯಗಳನ್ನು ಹಂಚಿಕೊಂಡಿರುವ ನೌಕಾಪಡೆ, ದೀರ್ಘ ಶ್ರೇಣಿಯ ನಿಖರ ಆಕ್ರಮಣಕ್ಕಾಗಿ ಬಹು ಹಂತದ ವಿರೋಧಿ ಹಡಗುಗಳನ್ನು ನಾಶಪಡಿಸಬಲ್ಲ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ ಎಂದು ತಿಳಿಸಿದೆ.

ಭಾರತೀಯ ನೌಕಾಪಡೆಯು ಯಾವುದೇ ಕ್ಷಣ, ಎಲ್ಲಿಯೇ ಆದರೂ ರಾಷ್ಟ್ರದ ಕಡಲ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ, ಭವಿಷ್ಯಕ್ಕೆ ಸಿದ್ಧವಾಗಿದೆ ಎಂದು ಹೇಳಿದೆ.

ಯುದ್ಧ ನೌಕೆಗಳ ಸಮೂಹದಿಂದ ಬ್ರಹ್ಮೋಸ್ ವಿರೋಧಿ ಹಡಗು ಮತ್ತು ಕ್ರೂಸ್ ಕ್ಷಿಪಣಿಗಳನ್ನು ಉಡಾವಣೆ ಮಾಡುವುದನ್ನು ದೃಶ್ಯಗಳು ತೋರಿಸುತ್ತವೆ. ಇದು ನೌಕಾಪಡೆಯ ಕಾರ್ಯಾಚರಣೆಯ ಪ್ರದರ್ಶನವಾಗಿದೆ. 26 ಜನರನ್ನು ಬಲಿತೆಗೆದುಕೊಂಡ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆಯ ನಡುವೆ ಈ ಕ್ಷಿಪಣಿ ದಾಳಿ ನಡೆದಿರುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಭಯೋತ್ಪಾದಕ ದಾಳಿಯ ನಂತರ ಭಾರತವು ಸಿಂಧೂ ನದಿ ■6ನೇ ಪುಟಕ್ಕೆ

ಝೀಲಂ ನದಿಗೆ ಭಾರಿ ಪ್ರಮಾಣದ ನೀರು ಬಿಟ್ಟು ಪಾಕ್‌ನಲ್ಲಿ ಪ್ರವಾಹ ಉಂಟು ಮಾಡಿ ಶಾಕ್ ನೀಡಿದ ಭಾರತ

ತತ್ತರಿಸಿದ ಪಾಕ್ ಸರ್ಕಾರದಿಂದ ನೆರೆ ತುರ್ತು ಪರಿಸ್ಥಿತಿ

ಇಸ್ಲಾಮಾಬಾದ್, ಏ.27– ನೀರು ಹರಿಯುವುದನ್ನು ನಿಲ್ಲಿಸಿದರೆ ನಾವು ಭಾರತದಲ್ಲಿ ರಕ್ತದ ನದಿಯನ್ನು ಹರಿಸುತ್ತೇವೆ ಎಂದಿದ್ದ ಪಾಕಿಸ್ತಾನದಲ್ಲಿ ಈಗ ದಿಢೀರ್ ಪ್ರವಾಹ ಉಂಟಾಗಿದೆ.

ಭಾರತ ಉರಿ ಜಲಾಶಯದಿಂದ ಝೀಲಂ ನದಿಗೆ ಭಾರಿ ಪ್ರಮಾಣದಲ್ಲಿ ನೀರನ್ನು ಬಿಡುಗಡೆ ಮಾಡಿದ್ದರಿಂದ ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಮುಜಾಫರಾಬಾದ್‌ನಲ್ಲಿ ಪ್ರವಾಹ ಉಂಟಾಗಿದೆ. ಪ್ರವಾಹದ ಬೆನ್ನಲ್ಲೇ ನದಿ ದಂಡೆಯಲ್ಲಿ ವಾಸಿಸುವ ನಿವಾಸಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಳಿಸಲಾಗಿದೆ. ಯಾವುದೇ ಪೂರ್ವಸೂಚನೆ ನೀಡದೇ ಭಾರತ ಏಕಾಏಕಿ ನದಿಗೆ ನೀರನ್ನು ಹರಿಸಿದೆ ಎಂದು ಪಾಕ್ ಮಾಧ್ಯಮಗಳು ಭಾರತದ ವಿರುದ್ಧ ಆರೋಪ ಮಾಡಿವೆ.

ಝೀಲಂ ನದಿಯ ದಡದಲ್ಲಿರುವ ಮುಜಫರಾಬಾದ್‌ನಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಹಟ್ಟಿಯನ್ ಬಾಲಾದಲ್ಲಿ ಸ್ಥಳೀಯ ಆಡಳಿತವು ನೆರೆಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ. ಮಸೀದಿಗಳಲ್ಲಿ ಧ್ವನಿವರ್ಧಕದ ಮೂಲಕ ಪ್ರಕಟಣೆ ಹೊರಡಿಸಲಾಗಿದ್ದು, ನದಿಗೆ ಇಳಿಯದಂತೆ ಸ್ಥಳೀಯರಿಗೆ ಎಚ್ಚರಿಕೆ ನೀಡಿದೆ. ಈ ಪ್ರಕಟಣೆಯಿಂದ ನದಿ ದಂಡೆಗಳ ಬಳಿ ವಾಸಿಸುವ ನಿವಾಸಿಗಳಲ್ಲಿ ಭೀತಿಯನ್ನು ಸೃಷ್ಟಿಸಿದೆ ಎಂದು ವರದಿ ಮಾಡಿವೆ.

ಕಾಶ್ಮೀರದ ಅನಂತನಾಗ್‌ನಿಂದ ನೀರು ಪ್ರವೇಶಿಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಚಕೋತಿ ಪ್ರದೇಶದ ನೀರಿನ ಮಟ್ಟ ದಿಢೀರ್ ಏರಿಕೆಯಾಗಿದೆ. ಪಾಕಿಸ್ತಾನದ ಅಧಿಕಾರಿಗಳು ಈ ನಿರ್ಧಾರವನ್ನು ಖಂಡಿಸಿದ್ದು ■6ನೇ ಪುಟಕ್ಕೆ

ಸಿಇಟಿ: ಪರಿಷ್ಕೃತ ಕೀ ಉತ್ತರ ಪ್ರಕಟ, ಭೌತಶಾಸ್ತ್ರದ ಒಂದು ಪ್ರಶ್ನೆಗೆ ಕೃಪಾಂಕ

ಬೆಂಗಳೂರು, ಏ.27– ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯ ಎಲ್ಲ ನಾಲ್ಕು ವಿಷಯಗಳ 16 ವರ್ಷನ್‌ಗಳ ಪರಿಷ್ಕೃತ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಈ ಹಿಂದೆ ಪ್ರಕಟಿಸಿದ್ದ ಕೀ ಉತ್ತರಗಳಿಗೆ ಸಾರ್ವಜನಿಕರಿಂದ ಬಂದ ಆಕ್ಷೇಪಣೆಗಳನ್ನು ವಿಷಯ ತಜ್ಞರ ಸಮಿತಿ ಪರಿಶೀಲನೆ ನಡೆಸಿ, ಕೊಟ್ಟ ವರದಿ ಪ್ರಕಾರ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭೌತಶಾಸ್ತ್ರದಲ್ಲಿ ಒಂದು ಪ್ರಶ್ನೆಗೆ ಕೃಪಾಂಕ ನೀಡಲಾಗಿದೆ. ರಸಾಯನಶಾಸ್ತ್ರದಲ್ಲಿ ಎರಡು ಮತ್ತು ಜೀವಶಾಸ್ತ್ರದಲ್ಲಿ ಒಂದು ಪ್ರಶ್ನೆಗೆ ಈ ಹಿಂದೆ ಪ್ರಕಟಿಸಿದ್ದ ಉತ್ತರದ ಜತೆಗೆ ಮತ್ತೊಂದು ಉತ್ತರ ಕೂಡ ಸರಿ ಇದೆ ಎಂದು ಸಮಿತಿ ಹೇಳಿದೆ. ಗಣಿತ ವಿಷಯದಲ್ಲಿ ಯಾವ ಬದಲಾವಣೆಯೂ ಇಲ್ಲ ಎಂದು ಅವರು ವಿವರಿಸಿದ್ದಾರೆ.

ಕಬಡ್ಡಿ ಪಂದ್ಯಾವಳಿಯ ಗ್ಯಾಲರಿ ಕುಸಿದು ಓರ್ವ ಸಾವು

• 6 ಮಕ್ಕಳು ಸೇರಿ 13ಕ್ಕೂ ಹೆಚ್ಚು ಮಂದಿಗೆ ಗಾಯ • ಮಂಡ್ಯ ಬಳಿ ದುರಂತ

ಮಂಡ್ಯ, ಏ.27– ಕಬಡ್ಡಿ ಪಂದ್ಯಾವಳಿ ವೀಕ್ಷಿಸಲು ಅಳವಡಿಸಲಾಗಿದ್ದ ಪ್ರೇಕ್ಷಕರ ಗ್ಯಾಲರಿ ಕುಸಿದು ಓರ್ವ ಸಾವನ್ನಪ್ಪಿ, ಆರು ಮಕ್ಕಳು ಸೇರಿ 13ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಮಲ್ಲನಾಯಕನಕಟ್ಟೆ ಗ್ರಾಮದಲ್ಲಿ ಕಳೆದ ಶನಿವಾರ ರಾತ್ರಿ ಸಂಭವಿಸಿದೆ.



ಪಾಪಣ್ಣಚಾರ್

ಮಲ್ಲನಾಯಕನಕಟ್ಟೆ ಗ್ರಾಮದ ಪಾಪಣ್ಣಚಾರ್ (55) ಮೃತ ದುರ್ದೈವಿ. 13ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಮಂಡ್ಯ ಮಿಮ್ಸ್ ಹಾಗೂ ಸ್ಪಂದನಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಘಟನೆಯ ವಿವರ: ಮಲ್ಲನಾಯಕನಕಟ್ಟೆ ಗ್ರಾಮದಲ್ಲಿ ಕಳೆದ ಶನಿವಾರ ರಾತ್ರಿ ಅದೇ ಗ್ರಾಮದ ನಿತಿನ್, ಕಾರ್ತಿಕ್, ಜೈಶಂಕರ್, ಬಸವರಾಜು ಅವರುಗಳು ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಆಯೋಜಿಸಿದ್ದರು. ಪಂದ್ಯಾವಳಿ ವೀಕ್ಷಿಸಲು ಅದೇ ಗ್ರಾಮ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ನೆರೆದಿದ್ದರು. ಪಂದ್ಯಾವಳಿ ವೀಕ್ಷಿಸಲು ತಾತ್ಕಾಲಿಕ ವಾಗಿ ಕಬ್ಬಿಣದ ಗ್ಯಾಲರಿಗಳನ್ನು ಅಳವಡಿಸಲಾಗಿತ್ತು. ಆದರೆ, ಸಮರ್ಪಕವಾಗಿ ಗ್ಯಾಲರಿಯನ್ನು ನಿರ್ಮಿಸದ ಕಾರಣ ದಿಢೀರನೇ ಕುಸಿದು ಬಿದ್ದಿದೆ. ಘಟನೆಯಲ್ಲಿ ಕಬ್ಬಿಣದ ರಾಡುಗಳು ಬಿದ್ದು ಪಾಪಣ್ಣಚಾರ್ ಸಾವನ್ನಪ್ಪಿದರೆ, ಮೂರ್ನಾಲ್ಕು ಮಂದಿ ತೀವ್ರ ಗಂಭೀರವಾಗಿ ಗಾಯಗೊಂಡಿದ್ದಾರೆ. ಆರು ಮಕ್ಕಳು ಸೇರಿದಂತೆ 13ಕ್ಕೂ ಹೆಚ್ಚು ಮಂದಿ ■6ನೇ ಪುಟಕ್ಕೆ

ಉಪಗ್ರಹ ಆಧಾರಿತ ಟೋಲ್ ಸಂಗ್ರಹಣೆ ಸದ್ಯಕ್ಕೆ ಸಾಧ್ಯವಿಲ್ಲ



ಬೆಂಗಳೂರು,ಏ.27–ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (ಜಿಎನ್ಎಸ್ಎಸ್) ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯನ್ನು ತಕ್ಷಣದಿಂದ ಜಾರಿಗೆ ತರಲಾಗದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಈ ನಿಟ್ಟಿನಲ್ಲಿ ಪ್ರಾಯೋಗಿಕ ಅಧ್ಯಯನದ ಭಾಗವಾಗಿದ್ದ ಅಧಿಕಾರಿಗಳು, ಅನೇಕ ವಾಹನಗಳಲ್ಲಿ ಆನ್–ಬೋರ್ಡ್ ಘಟಕಗಳು (OBU) ಇಲ್ಲದಿರುವುದು ಮತ್ತು ಅವುಗಳ ನಿಖರವಾದ ಸ್ಥಳವನ್ನು ಹಂಚಿಕೊಳ್ಳುವ ಬಗ್ಗೆ ಕಾಳಜಿಗಳು ಈ ನಿರ್ಧಾರಕ್ಕೆ ಕಾರಣಗಳಾಗಿವೆ. ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಪ್ರಾರಂಭಿಸಲು ಕೆಲವು ವರ್ಷಗಳು ತೆಗೆದುಕೊಳ್ಳಬಹುದು ಎಂದಿದ್ದಾರೆ.

ಫಾಸ್ಟ್‌ಟ್ಯಾಗ್ ಸೌಲಭ್ಯದೊಂದಿಗೆ ಪ್ರಾಯೋಗಿಕ ಅಧ್ಯಯನಕ್ಕಾಗಿ ಕಳೆದ ವರ್ಷ ಬೆಂಗಳೂರು–ಮೈಸೂರು ಪ್ರವೇಶ ನಿಯಂತ್ರಿತ ಹೆದ್ದಾರಿ ಮತ್ತು ಹರಿಯಾಣದ ಪಾಣಿಪತ್–ಹಿಸಾರ್ ಹೆದ್ದಾರಿಯನ್ನು ಆಯ್ಕೆ ಮಾಡಿದ್ದೇವೆ ಎಂದು ಎನ್‌ಎಚ್‌ಎಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಸ್ತಿತ್ವದಲ್ಲಿರುವ ಟೋಲ್ ಸಂಗ್ರಹ ಸೌಲಭ್ಯಕ್ಕೆ ಹೋಲಿಸಿದರೆ, GNSS–ಆಧಾರಿತ ವ್ಯವಸ್ಥೆಯು ಪ್ರಯಾಣಿಸಿದ ದೂರವನ್ನು ಆಧರಿಸಿ ಶುಲ್ಕ ಮಾತ್ರ ಸಂಗ್ರಹಿಸುತ್ತದೆ. ವಾಹನಗಳು ಹೆದ್ದಾರಿಯ ಜಿಯೋ–ಬೇಲಿಯನ್ನು ಪ್ರವೇಶಿಸಿದಾಗ ಮತ್ತು ನಿರ್ಗಮಿಸುವಾಗ ಆನ್ ಬೋರ್ಡ್ ಘಟಕಗಳು ಸಂದೇಶಗಳನ್ನು ಕಳುಹಿಸುತ್ತವೆ. ಪ್ರಯಾಣದ ದೂರವನ್ನು ಆಧರಿಸಿ, ಟೋಲ್ ಕಡಿತಗೊಳಿಸಲಾಗುತ್ತದೆ ಅಥವಾ ಸಂಗ್ರಹಿಸಲಾಗುತ್ತದೆ. ಬೆಂಗಳೂರು–ಮೈಸೂರು ಹೆದ್ದಾರಿಯ ಒಂದು ಭಾಗವನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಲಾಗಿದೆ ಮತ್ತು ಭೂ–ಬೇಲಿ ಹಾಕಲಾಗಿದೆ. ಕಳೆದ ವರ್ಷ ಅಧ್ಯಯನ ನಡೆಸಿದ ನಂತರ ಎನ್‌ಎಚ್‌ಎಐ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಕೆಲವು ವಾಹನಗಳು ಮಾತ್ರ ಒಬಿಯುಗಳನ್ನು ಹೊಂದಿರುವ ಕಾರಣ ಯೋಜನೆಯನ್ನು ಶೀಘ್ರದಲ್ಲೇ ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ಆಯ್ದ ಟೋಲ್ ಬೂತ್‌ಗಳಲ್ಲಿ ಎನ್‌ಎಚ್‌ಎಐ ಶೀಘ್ರದಲ್ಲೇ ಸ್ವಯಂಚಾಲಿತ ನಂಬರ್ ಪ್ಲೇಟ್ ರೆಕಗ್ನಿಷನ್ ಆಧಾರಿತ ತಡೆರಹಿತ ಟೋಲಿಂಗ್ ವ್ಯವಸ್ಥೆಯನ್ನು ಪರಿಚಯಿಸಲಿದೆ ಎಂದರು.

ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೋ ವಿಶ್ವಗುರುವಾಗಿದೆ

ತಾತಯ್ಯ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಇಸ್ರೋ ವಿಜ್ಞಾನಿ ರೂಪ ಅಭಿಮತ



ಮೈಸೂರಿನ ಅನಾಥಾಲಯ ಸಭಾಂಗಣದಲ್ಲಿ ಭಾನುವಾರ ತಾತಯ್ಯ ಸ್ಮಾರಕ ಉಪನ್ಯಾಸ ಮಾಲಿಕೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನೆ ವ್ಯೋಮಯಾನ ವ್ಯವಸ್ಥೆ ವಿಷಯ ಕುರಿತು ಇಸ್ರೋ ವಿಜ್ಞಾನಿ ರೂಪ ಮಾತನಾಡಿದರು.

ಮೈಸೂರು, ಏ.27(ಬಿಎಲ್‌ಯು)– ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಇಸ್ರೋ ವಿಶ್ವಗುರುವಾಗಿ ಕೆಲಸ ಮಾಡುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ನಡೆಯುತ್ತಿರುವ ಸಂಶೋಧನೆ ಮತ್ತು ಹೊಸ ತಂತ್ರಜ್ಞಾನದಿಂದ ಅಸಾಧಾರಣ ಸಾಧನೆ ಮಾಡುತ್ತಿದೆ ಎಂದು ಇಸ್ರೋ ವಿಜ್ಞಾನಿ ಎಂ.ವಿ.ರೂಪ ಹೇಳಿದರು.

ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಅನಾಥಾಲಯ ಸಭಾಂಗಣದಲ್ಲಿ ಇಂದು ತಾತಯ್ಯ ಸ್ಮಾರಕ ಉಪನ್ಯಾಸ ಮಾಲಿಕೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನೆ ವ್ಯೋಮಯಾನ ವ್ಯವಸ್ಥೆ ವಿಷಯ ಕುರಿತು ಮಾತನಾಡಿದ ಅವರು, ಇಸ್ರೋ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿದೆ. ಇಸ್ರೋ ಮಾಡುತ್ತಿರುವ ಈ ಕಾರ್ಯದಿಂದ ಭಾರತಕ್ಕೆ ಮಾತ್ರವಲ್ಲದೆ ಬೇರೆ ದೇಶಗಳಿಗೂ ಉಪಯೋಗವಾಗುತ್ತಿದೆ ಎಂದರು.

ಈ ಮೂಲಕ ತಂತ್ರಜ್ಞಾನ ಬಳಕೆಯಲ್ಲಿ ಭಾರತ ವಿಶ್ವದಲ್ಲೆ 5ನೇ ಸ್ಥಾನದಲ್ಲಿ ಇರಬಹುದು. ಆದರೆ ಇಸ್ರೋ ಮೂಲಕ ತಂತ್ರಜ್ಞಾನವನ್ನು ವಿಶ್ವಕ್ಕೆ ಸಮರ್ಪಣೆ ಮಾಡುವಲ್ಲಿ ಭಾರತ ಅಗ್ರಸ್ಥಾನ ಪಡೆದಿದೆ ಎಂದರು.

ಈಗ ತಂತ್ರಜ್ಞಾನ ಕ್ರಾಂತಿ ಆಗುತ್ತಿದೆ. ಹಿಂದೆ ಸಂದೇಶ ಕಳುಹಿಸಲು ಹಾಗೂ ಸಂಪರ್ಕ ಸಾಧಿಸಲು ವಿಳಂಬವಾಗುತ್ತಿತ್ತು. ಆದರೆ, ಈಗ ಕ್ಷಣಾರ್ಧದಲ್ಲಿ ಮಾಹಿತಿ ರವಾನೆ ಆಗಲಿದೆ. ಇದರಿಂದ ಕೆಲವೇ ಕ್ಷಣಗಳಲ್ಲಿ ಸಂಪರ್ಕ ಸಾಧಿಸಬಹುದಾಗಿದೆ. ತಂತ್ರಜ್ಞಾನದ ಕ್ರಾಂತಿ ಮಾಡಲು ಇಸ್ರೋದಂತೆ ಇತರೆ ದೇಶಗಳು ಕಾರ್ಯಮಗ್ನರಾಗಬೇಕು ಎಂದು ಸಲಹೆ ನೀಡಿದರು.

ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದೆ. ದೇಶದ ಸಮಗ್ರ ಅಭಿವೃದ್ಧಿಗೆ ಅವಶ್ಯವಿರುವ ಎಲ್ಲಾ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿದೆ. ಇದರಿಂದ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ವಿಶ್ವದಲ್ಲೆ ಮುಂಚೂಣಿಯಲ್ಲಿದೆ ಎಂದರು.

ಉಪಗ್ರಹ ಉಡಾವಣೆಗೊಳ್ಳುವುದರಿಂದ ಹಿಡಿದು ಕೃಷಿ, ಗಣಿಗಾರಿಕೆ, ಬ್ಯಾಂಕಿಂಗ್, ಸಮುದ್ರಯಾನ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿ ಕರಾರುವಕ್ಕಾದ ಸಮಯ ಅವಶ್ಯವಿದೆ. ಸೆಕೆಂಡ್‌ನಲ್ಲಿ ಸಮಯ ತಿಳಿಯುವ ಕಾಲ ಈಗ ದೂರವಾಗಿದೆ. ಈಗ ನ್ಯಾನೊ ಸೆಕೆಂಡ್‌ನಲ್ಲಿ ಕರಾರುವಕ್ಕಾದ ಸಮಯ ತಿಳಿಯುವ ಕಾಲ ಬಂದಿದೆ ಎಂದರು.

ತಂತ್ರಜ್ಞಾನ ಕ್ಷೇತ್ರದಲ್ಲಿ ಯಾವ ರೀತಿಯ ಸಂಶೋಧನೆ ಆಗುತ್ತಿದೆ ಎಂಬುದು ಇದರಿಂದ ತಿಳಿಯುತ್ತದೆ. ತಂತ್ರಜ್ಞಾನ ಕ್ಷೇತ್ರದ ಇಂತಹ ಬೆಳವಣಿಗೆ ಜನಸಾಮಾನ್ಯರಿಗೂ ತಿಳಿಯಬೇಕು ಎಂದು ರೂಪ ತಿಳಿಸಿದರು. ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್, ಉಪಾಧ್ಯಕ್ಷ ಎನ್.ವಿ.ದಿನೇಶ್, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ನಾಳೆ ಅಪ್ಕೆ ದ್ವಾರ್–ಮಹಿಳಾ ಜನ ಸುನ್ ವಾಯಿ ಸಭೆ

ಮೈಸೂರು,ಏ.27– ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಏ.29ರಂದು ರಾಷ್ಟ್ರೀಯ ಮಹಿಳಾ ಆಯೋಗದ ವತಿಯಿಂದ ಅಪ್ಕೆ ದ್ವಾರ್–ಮಹಿಳಾ ಜನ ಸುನ್ ವಾಯಿ ಸಭೆ ನಡೆಯಲಿದೆ. ಸಭೆಯಲ್ಲಿ ನವದೆಹಲಿಯ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾದ ಶ್ರೀಮತಿ ಅರ್ಚನಾ ಮಜುಮ್ದಾರ್ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಅವರು ಮಹಿಳೆಯರ ಅಹವಾಲು ಆಲಿಸಲಿದ್ದಾರೆ. ಈ ಸಂಬಂಧ ಏ.29ರಂದು ಬೆಳಗ್ಗೆ 10ರಿಂದ ಸಭೆ ನಡೆಯಲಿದೆ. ಸದರಿ ಸಭೆಯ ಪ್ರಯೋಜನವನ್ನು ಮಹಿಳೆಯರು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು, ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಜಯನಗರ 2ನೇ ಹಂತ, ಮೈಸೂರು ಇವರಿಗೆ ನೇರ ಅಥವಾ ಕಚೇರಿ ದೂ.ಸಂ: 0821–2495432 ಅನ್ನು ಸಂಪರ್ಕಿಸಬಹುದು

ಸಾತಗಳ್ಳಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸಾತಗಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಲತಾಮಣಿ, ಉಪಾಧ್ಯಕ್ಷರಾಗಿ ನಾಗಮ್ಮ ಅವಿರೋಧವಾಗಿ ಆಯ್ಕೆಯಾದರು.

ಮೈಸೂರು, ಏ.27–ಮೈಸೂರು ತಾಲೂಕಿನ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಸಾತಗಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಲತಾಮಣಿ ಬಸವರಾಜು, ಉಪಾಧ್ಯಕ್ಷರಾಗಿ ನಾಗಮ್ಮ ಮಹಾದೇವ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಸದಸ್ಯ ಸಾತಗಳ್ಳಿ ಎನ್.ಜಯಣ್ಣ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೈಸೂರು ತಾಲೂಕು ಉಪಾಧ್ಯಕ್ಷ ಬಸವರಾಜು, ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾದ ರಾಜೇಶ್ವರಿ, ಚಂದ್ರಮ್ಮ, ಇಂದ್ರಮ್ಮ, ಶೋಭಾ, ಸಾವಿತ್ರಮ್ಮ, ತಾಯಮ್ಮ ಶಿವಮ್ಮ ಯತೇಶ್ವರಿ, ಕಾರ್ಯದರ್ಶಿಗಳಾದ ಕಾವ್ಯ, ಮೈಮುಲ್ ವಿಸ್ತರಣಾಧಿಕಾರಿ ಡಾ.ಪರಮೇಶ್, ಯುವ ಮುಖಂಡರಾದ ಮಂಜುನಾಥ್, ಗಿರೀಶ್, ಮಹದೇಸ್ವಾಮಿ, ಪವನ್, ಮಹದೇವಸ್ವಾಮಿ, ಮಹೇಶ್, ಗ್ರಾಮದ ಹಿರಿಯರಾದ ಶಾಂತಪ್ಪ, ಮಲ್ಲಿಕಾರ್ಜುನಪ್ಪ, ಬಸವರಾಜು, ಮಾಸ್ಟರ್ ನಂಜಪ್ಪ, ಪರಮೇಶ್, ಮೈಸೂರ್ ಶಿವಣ್ಣ, ಮಲ್ಲಿಕಾರ್ಜುನ, ಮಹಾದೇವ, ದೇವನೂರು ಮಹದೇವಣ್ಣ, ಹಾಲು ಪರೀಕ್ಷಕಿ ಜ್ಯೋತಿ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಮೇ 2ರ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಅನುಮೋದಿಸಿ ಜಾರಿಗೆ ಆಗ್ರಹ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್ ಆಗ್ರಹ

ಮೈಸೂರು, ಏ.27(ಬಿಎಲ್‌ಯು)– ಮೇ 2ರ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಅನುಮೋದಿಸಿ, ಜಾರಿಗೊಳಿಸಬೇಕು ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಾತಿ ಗಣತಿ ವರದಿ ಅನುಷ್ಠಾನ ಸಂಬಂಧ ರಾಜ್ಯ ಸರ್ಕಾರ ಮೇಲ್ಜಾತಿಗಳ ವಿರೋಧಕ್ಕೆ ಮಣಿಯಬಾರದು ಎಂದು ಮನವಿ ಮಾಡಿದ್ದಾರೆ. ಜನಸಂಖ್ಯೆಯಲ್ಲಿ ತಾವು ಬಲಾಢ್ಯರೆಂದು ಬಿಂಬಿಸಿಕೊಂಡ ಕೆಲವು ಜಾತಿಗಳು ಈ ತನಕ ಎಲ್ಲಾ ಅಧಿಕಾರ ಅನುಭವಿಸುತ್ತಾ ಬಂದಿವೆ. ಆದರೆ ಈಗ ಜಾತಿ ಗಣತಿಯಿಂದ ಅವರ ನಿಜ ಬಣ್ಣ ಬಯಲಾಗುತ್ತದೆ. ಅವರ ವಿರೋಧಕ್ಕೆ ಸಿದ್ದರಾಮಯ್ಯ ಮಣೆ ಹಾಕಬಾರದು ಎಂದು ಆಗ್ರಹಿಸಿದ್ದಾರೆ. ಕಳೆದ 10 ವರ್ಷಗಳ ಹಿಂದೆ ಕಾಂತರಾಜು ನೇತೃತ್ವದಲ್ಲಿ ಜಾತಿ ಗಣತಿ ಆಯೋಗ ರಚಿಸಿದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಈ ಕಾರ್ಯಕ್ಕೆ 160 ಕೋಟಿ ವಿನಿಯೋಗಿಸಿತ್ತು ಸಾವಿರಾರು ಶಿಕ್ಷಕರು ಖುದ್ದು ಮನೆ ಮನೆಗೆ ಭೇಟಿ ನೀಡಿ ಡಾಟಾ ಸಂಗ್ರಹಿಸಿದ್ದಾರೆ. ಆದರೆ, ಇದರಲ್ಲಿ ಲೋಪವಿದೆ ಎಂದು ಪ್ರಬಲ ಜಾತಿಯವರು ಅನಗತ್ಯ ವಿರೋಧ ಮಾಡುತ್ತಿದ್ದಾರೆ. ರಾಜಕೀಯ ಕಾರಣಕ್ಕೆ ಜಾತಿ ಗಣತಿ ವರದಿಯನ್ನು ವಿರೋಧಿಸುವುದನ್ನು ಬಿಜೆಪಿ ಮತ್ತು ಜೆಡಿಎಸ್ ಬಿಡಬೇಕು ಎಂದು ಕೋರಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಈಗ ರಾಜ್ಯ ಸರ್ಕಾರ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚಿಸಿದೆ. ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿರುವ ಸಿದ್ದರಾಮಯ್ಯ ಅವರ ಇಂತಹ ಐತಿಹಾಸಿಕ ತೀರ್ಮಾನಗಳು ಸ್ಮರಣೀಯವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಸ್ತೂರಿ ರಂಗನ್ ಅವರಿಗೆ ಶ್ರದ್ಧಾಂಜಲಿ



ಇಸ್ರೋ ಮಾಜಿ ಅಧ್ಯಕ್ಷ ಕೆ.ಕಸ್ತೂರಿ ರಂಗನ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಏ.27(ಎಸ್‌ಪಿಎನ್)– ಮೈಸೂರಿನ ಶ್ರೀ ರಾಮಾನುಜ ಸಹಕಾರ ಸಂಘದ ಕಚೇರಿ ಆವರಣದಲ್ಲಿ ನಿರ್ದೇಶಕರಿಂದ ಇಸ್ರೋ ಮಾಜಿ ಅಧ್ಯಕ್ಷ ಕೆ.ಕಸ್ತೂರಿ ರಂಗನ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಪ್ರವಾಸಿಗರ ಹತ್ಯಾಕಾಂಡವನ್ನು ಖಂಡಿಸಿ, ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರೀ ರಾಮಾನುಜ ಸಹಕಾರ ಸಂಘದ ಅಧ್ಯಕ್ಷ ಹೆಚ್.ಕೆ. ರಾಜಗೋಪಾಲನ್, ನಿರ್ದೇಶಕರಾದ ಕೆಆರ್.ಯೋಗನರಸಿಂಹ, ಟಿ.ಎಸ್. ಅರುಣ್, ಡಾ.ಚಕ್ರಪಾಣಿ, ಅನಂತ್ ಕೃಷ್ಣ, ಆಂಡಾಳ್, ಅನುರಾಧ, ಲಕ್ಷ್ಮಿ ಉಪಸ್ಥಿತರಿದ್ದರು.

ಉಗ್ರರ ದಾಳಿ ಖಂಡಿಸಿ ರಾಜಸ್ಥಾನ ಸಂಘದಿಂದ ಪ್ರತಿಭಟನಾ ಮೆರವಣಿಗೆ



ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿ ಖಂಡಿಸಿ ಮೈಸೂರು ರಾಜಸ್ಥಾನ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.27(ಜಿಎ)–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿ ಖಂಡಿಸಿ ಮೈಸೂರು ರಾಜಸ್ಥಾನ ಸಂಘದಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ, ಉಗ್ರರ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಉಗ್ರರ ದಾಳಿಯನ್ನು ಖಂಡಿಸುವುದರ ಬದಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಿ ಇಲ್ಲಸಲ್ಲದ ಆರೋಪ ಮಾಡುತ್ತಿದೆ. ಇದನ್ನು ನಾವು ಸಹಿಸುವುದಿಲ್ಲ. ಈ ಕೂಡಲೇ ರಾಜ್ಯ ಸರ್ಕಾರವು ತಮ್ಮ ಅನುಯಾಯಿಗಳು ಕೇಂದ್ರ ಸರ್ಕಾರದ ವಿರುದ್ಧ ಮಾಡುತ್ತಿರುವ ಆರೋಪಗಳನ್ನು ನಿಲ್ಲಿಸಿ ಎಂದು ತಿಳಿ ಹೇಳಬೇಕು. ಈ ಸಾವಿನ ವಿಷಯದಲ್ಲೂ ರಾಜಕೀಯ ಮಾಡಬಾರದು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಹೀರಾಲಾಲ್, ರವಿ, ಅನಿಲ್ ಜೈನ್, ಪುಟ್ಟರಮಾಲ್, ಸತೀಶ್ ಜೈನ್, ನವೀನ್ ನೂರಾರು ಮಂದಿ ಪಾಲ್ಗೊಂಡಿದ್ದರು.

ಇಂದು ಸೈನ್ಸ್ ಆಫ್ ಸ್ಕೂಲಿಂಗ್ ಸಮ್ಮೇಳನ

ಮೈಸೂರು,ಏ27(ಎಂಟಿವೈ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಶತಮಾನೋತ್ಸವದಲ್ಲಿ ಏ.28ರಂದು ಬೆಳಗ್ಗೆ 9ರಿಂದ ಸಂಜೆ 7 ಗಂಟೆವರೆಗೆ ಸೈನ್ಸ್ ಆಫ್ ಸ್ಕೂಲಿಂಗ್ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೈನ್ಸ್ ಆಫ್ ಸ್ಕೂಲಿಂಗ್ ಫೌಂಡೇಶನ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಸೈನ್ಸ್ ಆಫ್ ಸ್ಕೂಲಿಂಗ್ ಸಮ್ಮೇಳನ ನಡೆಸಲಾಗುತ್ತಿದ್ದು, ಅಂದು ಬೆಳಗ್ಗೆ 9.15ಕ್ಕೆ ಸಮ್ಮೇಳನ ಆರಂಭಗೊಳ್ಳಲಿದೆ. ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಅವರಿಗೆ 'ಲೆಜೆಂಡ್ ಆಫ್ ಎಜುಕೇಶನ್ ಅವಾರ್ಡ್' ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ ಎಂದರು.

ಈ ಸಮ್ಮೇಳನದಲ್ಲಿ ಕಾಗ್ನಿಟಿವ್ ಎಥೀರಿಯಾಲಿಟಿ, ಟೆಂಪೋರಲ್ ಸೈನರ್ಜಿ, ಫೆನೊಮೆನಲ್ ಕಂಟಿನ್ಯೂಮ್, ಟ್ರಾನ್ಸೆಂಡೆಂಟ್ ಪ್ರಾಕ್ಸಿಸ್ ವಿಷಯ ಸೇರಿದಂತೆ ಇನ್ನಿತರ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ. ಶಿಕ್ಷಣ ತಜ್ಞರು, ಕಾನೂನು ಸಲಹೆಗಾರರು, ಚಿಂತಕರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ 400ಕ್ಕೂ ಹೆಚ್ಚು ಪರಿಣತರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಆರ್.ನರಸಿಂಹ, ಸೈನ್ಸ್ ಆಫ್ ಸ್ಕೂಲಿಂಗ್ ಫೌಂಡೇಶನ್ ನಿರ್ದೇಶಕ ಡಾ.ಆರ್.ದೀಪಕ್‌ಕುಮಾರ್ ಇದ್ದರು.

ಆರ್ಥಿಕ ಸಂಕಷ್ಟದ ಕಾರಣ ಮುಚ್ಚುವ ಸ್ಥಿತಿಗೆ ಮೈಸೂರು ವಿಶ್ವವಿದ್ಯಾನಿಲಯ

ಅಗತ್ಯ ಅನುದಾನ ನೀಡುವಂತೆ ಸಿಎಂಗೆ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್ ಮನವಿ


ಮೈಸೂರು, ಏ.27(ಬಿಎಲ್‌ಯು)– ಆರ್ಥಿಕ ಸಂಕಷ್ಟದಿಂದ ಮುಚ್ಚುವ ಸ್ಥಿತಿಗೆ ಬಂದಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಗತ್ಯ ಅನುದಾನ ನೀಡುವಂತೆ ಮೈಸೂರು ವಿವಿ ಸಿಂಡಿಕೇಟ್ ಸದಸ್ಯರೂ ಆದ ಹಿರಿಯ ವಕೀಲ ಕೆ.ಗೋಕುಲ್ ಗೋವರ್ಧನ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಮಹದೇಶ್ವರಬೆಟ್ಟದಲ್ಲಿ ಮೊನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮೈಸೂರು ಭಾಗದ ಅಭಿವೃದ್ಧಿಗೆ 3,647 ಕೋಟಿ ಯೋಜನೆಗೆ ಅನುಮೋದನೆ ನೀಡಿದ್ದಾರೆ. ಮೈಸೂರಿನವರೇ ಆದ ಸಿದ್ದರಾಮಯ್ಯ, ಆರ್ಥಿಕ ಸಂಕಷ್ಟದಲ್ಲಿರುವ ಮೈಸೂರು ವಿವಿಗೆ ನಯಾಪೈಸೆ ಹಣ ನೀಡಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

108 ವರ್ಷಗಳ ವರ್ಣರಂಜಿತ ಇತಿಹಾಸವಿರುವ ಮೈಸೂರು ವಿವಿಯನ್ನು ಸಿದ್ದರಾಮಯ್ಯ ಮರೆತಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಬಜೆಟ್‌ನಲ್ಲೂ ಯಾವುದೇ ಅನುದಾನ ನೀಡಿಲ್ಲ. ಮೈಸೂರು ಭಾಗದ ಅಭಿವೃದ್ಧಿಗೆ ಒತ್ತು ನೀಡುವ ಸಲುವಾಗಿ ಮಹದೇಶ್ವರ ಬೆಟ್ಟದಲ್ಲಿ ನಡೆಸಿದ ಸಚಿವ ಸಂಪುಟದಲ್ಲೂ ಐತಿಹಾಸಿಕ ವಿವಿಗೆ ಹಣ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಶ್ವವಿದ್ಯಾನಿಲಯದಲ್ಲಿ ಖಾಯಂ ಪ್ರಾಧ್ಯಾಪಕರಿಲ್ಲದೆ ಉತ್ತಮ ಬೋಧನೆ, ಸಂಶೋಧನೆ ಸಾಧ್ಯವಾಗುತ್ತಿಲ್ಲ. ಇದರಿಂದ ಶೈಕ್ಷಣಿಕ ಚಟುವಟಿಕೆ ಕುಂಠಿತವಾಗಿದೆ. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕೊರತೆಯಿಂದ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿದೆ. ನ್ಯಾಕ್ ರ್‍ಯಾಂಕಿಂಗ್‌ನಲ್ಲೂ ತನ್ನ ಸ್ಥಾನ ಕಳೆದು ಕೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಆರ್ಥಿಕ ಸಂಕಷ್ಟದಿಂದ ಪಾರಾಗಲು ಅಗತ್ಯ ಅನುದಾನ ನೀಡಬೇಕು ಎಂದು ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಸಿದ್ದರಾಮಯ್ಯನವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಹಳೇ ಪುಸ್ತಕಗಳ ಗುಜರಿಗೆ ಹಾಕುವ ಬದಲು ಸೈಯದ್ ಇಸಾಕ್ ಗ್ರಂಥಾಲಯಕ್ಕೆ ನೀಡಿ



ವಿಶ್ವ ಪುಸ್ತಕ ದಿನದ ಅಂಗವಾಗಿ ಕನ್ನಡ ಪ್ರೇಮಿ ಸೈಯದ್ ಇಸಾಕ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.


ಮೈಸೂರು, ಏ.27– ಮೈಸೂರು ನಗರದ ಉದಯಗಿರಿಯಲ್ಲಿರುವ ಕನ್ನಡ ಪ್ರೇಮಿ ಸೈಯದ್ ಇಸಾಕ್‌ರವರ ಗ್ರಂಥಾಲಯದಲ್ಲಿ ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ 'ದೇಶ ನೋಡು ಕೋಶ ಓದು' ಅಭಿಯಾನ ಆಯೋಜಿಸಲಾಗಿತ್ತು.

ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರ ಮತ್ತು ಕೆಎಂಪಿಕೆ ಟ್ರಸ್ಟ್ ವತಿಯಿಂದ ಹಲವು ಸಾಹಿತ್ಯ ಕೃತಿಗಳು ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪಠ್ಯ ಪುಸ್ತಕಗಳನ್ನು ಸೈಯದ್ ಇಸಾಕ್ ಅವರ ಗ್ರಂಥಾಲಯಕ್ಕೆ ನೀಡಲಾಯಿತು.

ಕನ್ನಡಪ್ರೇಮಿ ಸೈಯದ್ ಇಸಾಕ್ ಮಾತನಾಡಿ, ಶಿಕ್ಷಣ ಎನ್ನುವುದು ದೇಶದ ಪ್ರತಿಯೊಂದು ಮಗುವಿಗೂ ಸಿಗಬೇಕು. ನಮ್ಮ ಬಳಿ ಇರುವ ಸಂಪತ್ತು, ಅಂತಸ್ತು, ಅಧಿಕಾರವನ್ನು ಯಾರಾದರೂ ಕಸಿದುಕೊಳ್ಳಬಹುದು. ಆದರೆ ನಮ್ಮಲ್ಲಿರುವ ಜ್ಞಾನ, ವಿದ್ಯೆ, ಪದವಿಯನ್ನು ಯಾರೂ ಕಿತ್ತುಕೊಳ್ಳಲು ಆಗುವುದಿಲ್ಲ. ನಮ್ಮ ಗ್ರಂಥಾಲಯಕ್ಕೆ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಕಳೆದ ಒಂದು ವರ್ಷದಿಂದ ಕನ್ನಡ ದಿನಪತ್ರಿಕೆಗಳನ್ನು ಓದುಗರಿಗಾಗಿ ನೀಡುತ್ತಾ ಸೇವೆ ಸಲ್ಲಿಸುತ್ತಾ ಬಂದಿದೆ. ಸರ್ಕಾರಿ ಕಾರ್ಯಕ್ರಮಗಳು, ಶುಭ ಸಮಾರಂಭಗಳು ಮತ್ತು ಹುಟ್ಟುಹಬ್ಬಗಳಲ್ಲಿ ಕನ್ನಡ ಪುಸ್ತಕಗಳನ್ನ ಉಡುಗೊರೆಯಾಗಿ ನೀಡುವ ಸಂಪ್ರದಾಯ ರೂಢಿಸಿಕೊಳ್ಳೋಣ. ಇದರಿಂದ ನಾಡಿನ ಕವಿಗಳು, ಸಾಹಿತಿಗಳನ್ನು ಪ್ರೋತ್ಸಾಹಿಸಬಹುದು ಎಂದರು.

ಜೀವಧಾರ ರಕ್ತನಿಧಿ ಕೇಂದ್ರದ ಗಿರೀಶ್ ಮಾತನಾಡಿದರು. ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ಪಾಲಿಕೆ ಮಾಜಿ ಸದಸ್ಯ ರಘು ರಾಜೇ ಅರಸ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್‌ಶಾಸ್ತ್ರಿ, ದುರ್ಗಾಪ್ರಸಾದ್, ರಾಕೇಶ್, ರಾಜೇಶ್ ಹಾಗೂ ಇನ್ನಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.04.2025 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ, ಅಭಿನವ ಶಂಕರಾಲಯ:** ಶ್ರೀ ಶಂಕರ ಜಯಂತ್ಯುತ್ಸವ–2025, ಬೆಳಗ್ಗೆ 7 ಗಂಟೆಯಿಂದ ಶ್ರೀ ಶಂಕರ ಸನ್ನಿಧಿಯಲ್ಲಿ ಮಹಾನ್ಯಾಸ ಪೂರ್ವಕ ಏಕದಶವಾರ, ರುದ್ರಾಭಿಷೇಕ, ರುದ್ರಕ್ರರೂರ್ಚನೆ, ವೇದ ಪಾರಾಯಣಗಳು, ಭಾಷ್ಯಾ ಪಾರಾಯಣಗಳು, ಶ್ರೀ ಶಂಕರ ವಿಜಯ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ನವಗ್ರಹ ಜಪ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ರಿಂದ ಉಪನ್ಯಾಸ ಮಾಲಿಕೆ, ಬೆಂಗಳೂರಿನ ವಿದುಷಿ ಶ್ರೀಮತಿ ರಮ್ಯಾ ಅವರಿಂದ, ವಿಷಯ: ಅದ್ವೈತ ಮತ್ತು ಶಂಕರ ವೇದಾರ್ಥದ ಬೆಳಕಿನಲ್ಲಿ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯುಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪುನಶ್ಚೇತನ (ರೆಜುವಿನೇಷನ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ಸಂಘ ಸಂಸ್ಥೆಗಳು, ಮೈಸೂರು :** ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ 30ನೇ ಪುಣ್ಯಾರಾಧನೆ ಹಾಗೂ ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯುತ್ಸವ, ದಿವ್ಯ ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳು, ಬೆಳಗ್ಗೆ 6 ಗಂಟೆಗೆ ಪೂಜ್ಯ ಶ್ರೀ ಗುರುಶಾಂತ ಮಹಾಸ್ವಾಮಿಗಳವರ ಗದ್ದುಗೆಗೆ ವಿಶೇಷ ಪೂಜೆ, ಬೆಳಗ್ಗೆ 9 ಗಂಟೆಗೆ ಲಿಂಗಾಯತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ, ನೇತೃತ್ವ: ಶ್ರೀ ಬೆಟ್ಟದ ಮಠದ ಶ್ರೀ ಗೌರಿಶಂಕರ ಸ್ವಾಮಿಗಳು, ಬೆಳಗ್ಗೆ 11 ಗಂಟೆಗೆ ಅಕ್ಕಮಹಾದೇವಿ ಜಯಂತಿ, ಉದ್ಘಾಟನೆ: ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಶ್ರೀಮತಿ ಎನ್.ಕೆ.ಲೋಲಾಕ್ಷಿ, ಸ್ಥಳ: ಶ್ರೀ ಹೊಸಮಠ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮೇಲುಕೋಟೆ ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮೈಸೂರು ಜಿಲ್ಲಾ ಪ್ರತಿನಿಧಿ ಡಾ.ಲಕ್ಷ್ಮಿದೇವಿ, ಡಿ.ಟಿ.ಪ್ರಕಾಶ್, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ರಾಜೇಶ್ವರಿ ಹೆಗಡೆ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ–ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, ಕಿಡ್ನಿ–ಸಮಸ್ಯೆಗಳು, ಕಾರಣಗಳು, ಲಕ್ಷಣಗಳ ಈ ಕುರಿತು ಬೆಂಗಳೂರಿನ ಟ್ರಸ್ಟ್‌ವೆಲ್, ಆಸ್ಪತ್ರೆಯ ಮೂತ್ರಪಿಂಡ ತಜ್ಞರಾದ ಡಾ.ಸಯೀದ ಹುರ್ಮತ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ನಿರ್ಮಲ ಎಸ್., 8.30–ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ, ವಿಷಯ: ಯೋಗ ಮತ್ತು ಥೈರಾಯ್ಡ್ ಭಾಗವಹಿಸುತ್ತಾರೆ–ರಾಜಶ್ರೀ ಪ್ರಸಾದ್, ನಿರ್ಮಾಣ–ನಂದನ್ ಕುಮಾರ್. ಎಲ್.ಒ., 8.35–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಪ್ರೊ.ಲಿಂಗದೇವರು ಹಳೆಮನೆ ಅವರು ನಡೆಸಿದ್ದ ಸಂವಾದ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು. ಎಸ್.ರಾಜಲಕ್ಷ್ಮಿ, ವೀಣಾ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, 12.05–ವನಿತಾ ವಿಹಾರ–ಸ್ವ ಉದ್ಯೋಗಿ ಉಪ್ಪಿನ ಬೆಟಗೇರಿಯ ಝಾನ್ಸಿ ಲಕ್ಷ್ಮಿ ಹೂಗಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಮಂಜುಳಾ ಪುರಾಣಿಕ್, 12.35–ದೇವರ ನಾಮ, 12.45–ನಮ್ಮ ಆರೋಗ್ಯ–ವಿಶ್ವ ಥಲೆಸೀಮಿಯಾ ದಿನಾಚರಣೆ ಸಂಬಂಧವಾಗಿ ಕಾರ್ಯಕ್ರಮ. ಥಲೆಸೀಮಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮೈಸೂರು ಘಟಕದ ಖಜಾಂಚಿ ಡಾ.ಶರತ್‌ಕೀರ್ತಿ. ಆರ್ ಮತ್ತು ಮಕ್ಕಳ ಹೆಮಟಾಲಜಿಸ್ಟ್ ಮತ್ತು ಅಂಕಾಲಜಿಸ್ಟ್ ಡಾ.ಸೌಮ್ಯ. ಜೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಸರ್ವರಿಗೂ ಸೂರು ಯೋಜನೆ ಕುರಿತು ಮಾಹಿತಿ, 1.20–ಭಾವಗೀತೆಗಳು, ಶೈಲಾ ಸಿದ್ಧರಾಮಪ್ಪ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಟಿ.ಹರೀಶ್, ಸ್ಯಾಕ್ಸೋಫೋನ್ ವಾದನ, 4.00–ಮಹಿಳಾರಂಗ, ಹೀಗಿದೆ ನೋಡಿ ನಮ್ ಜೋಡಿ ಸಮಾಜಸೇವೆಯಲ್ಲಿ ನಿರತರಾಗಿರುವ ದಂಪತಿಗಳಾದ ಪರಿಮಳಮೂರ್ತಿ ಹಾಗೂ ವೆಂಕಟೇಶಮೂರ್ತಿ, ಪ್ರಸ್ತುತಿ: ಕೀರ್ತನಾ, 4.45–ಹಿಂದಿ ಪಾಠ–ಪ್ರಸ್ತುತಿ: ಎಸ್. ಈಶ್ವರಭಟ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಹನಿ ನೀರಾವರಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ, ಬೇಸಾಯ ತಜ್ಞರಾದ ಪಾಂಡುರಂಗ ವಿಠಲ ಜೋಶಿ ಮತ್ತು ಮಳವಳ್ಳಿ ತಾಲೂಕು ಬಿ.ಜಿ.ಪುರ ಹೋಬಳಿ ರಾವಣಿ ಗ್ರಾಮದ ರಮೇಶ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ –ಮೈಸೂರು ವಿಶ್ವವಿದ್ಯಾಲಯದ 105ನೇ ಘಟಿಕೋತ್ಸವದಲ್ಲಿ ಬ್ಯಾಚಲರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ವಿಷಯದಲ್ಲಿ ಪ್ರಥಮ rankನೊಂದಿಗೆ 4 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಕಲ್ಯಾಣಿ. ಹೆಚ್.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಹಾಡುಗಾರಿಕೆ, 10.00 ರೂಪಕ–ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ: ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು, ಹಳೆಯ ಕನ್ನಡ ಚಿತ್ರಗೀತೆಗಳು.

■ **ಬಿಎಸ್‌ಎಸ್ ವಿದ್ಯೋದಯ :** ಭಗಿನಿ ಸಂಗೀತೋತ್ಸವ, ವಿದುಷಿ ಸ್ಮೃತಿ ಭಾಸ್ಕರ್ ಮತ್ತು ತಂಡದಿಂದ ಗಾಯನ, ಸ್ಥಳ: ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ಬೆಂಗಳೂರಿನ ವಿಲ್‌ಕಾರ್ಟ್ ಫೌಂಡೇಷನ್, ಮೈಸೂರು ವಿಶ್ವವಿದ್ಯಾನಿಲಯ :** ಮೈಸೂರು ವಿಶ್ವವಿದ್ಯಾನಿಲಯದ ಸ್ವಚ್ಛತಾ ಸಿಬ್ಬಂದಿಗೆ ಉಚಿತ ನೇತ್ರ ತಪಾಸಣಾ ಶಿಬಿರ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮೈಸೂರು ವಿವಿ, ಮಧ್ಯಾಹ್ನ 1 ಗಂಟೆಗೆ.

ಮೈಸೂರು ಮಿತ್ರ ಸೋಮವಾರ 28 ಏಪ್ರಿಲ್ 2025

ಅಕ್ಕಮಹಾದೇವಿ ಜಯಂತಿ

ಅನುಭವ ಮಂಟಪದ ಗೌರವಕ್ಕೆ ಪಾತ್ರರಾದವರು ಅಕ್ಕಮಹಾದೇವಿ

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಮೈಸೂರಿನ ಜೆಪಿ ನಗರ ನಾಚನಹಳ್ಳಿಪಾಳ್ಯದ ಜೆಎಸ್‌ಎಸ್ ಪ್ರೌಢಶಾಲೆ ಆವರಣದಲ್ಲಿ ನಾದಹಂಸಿನಿ ಭಜನಾ ಸಂಘದ ವಾರ್ಷಿಕೋತ್ಸವ ಹಾಗೂ ಅಕ್ಕಮಹಾದೇವಿಯವರ ಜಯಂತಿ ಕಾರ್ಯಕ್ರಮ ಭಾನುವಾರ ನಡೆಯಿತು.

ಮೈಸೂರು, ಏ.27(ಪಿಎಂ)– ಅಕ್ಕಮಹಾದೇವಿ 12ನೇ ಶತಮಾನದ ಶರಣ ಚಳವಳಿಯಲ್ಲಿ ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಇಡೀ ಅನುಭವ ಮಂಟಪದ ಗೌರವಕ್ಕೆ ಪಾತ್ರರಾದವರು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಜೆಪಿ ನಗರ ನಾಚನಹಳ್ಳಿ ಪಾಳ್ಯದ ಜೆಎಸ್‌ಎಸ್ ಪ್ರೌಢಶಾಲೆ ಆವರಣದಲ್ಲಿ ಜೆಪಿ ನಗರದ ನಾದಹಂಸಿನಿ ಭಜನಾ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಂಘದ 12ನೇ ವಾರ್ಷಿಕೋತ್ಸವ ಹಾಗೂ ಅಕ್ಕಮಹಾದೇವಿಯವರ ಜಯಂತಿ ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಒಬ್ಬ ಹೆಣ್ಣು ಮಗಳು ಸಂಕಲ್ಪ ಮಾಡಿ, ಬದ್ಧತೆಯಿಂದ ನಡೆದುಕೊಂಡರೆ ಹೇಗೆ ಲೋಕ ಪೂಜ್ಯರಾಗಬಹುದು ಎಂಬುದಕ್ಕೆ ಅಕ್ಕಮಹಾದೇವಿಯವರು ಒಂದು ಉದಾಹರಣೆ. ತಮ್ಮ ಒಂದೊಂದು ವಚನಗಳಲ್ಲೂ ಅಕ್ಕಮಹಾದೇವಿ ವೈರಾಗ್ಯದ ಭಾವನೆಗಳನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ಅಂದು ಎಲ್ಲಾ ರೀತಿಯ ಕಠಿಣ ಪರೀಕ್ಷೆಗಳನ್ನೂ ಯಶಸ್ವಿಯಾಗಿ ಎದುರಿಸಿ, ಎಲ್ಲಾ ಲೌಕಿಕ ಸಂಗತಿಗಳನ್ನು ಮೀರಿ ಹೆಣ್ಣು ಮಗಳು ಬೆಳೆಯಲು ಸಾಧ್ಯವಿದೆ ಎಂದು ಅಕ್ಕಮಹಾದೇವಿ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ ಎಂದರು.

ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನನೇ ತನಗೆ ಸರ್ವಸ್ವ ಎಂದು ಭಾವಿಸಿ ಸಮರ್ಪಣೆ ಮಾಡಿಕೊಂಡರು. ವೀರ ವೈರಾಗ್ಯದ ಸ್ವರೂಪ ತಳೆದವರು. ಕಲ್ಯಾಣಕ್ಕೆ ಬಂದು ಶ್ರೀಶೈಲದ ಕದಳಿಯಲ್ಲಿ ಐಕ್ಯವಾದರು. ಅಕ್ಕ ಐಕ್ಯವಾದಂತಹ ಕದಳಿಗೆ ಬಹಳ ಜನ ಹೋಗಲು ಬಯಸುತ್ತಾರೆ. ಆದರೆ ಅಲ್ಲಿಗೆ ಹೋಗಿ ಬರಲು ಬಹಳ ತ್ರಾಸದಾಯಕ ಎಂದು ಹೇಳುತ್ತಾರೆ. ಸರ್ಕಾರ ಸಾಕಷ್ಟು ಸೌಲಭ್ಯ ಕಲ್ಪಿಸಿದ್ದರೂ ಕದಳಿಯ ಗುಹೆಗಳಿಗೆ ಹೋಗಿ ಬರುವುದೇ ಒಂದು ಸಾಹಸ. ಆದರೆ ಅಂದು ಯಾವುದೇ ಸೌಲಭ್ಯಗಳು ಇಲ್ಲದ ಸಂದರ್ಭದಲ್ಲಿ ಏಕಾಂಗಿಯಾಗಿ ತಪಸ್ಸು ಆಚರಿಸಲು ಅಕ್ಕಮಹಾದೇವಿಯವರು ಹೋಗಿದ್ದು ಸಾಮಾನ್ಯ ಸಂಗತಿಯಲ್ಲ ಎಂದು ತಿಳಿಸಿದರು.

ಅಕ್ಕಮಹಾದೇವಿಯವರು ಅನುಭವ ಮಂಟಪವನ್ನು ಪ್ರವೇಶಿಸಿದಾಗ ಅವರನ್ನು ಎಲ್ಲರೂ ಪ್ರಶ್ನಾರ್ಥಕವಾಗಿ ನೋಡುತ್ತಿದ್ದರು. ಅಂತಹ ಪ್ರಶ್ನೆಗಳಿಗೆ ಅವರು ಸಮರ್ಥವಾಗಿ ಉತ್ತರ ಪ್ರಸ್ತುತಪಡಿಸಿದರು. ಅನುಭವ ಮಂಟಪದಿಂದ ಅಕ್ಕಮಹಾದೇವಿಯವರು ನಿರ್ಗಮಿಸುವಾಗ ಅವರಿಗೆ ಇಡೀ ಅನುಭವ ಮಂಟಪ ಸಲ್ಲಿಸಿದ ಗೌರವವು ಅಕ್ಕಮಹಾದೇವಿಯವರ ಮೇರು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು.

ಸಂಗೀತ-ಭಕ್ತಿಯ ಸಮ್ಮಿಶ್ರಣ: ಭಜನೆಯು ಮನುಷ್ಯನ ಮನಸ್ಸನ್ನು ಸಂಪೂರ್ಣವಾಗಿ ಪರಿವರ್ತಿಸಬಲ್ಲದು. ಅಂತಹ ಸಾಮರ್ಥ್ಯ ಅದಕ್ಕಿದೆ. ಶಾಸ್ತ್ರೀಯತೆ ಕಡೆಗೇ ಹೆಚ್ಚು ಒತ್ತು ಕೊಡುವ ಅಂಶಗಳನ್ನು ಭಜನೆ ಒಳಗೊಂಡಿರುತ್ತದೆ. ಭಜನೆಯು ಸಂಗೀತ ಮತ್ತು ಭಕ್ತಿಯ ಸಮ್ಮಿಶ್ರಣವಾದ್ದರಿಂದ ಮನುಷ್ಯನನ್ನು ಉತ್ತುಂಗ ಲೋಕಕ್ಕೆ ಕೊಂಡೊಯ್ಯುವಂತಹ ಸಾಮರ್ಥ್ಯ ಹೊಂದಿದೆ. ಭಗವಂತನ ಸಾಕ್ಷಾತ್ಕಾರಕ್ಕೆ ಅನೇಕ ಮಾರ್ಗಗಳಿವೆ. ಅದರಲ್ಲಿ ಭಕ್ತಿ ಮಾರ್ಗ ಬಹಳ ಸುಲಭವಾದುದು. ಭಗವಂತನ ನಾಮ ಸ್ಮರಣೆ ಮಾಡುವ ಭಜನೆಯಲ್ಲಿ ಭಕ್ತಿ ಮಾರ್ಗವಿದೆ ಎಂದು ಸುತ್ತೂರು ಶ್ರೀಗಳು ವಿಶ್ಲೇಷಿಸಿದರು.

ಇದೇ ವೇಳೆ ವಿವಿಧ ಮಹಿಳಾ ಬಳಗದ ಅಧ್ಯಕ್ಷರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಸಮಾಜ ಸೇವಕಿ ಸುಧಾ ಮೃತ್ಯುಂಜಯಪ್ಪ, ನಗರಪಾಲಿಕೆ ಮಾಜಿ ಸದಸ್ಯರೂ ಆದ ದಾರಿದೀಪ ಟ್ರಸ್ಟ್‌ನ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್, ನಗರಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ ಈಶ್ವರ್, ನಾದಹಂಸಿನಿ ಭಜನಾ ಸಂಘದ ಅಧ್ಯಕ್ಷೆ ಉಮಾ ಮಹದೇವಸ್ವಾಮಿ, ಉಪಾಧ್ಯಕ್ಷೆ ಮಂಜುಳಾ ಶಿವಕುಮಾರಸ್ವಾಮಿ ಮತ್ತಿತರರು ಹಾಜರಿದ್ದರು.

ಮೈಸೂರಿನ ಅಶೋಕಪುರಂನಲ್ಲಿ ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರು ಅಶೋಕಪುರಂನ ಡ್ರೀಮ್ ಬಾಯ್ಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ ಅಂಗವಾಗಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಹುಮಾನ ವಿತರಿಸಿದರು.

ಮೈಸೂರು, ಏ.27– ಮೈಸೂರಿನ ಅಶೋಕಪುರಂ 9ನೇ ಕ್ರಾಸ್‌ನಲ್ಲಿ ಡ್ರೀಮ್ ಬಾಯ್ಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿ, ಡಾ.ಅಂಬೇಡ್ಕರ್ ಜಯಂತ್ಯುತ್ಸವದ ಅಂಗವಾಗಿ ನಡೆಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಇದೇ ವೇಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿಜಯಕುಮಾರ್, ಲಸಿತ, ಹರ್ಷಿಣಿ, ಪೂರ್ವಜ್, ಸಂಜನಾ, ಪ್ರೀತು ಶಿವಪ್ರಸಾದ್ ಅವರನ್ನು ಪುರಸ್ಕರಿಸಲಾಯಿತು.

ಈ ವೇಳೆ ಕ್ಲಬ್‌ನ ಪದಾಧಿಕಾರಿಗಳಾದ ದಾಮೋದರ, ಹರ್ಷ, ಮಿಥುನ್ ಚಕ್ರವರ್ತಿ, ಶಿವಪ್ರಸಾದ್, ಮಹೇಂದ್ರ, ಚೇತನ್, ಪ್ರವೀಣ್, ಅವಿನಾಶ್, ಧನರಾಜ್, ದಯಾನಂದ, ರವಿಕುಮಾರ್, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಸ್ಪರ್ಧಾ ವಿಜೇತರು: ಮುದ್ದೆ ತಿನ್ನುವ ಸ್ಪರ್ಧೆಯಲ್ಲಿ ಸುರೇಶ್(ಪ್ರಥಮ), ಯೋಗೇಶ್(ದ್ವಿತೀಯ), ರಂಗೋಲಿ ಸ್ಪರ್ಧೆಯಲ್ಲಿ ಪದ್ಮ(ಪ್ರ), ಯಮುನಾ(ದ್ವಿ), ಮೋನಿಕಾ(ತೃ), ಮ್ಯೂಸಿಕಲ್ ಚೇರ್ ಮಕ್ಕಳ ವಿಭಾಗದಲ್ಲಿ ಶಿಂಬ(ಪ್ರ), ಅಪ್ಪು(ದ್ವಿ), ಋಷಿ(ತೃ), ವಯಸ್ಕರ ವಿಭಾಗದಲ್ಲಿ ಸೌಮ್ಯ(ಪ್ರ), ಪವಿತ್ರಾ(ದ್ವಿ), ಮೇಘ(ತೃ), ಮಡಿಕೆ ಹೊಡೆಯುವ ಸ್ಪರ್ಧೆಯಲ್ಲಿ ವರ್ಷಿಣಿ(ಪ್ರ), ಹರ್ಷಿಕಾ(ದ್ವಿ) ಹಾಗೂ ಜಾನ್ವಿ(ತೃ) ಬಹುಮಾನ ಪಡೆದರು.

ಜಮ್ಮು-ಕಾಶ್ಮೀರದ ಪ್ರಗತಿ ಶತ್ರುಗಳ ಕಣ್ಣು ಕೆಂಪಗಾಗಿಸಿದ್ದು, ನಾಶಪಡಿಸಲು ಹತಾಶ ಯತ್ನ ನಡೆಸುತ್ತಿದ್ದಾರೆ

ಮನ್ ಕೀ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಆಕ್ರೋಶ

ನವದೆಹಲಿ, ಏ.27– ಜಮ್ಮು ಮತ್ತು ಕಾಶ್ಮೀರದ ಪ್ರಗತಿ ಶತ್ರುಗಳ ಕಣ್ಣು ಕೆಂಪಗಾಗುವಂತೆ ಮಾಡಿದ್ದು, ಇದರಿಂದಾಗಿ ನಾಶಪಡಿಸಲು ಹತಾಶ ಪ್ರಯತ್ನ ನಡೆಸುತ್ತಿದ್ದಾರೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭೀಕರ ದಾಳಿಯನ್ನು ತಮ್ಮ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ ಮೋದಿ, ಉಗ್ರರ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇದೇ ವೇಳೆ ಉಗ್ರರ ದಾಳಿಯಲ್ಲಿ ಮೃತಪಟ್ಟವರಿಗೆ ನ್ಯಾಯ ಸಿಗುತ್ತೆ, ಉಗ್ರರಿಗೆ ಕಠಿಣ ಶಿಕ್ಷೆ ಕೊಟ್ಟೇ ಕೊಡುತ್ತೇವೆಂದು ಭರವಸೆ ನೀಡಿದ್ದಾರೆ.

ಕಾಶ್ಮೀರದ ಪ್ರಗತಿಯಿಂದ ಕೆಲವು ಶತ್ರುಗಳು ಸಂತೋಷವಾಗಿಲ್ಲ. ಏ.22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ಘಟನೆಯು ದೇಶದ ಪ್ರತಿಯೊಬ್ಬ ನಾಗರಿಕನನ್ನು ದುಃಖಿತನನ್ನಾಗಿ ಮಾಡಿದೆ. ಈ ಭಯೋತ್ಪಾದಕ ದಾಳಿಯ ಚಿತ್ರಗಳನ್ನು ನೋಡಿದ ನಂತರ ಪ್ರತಿಯೊಬ್ಬ ಭಾರತೀಯನ ರಕ್ತ ಕುದಿಯುತ್ತಿದೆ ಎಂದು ನನಗೆ ತಿಳಿದಿದೆ. ಈ ದಾಳಿಯು ಭಯೋತ್ಪಾದನಾ ಚಟುವಟಿಕೆಯ ಹತಾಶೆಯನ್ನು ತೋರಿಸುತ್ತದೆ, ಅವರ ಹೇಡಿತನವನ್ನು ತೋರಿಸುತ್ತದೆ. ದೇಶದ ಏಕತೆ 140 ಕೋಟಿ ಭಾರತೀಯರ ಒಗ್ಗಟ್ಟು ಭಯೋತ್ಪಾದನೆಯ ವಿರುದ್ಧದ ಈ ಯುದ್ಧದಲ್ಲಿ ನಮ್ಮ ದೊಡ್ಡ ಶಕ್ತಿಯಾಗಿದೆ.



ಈಗ ತಾನೇ ಎಲ್ಲಾ ವಿಚಾರಗಳಲ್ಲೂ ಸಮೃದ್ಧವಾಗಿರುವ ಕಾಶ್ಮೀರವನ್ನು ಹಳೆಯ ಪರಿಸ್ಥಿತಿಗೆ ತಂದು ನಿಲ್ಲಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ.

ಕಾಶ್ಮೀರದಲ್ಲಿ ಶಾಂತಿ ಮರಳುತ್ತಿದ್ದ ಸಮಯದಲ್ಲಿ, ಶಾಲಾ ಕಾಲೇಜುಗಳಲ್ಲಿ ಹುರುಪು ತುಂಬಿತ್ತು. ನಿರ್ಮಾಣ ಕಾರ್ಯಗಳು ಅಭೂತಪೂರ್ವ ವೇಗವನ್ನು ಪಡೆದುಕೊಂಡಿದ್ದವು. ಪ್ರಜಾಪ್ರಭುತ್ವ ಬಲಗೊಳ್ಳುತ್ತಿತ್ತು. ಪ್ರವಾಸಿಗರ ಸಂಖ್ಯೆಯಲ್ಲಿ ದಾಖಲೆಯ ಏರಿಕೆ ಕಂಡುಬಂದಿದೆ. ಜನರ ಆದಾಯ ಹೆಚ್ಚುತ್ತಿದೆ. ಯುವಕರಿಗೆ ಹೊಸ ಅವಕಾಶಗಳು ಸೃಷ್ಟಿಯಾಗುತ್ತಿವೆ. ಆದರೆ, ಈ ಬೆಳವಣಿಗೆ ಶತ್ರುಗಳ ಕಣ್ಣು ಕೆಂಪಗಾಗಿಸಿದೆ. ಹೀಗಾಗಿ ದಾಳಿ ಮೂಲಕ ಹತಾಶ ಪ್ರಯತ್ನ ಮಾಡಿದ್ದಾರೆ.

ಪ್ರತಿಯೊಬ್ಬ ಭಾರತೀಯನೂ ಸಂತ್ರಸ್ತ ಕುಟುಂಬಗಳ ಬಗ್ಗೆ ಆಳವಾದ ಸಹಾನುಭೂತಿ ಹೊಂದಿದ್ದಾರೆ. ಈ ಭಯೋತ್ಪಾದಕ ದಾಳಿಯ ನಂತರ ಪ್ರಪಂಚದಾದ್ಯಂತ ನಿರಂತರವಾಗಿ ಸಂತಾಪ ಸೂಚಿಸಲಾಗುತ್ತಿದೆ. ಜಾಗತಿಕ ನಾಯಕರು ಕೂಡ ನನಗೆ ಕರೆ ಮಾಡಿದ್ದಾರೆ, ಪತ್ರ ಬರೆದಿದ್ದಾರೆ. ಈ ಘೋರ ಭಯೋತ್ಪಾದಕ ದಾಳಿಯನ್ನು ಎಲ್ಲರೂ ಬಲವಾಗಿ ಖಂಡಿಸಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ಖಂಡಿತವಾಗಿಯೂ ನ್ಯಾಯ ಸಿಗುತ್ತದೆ ಎಂದು ನಾನು ಮತ್ತೊಮ್ಮೆ ಭರವಸೆ ನೀಡುತ್ತೇನೆ. ಹಾಗೆಯೇ ಈ ದಾಳಿಯ ಅಪರಾಧಿಗಳು ಮತ್ತು ಸಂಚುಕೋರರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ತಿಳಿಸಿದರು.

ಎರಡು ದಿನಗಳ ಹಿಂದೆ ನಾವು ದೇಶದ ಮಹಾನ್ ವಿಜ್ಞಾನಿ ಡಾ.ಕೆ.ಕಸ್ತೂರಿರಂಗನ್ ಜಿ ಅವರನ್ನು ಕಳೆದುಕೊಂಡಿದ್ದೇವೆ. ವಿಜ್ಞಾನ, ಶಿಕ್ಷಣ ಮತ್ತು ಭಾರತದ ಬಾಹ್ಯಾಕಾಶ ಕಾರ್ಯಕ್ರಮವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವಲ್ಲಿ ಅವರ ಕೊಡುಗೆ ಸದಾ ಸ್ಮರಣೀಯ. ಅವರ ನೇತೃತ್ವದಲ್ಲಿ ಇಸ್ರೋ ಹೊಸ ಗುರುತನ್ನು ಪಡೆದುಕೊಂಡಿತು. ದೇಶಕ್ಕೆ ಅವರ ನಿಸ್ವಾರ್ಥ ಸೇವೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಅವರ ಕೊಡುಗೆ ಸದಾ ಸ್ಮರಣೀಯ ಎಂದರು.

ಲಾಹೋರ್ ಕಸಿಯುತ್ತೀರಾ? ಕೆಲವೇ ಗಂಟೆಗಳಲ್ಲಿ ನೀವೇ ವಾಪಸ್ ಕೊಡ್ತೀರಾ

ಪಾಕಿ ಪ್ರಜೆಗಳಿಂದಲೇ ಪಾಕ್ ಸರ್ಕಾರ ಟ್ರೋಲ್!

ನವದೆಹಲಿ, ಏ.27– ಪಾಕಿಸ್ತಾನದ ಉಸಿರುಗಟ್ಟಿಸಲು ಭಾರತ ತೆಗೆದುಕೊಳ್ಳುತ್ತಿರುವ ಕ್ರಮಗಳಿಂದ ಪಾಕ್ ನಾಯಕರು ಕೆರಳಿ ಕೆಂಡವಾಗುತ್ತಿದ್ದರೆ, ಪಾಕ್ ಪ್ರಜೆಗಳು ಮಾತ್ರ ಅದೇ ವಿಷಯವನ್ನಿಟ್ಟುಕೊಂಡು ಎಕ್ಸ್‌ನಲ್ಲಿ ತಮ್ಮನ್ನು ತಾವೇ ಟ್ರೋಲ್ ಮಾಡಿಕೊಂಡು ಹಾಯಾಗಿದ್ದಾರೆ. ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಬಲಿ ಪಡೆದ ಭಯೋತ್ಪಾದಕ ದಾಳಿಯ ನಂತರ ಭಾರತ, ಪಾಕಿಸ್ತಾನದ ವಿರುದ್ಧದ ಕಠಿಣ ಕ್ರಮದ ಭಾಗವಾಗಿ ಸಿಂಧು ನದಿ ನೀರು ಒಪ್ಪಂದವನ್ನು ರದ್ದುಗೊಳಿಸಿದೆ. ಇದೂ ಸೇರಿದಂತೆ ಹಲವು ಕಠಿಣ ನಿರ್ಧಾರಗಳನ್ನು ಭಾರತ ಕೈಗೊಂಡಿರುವ ಹಿನ್ನೆಲೆ ಪಾಕಿಸ್ತಾನದಲ್ಲಿ ತಮ್ಮದೇ ಸರ್ಕಾರದ ವಿರುದ್ಧ ಪಾಕಿಸ್ತಾನಿಗರು ಆಕ್ರೋಶ ಹೊರ ಹಾಕುತ್ತಿದ್ದಾರೆ. ಹಣದುಬ್ಬರದಿಂದಾಗಿ ಪರದಾಡುತ್ತಿರುವ ಪಾಕಿಸ್ತಾನಕ್ಕೆ ಈ ಸಮಯದಲ್ಲಿ ಇಂತಹ ಅವಾಂತರಗಳು, ದೌಲತ್ತುಗಳು ಬೇಕಾ ಎಂಬುದು ಅಲ್ಲಿನ ಜನರ ಆಕ್ರೋಶವಾಗಿದೆ. ಇದೇ ಕಾರಣಕ್ಕೆ ಜನ ತಮ್ಮ ದೇಶವನ್ನೇ ಟ್ರೋಲ್ ಮಾಡುತ್ತಿದ್ದು, ಅವರ ಟ್ರೋಲ್‌ಗಳು ವೈರಲ್ ಆಗುತ್ತಿವೆ. ವೈರಲ್ ಆದ ಕೆಲ ಟ್ರೋಲ್‌ಗಳು ಇಲ್ಲಿವೆ ನೋಡಿ.

ಅರ್ಜೆಂಟಾಗಿ ನೀರು ಕೊಡಿ, ಪ್ಲೀಸ್...: ಸಿಂಧೂ ಜಲ ಒಪ್ಪಂದ ರದ್ದುಗೊಳಿಸಿ, ಪಾಕಿಸ್ತಾನಕ್ಕೆ ನೀರು ಬಿಡೆವು ಎಂದದ್ದಕ್ಕೆ, 'ಭಾರತ ಚೂರು ನೀರು ಕೊಡು. ಸ್ನಾನ ಮಾಡುತ್ತಾ ಕಣ್ಣಿಗೆ ಸೋಪು ಹೋಗಿದೆ' ಎಂದು ಟ್ವಿಟರ್‌ನಲ್ಲಿ ವ್ಯಂಗ್ಯವಾಡಿದ್ದಾರೆ.

ಯುದ್ಧ ಅಲ್ಲ, ನಮ್ಮಲ್ಲಿ ಕರೆಂಟ್ ಹೋದ್ರೆ ಭಯ: 'ಜೋರು ಸದ್ದಿನೊಂದಿಗೆ ಪಾಕ್‌ನಲ್ಲಿ ಕತ್ತಲಾವರಿಸಿದೆ. ಇದು ಯುದ್ಧದ ಆರಂಭ' ಎಂದು ಒಬ್ಬ ಹೇಳಿದ್ದರೆ 'ಕ್ಷಮಿಸಿ, ಅದು ನಮ್ಮ ಗಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟ ಸದ್ದು' ಎಂದು ಮತ್ತೊಬ್ಬ ವ್ಯಂಗ್ಯವಾಡಿದ್ದಾನೆ.

ಇವರಾಡೋ ಮಾತೆಲ್ಲ ಕೇಳ್ಬೇಡಿ, ನಾವೂ ಕೇಳಲ್ಲ: ನೀರು ಕೊಡದಿದ್ದರೆ ಭಾರತೀಯರ ರಕ್ತ ಹರಿಯುತ್ತದೆ ಎಂದು ಒಬ್ಬ ಎಕ್ಸ್‌ನಲ್ಲಿ ಮಾಡಿದ ಪೋಸ್ಟ್‌ಗೆ ಪ್ರತಿಕ್ರಿಯೆಯಾಗಿ, 'ಖಾತೆಗೆ ಬ್ಲೂಟಿಕ್ ಇದೆಯೆಂದು ಇವರ ಮಾತನ್ನು ಗಂಭೀರವಾಗಿ ಪರಿಗಣಿಸಬೇಡಿ ಎಂದು ಒಬ್ಬ ಕಾಮೆಂಟ್ ಮಾಡಿದ್ದಾನೆ.

ನಮ್ಮ ಸರ್ಕಾರವೇ ನಮ್ಮ ಕೊಲ್ತಿದೆ!: ನೀರು ನಿಲ್ಲಿಸುತ್ತೀರಾ? ಅದು ಇಲ್ಲಿ ಮೊದಲೇ ಬರುತ್ತಿಲ್ಲ. ಕೊಂದು ಹಾಕುತ್ತೀರಾ? ಅದನ್ನು ಪಾಕ್ ಸರ್ಕಾರ ಅನುದಿನವೂ ಮಾಡುತ್ತಿದೆ. ಲಾಹೋರ್ ಕಸಿಯುತ್ತೀರಾ? ಕೆಲವೇ ಗಂಟೆಗಳಲ್ಲಿ ನೀವೇ ಅದನ್ನು ಖುದ್ದಾಗಿ ಮರಳಿಸುತ್ತೀರಾ ಎಂದು ಮತ್ತೊಬ್ಬರು ಪೋಸ್ಟ್ ಮಾಡಿದ್ದಾರೆ.

ಸಾಲ ತೀರಿಸೋವರೆಗೆ ದಾಳಿ ಮಾಡಬೇಡಿ, ಪ್ಲೀಸ್: ನಾವು ಪ್ರಪಂಚದಲ್ಲಿರುವ ಅರ್ಧದಷ್ಟು ದೇಶಗಳ ಸಾಲ ತೀರಿಸುವುದು ಬಾಕಿ ಇದೆ. ಆದ್ದರಿಂದ ನಮ್ಮ ಮೇಲೆ ದಾಳಿ ಮಾಡದಂತೆ ಭಾರತವನ್ನು ತಡೆಯಿರಿ ಎಂದು ಕೆಲವರು ತಮ್ಮ ದಾರಿದ್ರ್ಯವನ್ನು ತಾವೇ ಆಡಿಕೊಂಡಿದ್ದಾರೆ.

ಪಹಲ್ಗಾಮ್ ದಾಳಿ: 7ನೇ ಶಂಕಿತ ಭಯೋತ್ಪಾದಕನ ಮನೆ ಧ್ವಂಸ

ಸೇನೆ ಕಾರ್ಯಾಚರಣೆ ಮುಂದುವರಿಕೆ, ನೂರಾರು ಮಂದಿ ಬಂಧನ



ಶ್ರೀನಗರ, ಏ.27– ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿ ಬಳಿಕ ಭಯೋತ್ಪಾದಕರ ಮೇಲೆ ಮುಗಿಬಿದ್ದಿರುವ ಭಾರತೀಯ ಸೇನೆ, ಶಂಕಿತ ಉಗ್ರರ ಮನೆಗಳನ್ನು ಧ್ವಂಸ ಮಾಡುವ ಕಾರ್ಯಾಚರಣೆಯನ್ನು ಮುಂದುವರಿಸಿದೆ.

ಪಹಲ್ಗಾಮ್ ದಾಳಿಯ ನಂತರದ ಏಳನೇ ಶಂಕಿತ ಉಗ್ರನ ಮನೆಯನ್ನು ಗುರುತಿಸಿರುವ ಭಾರತೀಯ ಸೇನೆ, ಇಂದು ನಸುಕಿನ ಜಾವ ಬಂಡಿಪೋರಾದ ನಾಜ್ ಕಾಲೊನಿಯಲ್ಲಿ ಸಕ್ರಿಯ ಭಯೋತ್ಪಾದಕ ಜಮೀಲ್ ಅಹ್ಮದ್ ಶೀರ್ ಗೋಜ್ರಿ ಮನೆಯನ್ನು ನೆಲಸಮಗೊಳಿಸಿದೆ. ಲಷ್ಕರ್-ಎ-ತೈಬಾ ಕಮಾಂಡರ್ ಜಮೀಲ್ 2016 ರಿಂದ ಸಕ್ರಿಯನಾಗಿದ್ದಾನೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಕಾಶ್ಮೀರದಲ್ಲಿ ಅಧಿಕಾರಿಗಳು ಭಯೋತ್ಪಾದಕರು ಮತ್ತು ಅವರ ಸಹಚರರ ಮೇಲೆ ಭಾರಿ ಪ್ರಮಾಣದ ಕ್ರಮ ಕೈಗೊಂಡಿದ್ದಾರೆ, ಉಗ್ರರ ಮನೆಗಳನ್ನು ಧ್ವಂಸಗೊಳಿಸಿದ್ದಾರೆ, ಅವರ ಸುರಕ್ಷಿತ ತಾಣಗಳ ಮೇಲೆ ದಾಳಿ ಮಾಡಿ ನೂರಾರು ಭೂಗತ ಕಾರ್ಮಿಕರನ್ನು ವಿಚಾರಣೆಗಾಗಿ ಬಂಧಿಸಿದ್ದಾರೆ.

ಕಳೆದ 48 ಗಂಟೆಗಳಲ್ಲಿ 7 ಭಯೋತ್ಪಾದಕರು ಅಥವಾ ಅವರ ಸಹಚರರ ಮನೆಗಳನ್ನು ನೆಲಸಮ ಮಾಡಲಾಗಿದೆ, ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಇತರರ ವಿರುದ್ಧವೂ ಇದೇ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಯೋತ್ಪಾದಕ ಪರಿಸರ ವ್ಯವಸ್ಥೆಯನ್ನು ಕೆಡವಲು ಶ್ರೀನಗರದಲ್ಲಿ ಶನಿವಾರ 60 ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ ನಡೆಸಲಾಗಿದೆ ಎಂದು ಜೆ-ಕೆ ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಅನಂತ್‌ನಾಗ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಜಾಗರೂಕತೆಯನ್ನು ಹೆಚ್ಚಿಸಿರುವುದರಿಂದ ದಿನದ 24 ಗಂಟೆಗಳೂ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ. ಯಾವುದೇ ಅನುಮಾನಾಸ್ಪದ ಚಲನವಲನಗಳನ್ನು ಮೇಲ್ವಿಚಾರಣೆ ಮಾಡಲು ಜಿಲ್ಲೆಯಾದ್ಯಂತ ಮೊಬೈಲ್ ವಾಹನ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ.

ಪಹಲ್ಗಾಮ್‌ನಂತಹ ಯಾವುದೇ ದಾಳಿಗಳ ವಿರುದ್ಧ ತಡೆಗಟ್ಟುವಿಕೆಯನ್ನು ರಚಿಸಲು ಕಣಿವೆಯ ಉದ್ದಕ್ಕೂ ತಿಳಿದಿರುವ ಭಯೋತ್ಪಾದಕರು ಅವರ ಸಹಚರರನ್ನು ಭದ್ರತಾ ಪಡೆಗಳು ಹಿಂಬಾಲಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಾದ್ಯಂತ ಹಲವಾರು ಸ್ಥಳಗಳಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆಗಳ OGW ಗಳು ಮತ್ತು ಭಯೋತ್ಪಾದಕ ಸಹಚರರ ನಿವಾಸಗಳಲ್ಲಿ ಮತ್ತು ಕಾನೂನು ಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆಯನ್ನು ಮುಂದುವರಿಸಲು ವ್ಯಾಪಕ ಶೋಧ ನಡೆಸಲಾಗಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಕಳೆದೆರಡು ದಿನಗಳಲ್ಲಿ ಅಟ್ಟಾರಿ-ವಾಘಾ ಗಡಿ ಮೂಲಕ ಭಾರತ ತೊರೆದ 272 ಪಾಕ್ ಪ್ರಜೆಗಳು



ನವದೆಹಲಿ, ಏ.27– ಅಟ್ಟಾರಿ-ವಾಘಾ ಗಡಿ ಮೂಲಕ ಕಳೆದ ಎರಡು ದಿನಗಳಲ್ಲಿ ಸುಮಾರು 272 ಪಾಕಿಸ್ತಾನಿ ಪ್ರಜೆಗಳು ಭಾರತವನ್ನು ತೊರೆದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾರ್ಕ್ ವೀಸಾದಡಿ ಭಾರತಕ್ಕೆ ಆಗಮಿಸಿರುವ ಪಾಕಿಸ್ತಾನದ ಪ್ರಜೆಗಳು ದೇಶ ಬಿಟ್ಟು ತೆರಳಲು ವಿಧಿಸಿದ್ದ ಗಡುವು ಭಾನುವಾರ ಅಂತ್ಯಗೊಂಡಿದ್ದು, ಇನ್ನೂ ನೂರಾರು ಮಂದಿ ಭಾರತ ತೊರೆಯುವ ನಿರೀಕ್ಷೆಯಿದೆ.

ಏ.22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಬೆಂಬಲಿತ ಭಯೋತ್ಪಾದಕರಿಂದ 26 ಜನರನ್ನು ಕೊಂದ ನಂತರ ಪಾಕ್ ಪ್ರಜೆಗಳು ಭಾರತ ತೊರೆಯುವಂತೆ ಕೇಂದ್ರ ಸರ್ಕಾರ ಗಡುವು ವಿಧಿಸಿದೆ. ಸಾರ್ಕ್ ವೀಸಾಗಳನ್ನು ಹೊಂದಿರುವವರು ಭಾರತದಿಂದ ನಿರ್ಗಮಿಸಲು ಗಡುವು ಏ.27 ಆಗಿತ್ತು. ವೈದ್ಯಕೀಯ ವೀಸಾಗಳನ್ನು ಹೊಂದಿರುವವರಿಗೆ, ಗಡುವು ಏ.29 ಆಗಿದೆ.

ಭಾನುವಾರದೊಳಗೆ ಭಾರತವನ್ನು ತೊರೆಯಬೇಕಾದ 12 ವಿಭಾಗಗಳ ವೀಸಾಗಳೆಂದರೆ, ಆಗಮನಕ್ಕಾಗಿ ವೀಸಾ, ವ್ಯಾಪಾರ, ಚಲನಚಿತ್ರ, ಪತ್ರಕರ್ತರು, ಸಾರಿಗೆ, ಸಮ್ಮೇಳನ, ಪರ್ವತಾರೋಹಣ, ವಿದ್ಯಾರ್ಥಿ, ಸಂದರ್ಶಕ, ಪ್ರವಾಸಿ ಹಾಗೂ ಯಾತ್ರಿಕರ ಗುಂಪುಗಳಾಗಿವೆ.

ಆದಾಗ್ಯೂ, ದೀರ್ಘಾವಧಿಯ ಮತ್ತು ರಾಜತಾಂತ್ರಿಕ ಅಥವಾ ಅಧಿಕೃತ ವೀಸಾಗಳನ್ನು ಹೊಂದಿರುವವರಿಗೆ ಆದೇಶದಿಂದ ವಿನಾಯಿತಿ ನೀಡಲಾಗಿದೆ.

ಅಧಿಕಾರಿಗಳ ಪ್ರಕಾರ ಏಪ್ರಿಲ್ 25 ರಂದು ಅಟ್ಟಾರಿ-ವಾಘಾ ಗಡಿಯ ಮೂಲಕ 191 ಪಾಕಿಸ್ತಾನಿ ಪ್ರಜೆಗಳು ಭಾರತವನ್ನು ತೊರೆದಿದ್ದು, ಏಪ್ರಿಲ್ 26 ರಂದು 81 ಜನರು ನಿರ್ಗಮಿಸಿದ್ದಾರೆ. ಏಪ್ರಿಲ್ 25 ರಂದು 287 ಭಾರತೀಯರು ಪಾಕಿಸ್ತಾನದಿಂದ ಭಾರತಕ್ಕೆ ಮರಳಿದ್ದಾರೆ. 13 ರಾಜತಾಂತ್ರಿಕರು ಮತ್ತು ಅಧಿಕಾರಿಗಳು ಸೇರಿದಂತೆ ಒಟ್ಟು 342 ಭಾರತೀಯರು ಏಪ್ರಿಲ್ 26 ರಂದು ಅಟ್ಟಾರಿ-ವಾಘಾ ಗಡಿಯ ಮೂಲಕ ಪಾಕಿಸ್ತಾನದಿಂದ ಮರಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಪಾಕಿಸ್ತಾನಿಗಳು ವಿಮಾನ ನಿಲ್ದಾಣಗಳ ಮೂಲಕವೂ ಭಾರತವನ್ನು ತೊರೆದಿರಬಹುದು, ಭಾರತವು ಪಾಕಿಸ್ತಾನದೊಂದಿಗೆ ನೇರ ವಿಮಾನ ಸಂಪರ್ಕವನ್ನು ಹೊಂದಿಲ್ಲದ ಕಾರಣ ಅವರು ಇತರ ದೇಶಗಳಿಗೆ ತೆರಳಿರಬಹುದು ಎಂದು ಅವರು ಹೇಳಿದರು.

ಜಮ್ಮು-ಕಾಶ್ಮೀರ: ಕಿಶ್ತ್ವಾರ್‌ನಲ್ಲಿ ಸೇನಾ ಸಮವಸ್ತ್ರಗಳ ಮಾರಾಟ, ಹೊಲಿಗೆ, ಶೇಖರಣೆಗೆ ನಿಷೇಧ

ಕಿಶ್ತ್ವಾರ್, ಏ.27– ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಸೇನೆಯ ಸಮವಸ್ತ್ರಗಳು, ಯುದ್ಧ ಮಾದರಿಯ ಉಡುಪುಗಳ ಮಾರಾಟ, ಹೊಲಿಗೆ ಮತ್ತು ಶೇಖರಣೆಯನ್ನು ನಿಷೇಧಿಸಲು ಅಧಿಕಾರಿಗಳು ಆದೇಶ ನೀಡಿದ್ದಾರೆ. ದೇಶ ವಿರೋಧಿ ಶಕ್ತಿಗಳಿಂದ ದುರ್ಬಳಕೆ ಹಿನ್ನೆಲೆಯಲ್ಲಿ ಕಿಶ್ತ್ವಾರ್ ಉಪ ಆಯುಕ್ತ ರಾಜೇಶ್ ಕುಮಾರ್ ಶವನ್ ಈ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ವಿಧ್ವಂಸಕ ಶಕ್ತಿಗಳು ಸಾರ್ವಜನಿಕ ಸುರಕ್ಷತೆ, ಶಾಂತಿ ಮತ್ತು ಭದ್ರತೆಗೆ ಬೆದರಿಕೆಯನ್ನುಂಟು ಮಾಡುತ್ತಿರುವುದನ್ನು ಪರಿಗಣಿಸಿ ತಕ್ಷಣದಿಂದ ಜಾರಿಯಾಗುವಂತೆ ಈ ಆದೇಶ ಹೊರಡಿಸಲಾಗಿದೆ. ಎಲ್ಲಾ ಅಧಿಕೃತ ಖಾಸಗಿ ಸಂಸ್ಥೆಗಳು ಮತ್ತು ಯುದ್ಧ ಉಡುಪುಗಳನ್ನು ಸಂಗ್ರಹಿಸುವ ಮತ್ತು ಮಾರಾಟ ಮಾಡುವ ಅಂಗಡಿಗಳು ಈ ವ್ಯವಹಾರವನ್ನು ಮುಂದುವರಿಸಲು ತಮ್ಮ ಅಧಿಕಾರದ ಬಗ್ಗೆ ತಕ್ಷಣ ಹತ್ತಿರದ ಪೊಲೀಸ್ ಠಾಣೆಗಳಿಗೆ ಲಿಖಿತವಾಗಿ ತಿಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಎಲ್ಲಾ ಅಧಿಕೃತ ವ್ಯಕ್ತಿಗಳು ಖಾಸಗಿ ಸಂಸ್ಥೆಗಳು, ಅಂಗಡಿಗಳು, ಅವರು ತಯಾರಿಸಿದ ಯುದ್ಧ, ಖಾದಿ ಉಡುಗೆ, ಬಟ್ಟೆಯ ಎಲ್ಲಾ ಮಾರಾಟದ ವರದಿಗಳನ್ನು ಹದಿನೈದು ದಿನಗಳಿಗೊಮ್ಮೆ ಸಲ್ಲಿಸಬೇಕು, ಜೊತೆಗೆ ಮಾರಾಟವನ್ನು ಮಾಡಿದ ಸೇನೆ, ಅರೆಸೇನಾಪಡೆ, ಪೊಲೀಸ್ ಸಿಬ್ಬಂದಿಯ ವಿವರವಾದ ವಿವರಗಳನ್ನು ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಪಟ್ಟಿಯನ್ನು ವಿತರಕರು ಹದಿನೈದು ದಿನಗಳ ಆಧಾರದ ಮೇಲೆ ಸಂಬಂಧಪಟ್ಟ ಸ್ಟೇಷನ್ ಹೌಸ್ ಆಫೀಸರ್‌ಗೆ ನೀಡಬೇಕು. ಅಂತಹ ಎಲ್ಲಾ ವಿವರಗಳನ್ನು ಹೊಂದಿರುವ ರಿಜಿಸ್ಟರ್ ಅನ್ನು ಪ್ರತಿಯೊಬ್ಬ ಡೀಲರ್ ಸರಿಯಾಗಿ ನಿರ್ವಹಿಸಬೇಕು, ಸಕ್ಷಮ ಅಧಿಕಾರಿಗಳು ಅಂಗಡಿಯ ತಪಾಸಣೆ ನಡೆಸಿದಾಗ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತಹಸೀಲ್ದಾರ್, ಪ್ರಥಮ ದರ್ಜೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಅಥವಾ ಅದಕ್ಕಿಂತ ಹೆಚ್ಚಿನ ಶ್ರೇಣಿಯ ಪೊಲೀಸ್ ಅಧಿಕಾರಿಯು ಅಂತಹ ರಿಜಿಸ್ಟರ್‌ಗಳನ್ನು ಮತ್ತು ಪರಿಶೀಲಿಸಲು ಅಧಿಕಾರ ಹೊಂದಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ, ಈ ಆದೇಶವನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯನ್ನು ಶಿಕ್ಷಿಸಲಾಗುವುದು ಎಂದು ಆದೇಶದಲ್ಲಿ ಹೇಳಲಾಗಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ನಾಪತ್ತೆ? ಕುಟುಂಬ ಪಲಾಯನ

ಇಸ್ಲಾಮಾಬಾದ್, ಏ.27– ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ಕುಟುಂಬ ಸಮೇತ ಪರಾರಿಯಾಗಿರುವ ಮಾಹಿತಿ ಲಭ್ಯವಾಗಿದೆ. ಕೆಲ ವರದಿಗಳ ಪ್ರಕಾರ ಆಸಿಮ್ ಮುನೀರ್ ತನ್ನ ಕುಟುಂಬವನ್ನು ಖಾಸಗಿ ಏರ್‌ಕ್ರಾಫ್ಟ್ ಮೂಲಕ ಬ್ರಿಟನ್ ಅಥವಾ ನ್ಯೂ ಜರ್ಸಿಗೆ ಕಳುಹಿಸಿರುವ ಬಗ್ಗೆ ವರದಿಯಾಗಿದೆ.



ಪಹಲ್ಗಾಮ್ ದಾಳಿ ನಡೆದ 48 ಗಂಟೆಯಲ್ಲಿಯೇ ಭಾರತ ಯುದ್ಧನೌಕೆ ಐಎನ್‌ಎಸ್ ಸೂರತ್‌ನಿಂದ ಕ್ಷಿಪಣಿ ಪರೀಕ್ಷೆಯನ್ನು ನಡೆಸುವ ಮೂಲಕ ಅರೇಬಿಯನ್ ಸಮುದ್ರದಲ್ಲಿರುವ ಶತ್ರುಗಳಿಗೆ ಖಡಕ್ ಸಂದೇಶವನ್ನು ರವಾನಿಸಿತ್ತು. ಭಾರತೀಯ ನೌಕಾಪಡೆಯ ಯುದ್ಧನೌಕೆಯು ಕ್ಷಿಪಣಿಯ ಮೂಲಕ ಸಮುದ್ರದಲ್ಲಿನ ಗುರಿಯನ್ನು ನಾಶಪಡಿಸಿತ್ತು. ಇದೀಗ ಆಸಿಮ್ ಮುನೀರ್ ನಾಪತ್ತೆಯಾಗಿರುವ ಬಗ್ಗೆ ವರದಿಗಳು ಬರುತ್ತಿವೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಅಲ್ವೋ ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಲಿಲ್ಲ. ಹೆಂಗ್ ಸತ್ತ?

ತಿಮ್ಮ : ತಲೆಗೆ ವಿಷ ಏರುತೇನೋ ಅಂತ ಕುತ್ತಿಗೆಗೆ ಬಿಗಿಯಾಗಿ ಹಗ್ಗ ಬಿಗಿದಿದ್ವಿ!

ಮೈಸೂರು ಮಿತ್ರ
ಸೋಮವಾರ, 28 ಏಪ್ರಿಲ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸಾವನ್ನ ಪಡೆಯಲು ಸಾವಿರ ದಾರಿಗಳಿವೆ. ಆದರೆ ಬದುಕನ್ನು ಕಂಡುಕೊಳ್ಳಲು ಇರುವ ದಾರಿ ಒಂದೇ, ಅದುವೇ 'ಆತ್ಮವಿಶ್ವಾಸ'

ವೇದ ಸುಳ್ಳಾದರೂ { ಮಾತೇ ಮುತ್ತು
ಗಾದೆ ಸುಳ್ಳಾಗದು { ಮಾತೇ ಮೃತ್ಯು.

ನಿಮ್ಮ ಪತ್ರಗಳು

ಇನ್ನೆಷ್ಟು ಅವಕಾಶ ನೀಡುವುದು ಇವರಿಗೆ!

ಮಾನ್ಯರೆ,

ಒಬ್ಬೊಬ್ಬ ಉಗ್ರನನ್ನೂ ಹುಡುಕಿ ಹೊಡೆದುರುಳಿಸುತ್ತೇವೆ. ಕಲ್ಪನೆಗೂ ಮೀರಿದ ಶಿಕ್ಷೆ ಉಗ್ರರಿಗೆ ಕಾದಿದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಇಷ್ಟಕ್ಕೂ ಈ ರೀತಿ ಘರ್ಜಿಸಿದವರು, ಇಲ್ಲಿಯತನಕ ಸಾಕಷ್ಟು ಅವಕಾಶ ಕೊಟ್ಟು, ತಮ್ಮನ್ನು ತಾವು ಸುಧಾರಿಸಿಕೊಳ್ಳಿ ಅಂದುಕೊಂಡ ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ಎಂಬುದು ನಾವೆಲ್ಲ ಹೆಮ್ಮೆಪಡುವಂತಹುದು.

ಸಹನೆಗೂ ಒಂದು ಮಿತಿ ಇದ್ದೇ ಇರುತ್ತದೆ. ಯಾವುದಾದರೂ ಅತಿರೇಕಕ್ಕೆ ಹೋದರೆ ಅದನ್ನು ಸಹಿಸಿಕೊಳ್ಳುವುದು ಅಸಾಧ್ಯದ ಮಾತು. ಈಗಾಗಿದ್ದೂ ಇದೆ. ತಮ್ಮಷ್ಟಕ್ಕೆ ತಾವು, ರಮಣೀಯ ಸ್ಥಳಗಳನ್ನು ವೀಕ್ಷಿಸಲು ಹೋದವರ ಧರ್ಮದ ಪಕ್ಕಾ ಪರಿಚಯ ಮಾಡಿಕೊಂಡು, ಕೇವಲ ಹಿಂದುಗಳನ್ನಷ್ಟೇ ಗುರಿಯಾಗಿಸಿದ ಹಿಂದಿನ ಉದ್ದೇಶ ಸ್ಪಷ್ಟ ಎನ್ನುವಲ್ಲಿ, ಇಂಥವರಿಗೆ ಇನ್ನೂ ಅವಕಾಶ ಕಲ್ಪಿಸುವುದರಲ್ಲಿ ಏನಾದರೂ ಅರ್ಥವಿದ್ದೀತೆ ಎಂಬುದೂ ಮನದಟ್ಟಾದ ಮೇಲೇ ಈ ರೀತಿ ಶಪಥ ಪ್ರಧಾನಿ ಬಾಯಿಂದ ಬಂದಿದ್ದಲ್ಲವೆ?

ಉಗ್ರರು ಹೇಗೆ, ಹುಡುಕಿ-ಹುಡುಕಿ ಹಿಂದುಗಳನ್ನು ಹತ್ಯೆ ಮಾಡಿದ್ದರೋ, ಅವರಿಗೂ ಅದೇ ರೀತಿಯ ಪ್ರತೀಕಾರ ತೋರಿಸುವ ಅವಶ್ಯಕತೆಯೂ ಇತ್ತು. ಕೆಲವರಿಗೆ ಕೆಲವು ಭಾಷೆ, ಕ್ರಿಯೆಗಳಷ್ಟೇ ಅರ್ಥವಾಗುವುದು. ಅದನ್ನು ಸರಿಯಾಗಿಯೇ ಅರ್ಥೈಸಿದ್ದಾರೆ ಮೋದಿ. ಪ್ರಧಾನಿ ಮತ್ತು ರಕ್ಷಣಾ ಸಚಿವರ ಮಾತಿಗೆ ಸರ್ವಪಕ್ಷಗಳ ಸಮ್ಮತಿ ಸಿಕ್ಕಿರುವುದು ಪ್ರಧಾನಿಯವರಿಗೆ ಆನೆ ಬಲ ಸಿಕ್ಕಂತಾಗಿದೆ. ಹೀಗಾಗಿ ಇನ್ನು ಅಳುಕದೆ, ಅಂಜದೆ ಮುನ್ನುಗ್ಗುವುದರಲ್ಲಿ ಅನುಮಾನವೇ ಇಲ್ಲ. ಇದು ಕೆಲದಿನಗಳ ಸಂಘರ್ಷಕ್ಕೆ ಎಡೆಮಾಡಿಕೊಟ್ಟರೂ, ಒಂದು ದೇಶದ ಹಿತ ಕಾಯುವಲ್ಲಿ ಈ ನಡೆ ತೀರಾ ಅವಶ್ಯಕವಿತ್ತು. ಇದು ಕೇವಲ ದಾಳಿಕೋರರಿಗಷ್ಟೇ ಅನ್ವಯವಾಗದೆ, ಈ ದಾಳಿಯ ಹಿಂದಿರುವ ಎಲ್ಲ ಸಂಘ, ಸಂಸ್ಥೆಗಳಿಗೂ ಅನ್ವಯ ಎಂಬುದು ಇನ್ನೂ ಮಹತ್ವ ಪಡೆಯುತ್ತದೆ. ನಮ್ಮ ಪ್ರಧಾನಿಗಳು ಈ ನಿಟ್ಟಿನಲ್ಲಿ ಈಗಾಗಲೇ ಹಲವು ನಿರ್ಣಯಗಳನ್ನು ಕೈಗೊಂಡಿದ್ದನ್ನೂ ದೇಶಕ್ಕೆ ದೇಶವೇ ಅನುಮೋದಿಸಿದೆ. ಇದರರ್ಥ, ಯಾವುದೇ ಅಡ್ಡಿ, ಆತಂಕಗಳಿಲ್ಲದೇ ಮುಂದುವರಿಯುವ ಮನೋಬಲ, ಇಚ್ಛಾಶಕ್ತಿ ಹೆಚ್ಚಿಸಿದಂತಾಗಿದೆ. ಇನ್ನೇನಿದ್ದರೂ ಇದರ ಪರಿಣಾಮಗಳನ್ನು ಒಂದೊಂದಾಗಿ ವೀಕ್ಷಿಸುವುದೊಂದೇ ನಮ್ಮ ಕೆಲಸ!

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು.

ಸಂತೋಷ್‌ಲಾಡ್‌ರ ಕಾರ್ಯ ಪ್ರಶಂಸನೀಯ



ಮಾನ್ಯರೆ,

ನಮ್ಮ ದೇಶದ ಮುಕುಟವಾಗಿರುವ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನೇ ಕೇಂದ್ರವಾಗಿರಿಸಿಕೊಂಡು ನಡೆದ ಉಗ್ರರ ದಾಳಿಗೆ ಬೆದರಿದ ಕರ್ನಾಟಕದ ಸುಮಾರು 180 ಮಂದಿಯನ್ನು ಅತ್ಯಂತ ಸುರಕ್ಷಿತವಾಗಿ ಜೊತೆಯಲ್ಲೇ ಕರೆದುಕೊಂಡು ಬಂದ ರಾಜ್ಯದ ಕಾರ್ಮಿಕ ಮಂತ್ರಿ ಸಂತೋಷ್ ಲಾಡ್‌ರವರ ಕಾರ್ಯವೈಖರಿ, ಅವರ ಬದ್ಧತೆ, ಸಮರ್ಪಣಾ ಮನೋಭಾವ ಅತ್ಯಂತ ಪ್ರಶಂಸನೀಯವಾದುದು.

ಉಗ್ರರ ದಾಳಿಯಿಂದ ಪ್ರವಾಸಿಗರು ಎಷ್ಟು ಬೆಚ್ಚಿದ್ದರು ಎಂಬುದಕ್ಕೆ ಸ್ಥಳೀಯ ಪೊಲೀಸರೇ ನೆರವಿಗೆ ಬಂದರೂ ಅವರು ಸಹ ಉಗ್ರರು ಎಂಬ ಭಯ ಮನೆ ಮಾಡಿತ್ತು. ಇಂತಹ ಭಯದ ವಾತಾವರಣದಲ್ಲಿದ್ದ ಕನ್ನಡಿಗರ ರಕ್ಷಣೆಯ ಹೊಣೆಯನ್ನು ರಾಜ್ಯ ಸರ್ಕಾರ ಸಂತೋಷ್‌ಲಾಡ್ ಅವರಿಗೆ ವಹಿಸಿತ್ತು. ಅಷ್ಟೇ ಅತ್ಯಂತ ಚಾಣಾಕ್ಷತನದಿಂದ ಜಾಗರೂಕತೆಯಿಂದ ನಿರ್ವಹಿಸಿದ ಪರಿಯಂತೂ ಅನುಕರಣೀಯವಾದುದು. ಕನ್ನಡಿಗರ ದೂರವಾಣಿ ಸಂಖ್ಯೆಗಳನ್ನು ಸಂಗ್ರಹಿಸಿ ಎಲ್ಲರ ಜೊತೆ ಮಾತನಾಡಿ ನಾವಿದ್ದೇವೆ ಎಂಬ ಧೈರ್ಯದ ಮಾತಾಡಿ ಸ್ಥೈರ್ಯ ತುಂಬಿ, ನಂತರ ನಮ್ಮ ಜಮ್ಮು-ಕಾಶ್ಮೀರದ ಮುಖ್ಯಮಂತ್ರಿ, ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿ ಕನ್ನಡಿಗರನ್ನು ಕರುನಾಡಿಗೆ ಕರೆತಂದಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯನ್ನು ನಗುಮೊಗದಿಂದಲೇ ನಿರ್ವಹಿಸಿದ ಸಂತೋಷ್‌ಲಾಡ್ ಅವರಿಗೆ ಕರ್ನಾಟಕದ ಪರವಾಗಿ ಧನ್ಯವಾದಗಳು. ದೇಶದ ಯಾವುದೇ ಮೂಲೆಯಲ್ಲಿ ಅಥವಾ ವಿದೇಶದಲ್ಲಿ ಕನ್ನಡರಿಗರು ಸಂಕಷ್ಟಕ್ಕೆ ಸಿಲುಕಿದಾಗ ಆ ಪರಿಸ್ಥಿತಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿ ಅವರುಗಳನ್ನು ಕರೆತಂದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

–ಸಾಲುಂಡಿ ಎಸ್.ದೊರೆಸ್ವಾಮಿ, ಸಾಲುಂಡಿ, ಮೈಸೂರು ತಾ.

ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ

ಮಾನ್ಯರೆ,

ಮೈಸೂರು ತಾಲೂಕು ವಾಜಮಂಗಲ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿ ಅಪಮಾನ ಮಾಡಿರುವ ಹೇಯ ಕೃತ್ಯ ಖಂಡನೀಯ.

ವಿಶ್ವದಲ್ಲಿ ಡಾ.ಅಂಬೇಡ್ಕರನ್ನು ಅಗ್ರಗಣ್ಯರ ಸಾಲಿನಲ್ಲಿ ನೋಡುತ್ತಿರುವಾಗ ಭಾರತದಲ್ಲಿ ಆಗಾಗ ಅವರ ಪ್ರತಿಮೆಗಳು ಅವರ ಬ್ಯಾನರ್‌ಗಳ ಮೇಲೆ ಅಪಮಾನಗಳು ನಡೆಯುತ್ತಲೇ ಇರುವುದು ದುಃಖಕರ ಮತ್ತು ನೋವಿನ ಸಂಗತಿ.

ಯಾಕೆ ಇಷ್ಟು ದ್ವೇಷ ಅಸೂಯೆ. ಇಡೀ ಜಗತ್ತಿಗೆ ಮೆಚ್ಚುವಂಥ ಭಾರತಕ್ಕೆ ಸಂವಿಧಾನ ಕೊಟ್ಟಂತ ಪ್ರಭುದ್ಧ ನಾಯಕ. ಇಂತಹ ನಾಯಕರಿಗೆ ಈ ನೆಲದಲ್ಲಿ ಅಪಮಾನ ಸರಿಯೇ?

ಅಮೆರಿಕವೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಇರುವ ನೂರು ಡಾಲರ್ ಮುಖಬೆಲೆಯುಳ್ಳ ಕರೆನ್ಸಿ ಬಿಡುಗಡೆ ಮಾಡಿದೆ. ವಿದೇಶದಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ಡಾಕ್ಟರೇಟ್ ಪಡೆದ ಮೊದಲ ಭಾರತೀಯ. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅಂಬೇಡ್ಕರ್ ಅವರ ಆತ್ಮಚರಿತ್ರೆಯನ್ನು ಪಠ್ಯಪುಸ್ತಕವಾಗಿ ಇಂದಿಗೂ ಬಳಸಲಾಗುತ್ತದೆ. ಇಡೀ ವಿಶ್ವವೇ ಡಾ.ಅಂಬೇಡ್ಕರ್ ಅವರ ಆದರ್ಶ ಕೊಡುಗೆಗಳನ್ನು ಒಪ್ಪಿಕೊಂಡಿರುವಾಗ ಭಾರತಾಂಬೆಯ ಮಡಿಲಲ್ಲಿ ಜನಿಸಿದ ವಿಶ್ವ ಮಾನವ ಈ ಮಹಾನ್ ನಾಯಕ ದೇಶ ಸುತ್ತಿ ಕೋಶ ಓದಿ' ಎಂಬಂತ ನಾಣ್ಣುಡಿಯಂತೆ ವಿದೇಶಗಳನ್ನು ಸುತ್ತಿ 52 ಸಾವಿರ ಪುಸ್ತಕಗಳನ್ನು ಓದಿ ಅಕ್ಷರ ಕ್ರಾಂತಿ ಮಾಡಿದ ಅವರು ವಿಶ್ವಕ್ಕೆ ಮಾದರಿಯ ವ್ಯಕ್ತಿಯಾದರೂ, ವಿಶ್ವದ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿರುವ ಇವರು ಜ್ಞಾನದ ಸಂಕೇತ ಕೂಡ ಸಮಗ್ರ ಆಧುನಿಕ ಭಾರತದ ರೂವಾರಿ.

ಇವರಿಗೆ ಸಿಗಬೇಕಾದ ಗೌರವ ಮನ್ನಣೆ ಬದುಕಿದ್ದಾಗಲೂ ಸಿಗಲಿಲ್ಲ. ಮರಣ ನಂತರವೂ ಅವರ ಫೋಟೋಗಳಿಗೆ, ಪ್ರತಿಮೆಗಳಿಗೆ ಇಷ್ಟೊಂದು ಅಪಮಾನವೇ. ವಾಜಮಂಗಲ ಗ್ರಾಮದಲ್ಲಿ ಅಪಮಾನ ಮಾಡಿದ ವಿಕೃತ ಮನಸ್ಥಿತಿಯವರನ್ನು ಶೀಘ್ರವಾಗಿ ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಲಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು

ಆಡಂಬರದ ಆರಾಧನೆಗಿಂತ ಅರ್ಥಪೂರ್ಣ ಅನುಸರಣೆ ಲೇಸು!

'ಜನರು ತಮ್ಮ ನೆಚ್ಚಿನ ನಾಯಕರ ಪುತ್ಥಳಿಗಳನ್ನು ವೃತ್ತಗಳಲ್ಲಿ ನಿಲ್ಲಿಸಿದ್ದಾರೆ, ಹಾಗೆಯೇ ಅವರ ತತ್ತ್ವ ಆದರ್ಶಗಳ ಪಾಲನೆಯನ್ನು ತಮ್ಮ ವೃತ್ತಿಗಳಲ್ಲಿ ನಿಲ್ಲಿಸಿದ್ದಾರೆ' ಎಂಬ ಸಾಲುಗಳನ್ನು ಸಾಮಾಜಿಕ ಜಾಲತಾಣದಲ್ಲಿ 'ಜೇನ್ನುಡಿ' ಎಂಬ ತಲೆಬರಹದಲ್ಲಿ ಇತ್ತೀಚಿಗೆ ನಾನು ಹಂಚಿಕೊಂಡಿದ್ದೆ. ನಮ್ಮ ದೇಶದಲ್ಲಿನ ಮೌಢ್ಯತೆ, ಅಂಧಾಚರಣೆ, ವ್ಯಕ್ತಿಪೂಜೆಯನ್ನು ವಿರೋಧಿಸಿ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಿದ ಶರಣರ, ದಾಸರ, ಮಹಾತ್ಮರ, ದಾರ್ಶನಿಕರ ಜಯಂತಿ ದಿನವನ್ನು ವಿಜೃಂಭಣೆಯಿಂದ, ಮೆರವಣಿಗೆ ಸಮೇತ ಅದ್ಧೂರಿಯಾಗಿ ಆಚರಿಸುತ್ತಿರುವುದು ಮೇಲ್ನೋಟಕ್ಕೆ ಅವರಿಗೆ ಗೌರವ ಸೂಚಕ ಕಾರ್ಯಕ್ರಮದಂತೆ ಕಂಡರೂ, ಎಲ್ಲೋ ಒಂದು ಕಡೆ ನಿತ್ಯವೂ ಅವರ ತತ್ತ್ವ, ಆದರ್ಶ, ಸಂದೇಶಗಳನ್ನು ಗಾಳಿಗೆ ತೂರಿ, ಮತ್ತೊಂದು ಕಡೆ ವರ್ಷಕ್ಕೊಂದು ದಿನ ಇನ್ನಿಲ್ಲದಂತೆ ಅವರನ್ನು ಹೊತ್ತು ಮೆರೆಸುವುದು ವಿಡಂಬನೆ ಎನಿಸುತ್ತದೆ. ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಪಣತೊಟ್ಟು ಕ್ರಾಂತಿಯನ್ನೇ ಮಾಡಿದ ಮಹಾತ್ಮರ ಜಯಂತಿ ಮಹೋತ್ಸವ ಇಂದು ಜಾತ್ಯಾತೀತವಾಗಿ ನಡೆಯದೆ ಜಾತಿಯ ನಾಯಕರಂತೆ ಬಿಂಬಿಸಿ, ಆಯಾ ಜಾತಿಯವರು ಮಾತ್ರ ಆಚರಿಸುತ್ತಿರುವುದು ಅರ್ಥಹೀನ ಎನಿಸುತ್ತಿದೆ.

ಕರ್ನಾಟಕ ಸರ್ಕಾರ ಬಸವೇಶ್ವರರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವುದು ನಿಜಕ್ಕೂ ಇಡೀ ದೇಶ ಹೆಮ್ಮೆ ಪಡುವ ವಿಚಾರ. ಸುವರ್ಣಸೌಧದಲ್ಲಿ ಅನುಭವ ಮಂಟಪದ ತೈಲವರ್ಣ ಚಿತ್ರವನ್ನು ಅನಾವರಣಗೊಳಿಸಿರುವುದು ಅರ್ಥಪೂರ್ಣವಾಗಿದೆ. ದೇಶದ ಪ್ರಧಾನ ಮಂತ್ರಿಗಳ ಬಾಯಲ್ಲಿ ಬಸವೇಶ್ವರರ ವಚನ ವಾಚನವಾಗುತ್ತದೆ ಎಂದರೆ ಅವರನ್ನು ದೇಶದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದರೂ ತಪ್ಪಿಲ್ಲ. ಅಂತಹ ಮೇರು ವ್ಯಕ್ತಿತ್ವ ಬಸವಣ್ಣನವರದು. ಆದರೆ ಬಸವಣ್ಣನವರ ಆಶಯಗಳು ಇಂದಿನ ಸಮಾಜದಲ್ಲಿ ಈಡೇರಿವೆಯೇ? ಎಂಬುದು ಯಕ್ಷಪ್ರಶ್ನೆಯಾಗಿ ಕಾಡುತ್ತದೆ. ಏಕೆಂದರೆ ಕಾಯಕ ಹಾಗೂ ದಾಸೋಹ ತತ್ತ್ವವನ್ನು ಇಡೀ ಜಗತ್ತಿಗೆ ಸಾರಿದ ಬಸವಣ್ಣನವರನ್ನು ಕೇವಲ ಮೂರ್ತಿಯಾಗಿ ಆರಾಧಿಸದೆ, ಅವರ ತತ್ತ್ವ-ಸಂದೇಶಗಳನ್ನು ಅನುಷ್ಠಾನ ಮಾಡಿದಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ಹಿಂದಿನಿಂದಲೂ ನಮ್ಮ ದೇಶದಲ್ಲಿ ಜಾತಿ, ಧರ್ಮ, ಕಂದಾಚಾರದ ವಿಚಾರಗಳಿಗೆ ಆದ್ಯತೆ ಸಿಗುತ್ತಿರುವಷ್ಟು ಶಿಕ್ಷಣ, ವಿಜ್ಞಾನದ ವಿಚಾರದಲ್ಲಿ ಸಿಕ್ಕಿದ್ದಿದ್ದರೆ ಇಂದು ಪ್ರಪಂಚದ ನಂ.1 ಸ್ಥಾನದಲ್ಲಿರುತ್ತಿತ್ತು. ಜಾತಿ ಜಾತಿಗಳ ನಡುವೆ ಇರುವ ಕಂದಕಗಳನ್ನು ನಿವಾರಿಸಿ ಎಲ್ಲರನ್ನು ಒಂದೇ ಹಂದರದಲ್ಲಿ ಸೇರಿಸುವ ಪ್ರಯತ್ನ ಮಾಡಿದ ಬಸವಣ್ಣನವರು ಪ್ರಪಂಚದಲ್ಲಿಯೇ ಮೊದಲ ಸಂವಿಧಾನ ನೀಡಿದ ಕ್ರಾಂತಿಕಾರಿ ಶರಣರು. ಸುಮಾರು ಒಂಭತ್ತು ಶತಮಾನಗಳ ಹಿಂದೆಯೇ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಅಷ್ಟೇ ಅಲ್ಲದೆ ಅಂತರ್ಜಾತಿ ವಿವಾಹಕ್ಕೆ ಮುಂದಾಗಿದ್ದ ಮಹಾತ್ಮರು. ಆದರೆ ಇಂದಿಗೂ ಮತೀಯ ಕಲಹ, ಜಾತಿ ಕಲಹ ಇಂತಹ ಶರಣರ ವಿಚಾರದಲ್ಲಿಯೂ ನಡೆಯುತ್ತಿರುವುದು, ಜಾತಿಗೊಬ್ಬ ಶರಣ ನಾಯಕರನ್ನು ವರ್ಗೀಕರಿಸಿ ಆರಾಧಿಸುತ್ತಿರುವುದು ಅನಾರೋಗ್ಯಕರ ಬೆಳವಣಿಗೆ ಆಗಿದೆ.

ಶರಣರ, ದಾಸರುಗಳ, ಮಹಾತ್ಮರ ಜನ್ಮದಿನಾಚರಣೆಗಳು ಅಭಿಮಾನದ ಉತ್ಸಾಹದಲ್ಲಿ ಏರ್ಪಡಿಸಬೇಕಾದ ಉತ್ಸವಗಳೇ ಹೊರತು ಉನ್ಮಾದದಲ್ಲಿ ಏರ್ಪಡಿಸುವ ಕಾರ್ಯಕ್ರಮಗಳಲ್ಲ. ಕೆಲವೆಡೆ ಸ್ಪರ್ಧೆಯ ರೂಪದಲ್ಲಿ ತಮ್ಮ ಜನಾಂಗದ ನಾಯಕರ ಜನ್ಮದಿನಾಚರಣೆ ಮಾಡುತ್ತಿರುವುದಂತೂ ಅರ್ಥಹೀನ. ಆಚರಣೆಯ ವಿಧಾನವಾದರೂ ಮಾದರಿಯಾಗಿದೆಯೇ ಎಂದರೆ, ಇಲ್ಲ. ಅಲಂಕೃತ ಭಾವಚಿತ್ರ/ಪುತ್ಥಳಿ ಮೆರವಣಿಗೆಯಲ್ಲಿ ಅವರ ಜೀವನ ಸಾಧನೆ ತಿಳಿಸುವ ಗೀತೆ, ಘೋಷವಾಕ್ಯಗಳ ಬದಲು ಅರ್ಥಹೀನ/ಅಶ್ಲೀಲ ಚಲನಚಿತ್ರ ಗೀತೆಗಳನ್ನು ಕಿವಿಗಡಚಿಕ್ಕುವ ರೀತಿಯಲ್ಲಿ ಸೌಂಡ್‌ಬಾಕ್ಸ್‌ನಲ್ಲಿ ಹಾಕುವುದು. ಕೆಲವೆಡೆ ಅಸಭ್ಯ ನೃತ್ಯ ಮಾಡಲೆಂದೇ ಡಿ.ಜೆ.ಸಿಸ್ಟಂಗಳನ್ನು ವ್ಯವಸ್ಥೆ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಮೋಜು, ಮಸ್ತಿ ಮಾಡಲು ಮಹಾತ್ಮರ ಜನ್ಮದಿನಾಚರಣೆಯ ವೇದಿಕೆಯನ್ನು ಬಳಸಿಕೊಳ್ಳುತ್ತಿರುವುದು ಮಾತ್ರ ಅವರಿಗೆ ಮಾಡುವ ಅವಮಾನವೇ ಸರಿ ! ರಾಜಕೀಯ ಪಕ್ಷಗಳು ತೆರೆಮರೆಯಲ್ಲಿ ವೋಟ್‌ಬ್ಯಾಂಕ್‌ಗೋಸ್ಕರ ಜಾತಿ-ಧರ್ಮದ ಲೆಕ್ಕಾಚಾರ ಹಾಕಿ ಮಹಾತ್ಮರುಗಳನ್ನು ಹೈಜಾಕ್ ಮಾಡಿ ವಿಜೃಂಭಿಸುತ್ತಿರುವುದು ಇಂದು ಮುಕ್ತ ರಹಸ್ಯವಾಗಿದೆ.

ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರನ್ನು ಮಾನವತಾವಾದಿ ಐಕಾನ್‌ಗಳಂತೆ ಇಂದು ಎಲ್ಲೆಂದರಲ್ಲಿ ಬಳಸಲಾಗುತ್ತಿದೆ.



> 'ದಯವಿಲ್ಲದ ಧರ್ಮ ಅದಾವುದಯ್ಯ, ದಯವೇ ಧರ್ಮದ ಮೂಲವಯ್ಯ' ಎಂಬ ಮೌಲ್ಯವನ್ನು ಮನಮುಟ್ಟುವಂತೆ ಸರಳವಾಗಿ ಹೇಳಿದ್ದಾರೆ ಬಸವೇಶ್ವರರು. ಆದರೆ ಕಳೆದ ವಾರ ಕಾಶ್ಮೀರದಲ್ಲಿ ನಡೆದ ನರಮೇಧವು ಇಡೀ ಮನುಕುಲವೇ ಮನಃಕಲಕುವಂತಿದೆ. ಧರ್ಮದ ಹೆಸರಿನಲ್ಲಿ ಅಧರ್ಮದಿಂದ ಒಬ್ಬರ ಜೀವ ತೆಗೆಯುವುದು ಅದಾವ ಧರ್ಮಗ್ರಂಥದಲ್ಲಿದೆಯೋ ತಿಳಿಯೆ! ಸರ್ವ ಜನಾಂಗದ ಶಾಂತಿಯ ತೋಟವನ್ನು ಸೃಷ್ಟಿಸಲು ಶ್ರಮಿಸಿದ ಮಹಾಮಹಿಮರು ತಿರುಗಾಡಿದ್ದ ದೇಶದಲ್ಲಿ ಇಂದು ಅಶಾಂತಿಯ ರಣಭೂಮಿ ನಿರ್ಮಾಣವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಪ್ರತಿಮೆಗಳು ವೃತ್ತಗಳಲ್ಲಿ, ಫೋಟೋಗಳು ಕಚೇರಿ ಹಾಗೂ ಮನೆಗಳಲ್ಲಿ ರಾರಾಜಿಸುತ್ತಿವೆ. ಅವರ ಫೋಟೋ ಕುರಿತಾಗಿ ಇರುವ ಆಸಕ್ತಿಯನ್ನು ಅವರ ಬೋಧನೆ ಕುರಿತಾಗಿ ಹೊಂದಿದ್ದರೆ ಎಷ್ಟೋ ಸುಧಾರಣೆ ಆಗಿರುತ್ತಿತ್ತು. ಎಷ್ಟೋ ಊರುಗಳಲ್ಲಿ ಅಳವಡಿಸುವ ಫ್ಲೆಕ್ಸ್ ಬೋರ್ಡ್‌ಗಳಲ್ಲಿ ಮಹಾತ್ಮರಿಗಿಂತ ಯುವಕರ ಫೋಟೋಗಳೇ ವಿಜೃಂಭಿಸುತ್ತಿರುವುದನ್ನು ಕಾಣಬಹುದು. ಬುದ್ಧನ ಮೂರ್ತಿಯ ಕೆಳಗೆ ಅಪವಿತ್ರ ಕಾರ್ಯಗಳು ನಡೆಯುತ್ತಿರುತ್ತವೆ. ಬಸವಣ್ಣನವರ ಅನುಭವ ಮಂಟಪದ ಜ್ಞಾನ ದಾಸೋಹದ ಕುರಿತು ಕಡೆಗಣಿಸಿ, ಮಹಾಮನೆಯಲ್ಲಿನ ಅನ್ನ ದಾಸೋಹಕ್ಕೆ ಹೆಚ್ಚು ಮಹತ್ವ ಕೊಡುತ್ತಿರುವಂತೆ ಕಾಣುತ್ತದೆ. ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನ ಗ್ರಂಥವನ್ನು ಒಂದು ಸಂಕೇತವಾಗಿ ಬಳಸಲಾಗುತ್ತಿದೆಯೇ ಹೊರತು ಅದರಲ್ಲಿನ ಪರಿಚ್ಛೇದಗಳನ್ನು ಬಹುಪಾಲು ಮಂದಿ ಓದಿ ತಿಳಿದಿರುವುದೇ ಇಲ್ಲ.

ನುಡಿದಂತೆ ನಡೆದ ಕಾರಣಕ್ಕೆ ಶರಣರು, ದಾಸರು, ದಾರ್ಶನಿಕರು ಇಂದಿಗೂ ಜನರ ನಾಲಿಗೆ ಮೇಲೆ ನಲಿದಾಡುತ್ತಿರುವುದು ಹಾಗೂ ನಡೆದಾಡುತ್ತಿರುವುದು. ಶತಶತಮಾನಗಳು ಉರುಳಿದರೂ ಅವರ ಹೆಸರು ಅಳಿಯದೇ ಉಳಿದಿರುತ್ತದೆ. ಅಂತಹ ಮೌಲ್ಯಯುತ ಬದುಕನ್ನು ಅವರು ನಡೆಸಿರುತ್ತಾರೆ. ಮಹಾತ್ಮ ಗಾಂಧಿಯವರನ್ನು ಇಡೀ ಜಗತ್ತು ಇಂದಿಗೂ ಕೊಂಡಾಡುತ್ತದೆ. ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ 'ಇನ್ನೊಂದು ಶತಮಾನ ಕಳೆದರೆ ಗಾಂಧಿಯಂತಹ ಮಹಾನ್ ವ್ಯಕ್ತಿ ಈ ಭೂಮಿ ಮೇಲೆ ನಡೆದಿದ್ದರು ಎಂದರೆ ಆ ಪೀಳಿಗೆ ನಂಬುವುದಿಲ್ಲ' ಎಂಬ ಮಾತನ್ನು ಹೇಳಿದ್ದಾರೆ. ಭಾರತ ದೇಶದ ಹಿತಕ್ಕಾಗಿ ಅವರ ತತ್ತ್ವ ಹಾಗೂ ಆದರ್ಶಗಳು ದಾರಿದೀಪಗಳಾಗಿದ್ದವು. ಮದ್ಯಪಾನ ವಿರೋಧಿಸುತ್ತಿದ್ದ ಗಾಂಧೀಜಿ, ಅದೊಂದು ಸಮಾಜಕ್ಕೆ ಅಂಟಿದ ವ್ಯಾಧಿ ಎನ್ನುತ್ತಿದ್ದರು. ಆದರೆ ಇಂದಿನ ಸರ್ಕಾರಗಳು ಅತಿ ಹೆಚ್ಚು ಆದಾಯವನ್ನು ಮದ್ಯ ಮಾರಾಟದಿಂದ ಪಡೆದು, ಸರ್ಕಾರದ ಬೊಕ್ಕಸ ತುಂಬಿಸಲು ಕ್ರಮವಹಿಸುತ್ತಿರುವುದು ಇದು ಗಾಂಧೀಜಿಯ ಭಾರತವಾ? ಎಂದು ಪ್ರಶ್ನಿಸುವಂತಿದೆ. ಮಹಾಮಹಿಮರ ಜನ್ಮ ದಿನಾಚರಣೆಯಾದ ಮೇಲೆ ಪಾರ್ಟಿ ಹೆಸರಿನಲ್ಲಿ ಮದ್ಯಪಾನ ಗೋಷ್ಠಿ ಮಾಡಿ ಸಂಭ್ರಮಿಸುವ ಎಷ್ಟೋ ವಿದ್ಯಾವಂತ ಜನರು ನಮ್ಮ ನಿಮ್ಮ ನಡುವೆ ಇದ್ದಾರೆ.

ಭಾರತ ದೇಶದ ಬೆನ್ನೆಲುಬು ಗ್ರಾಮಗಳು. ಹಾಗೆಯೇ ಗ್ರಾಮಗಳಲ್ಲಿಯೇ ಅತಿ ಹೆಚ್ಚು ಹೈನುಗಾರಿಕೆ ಉದ್ಯಮ ಇರುವುದು. ದಿನದ 24 ಗಂಟೆ ಹಳ್ಳಿಗಳಲ್ಲಿ ಹಾಲು ದೊರಕುವುದಿಲ್ಲ, ಆದರೆ ಮದ್ಯ ಮಾತ್ರ 24 ಗಂಟೆಗಳ ಕಾಲ ದೊರಕುತ್ತಿದೆ. ಹಳ್ಳಿಗಳ ಗೂಡಂಗಡಿಗಳಲ್ಲಿ ಎಗ್ಗಿಲ್ಲದೆ ಮದ್ಯ ಮಾರಾಟ ನಡೆಯುತ್ತಿದೆ. ಸರ್ಕಾರಕ್ಕೆ ಹೆಚ್ಚು ಆದಾಯ ಲಭಿಸುತ್ತದೆ ಎಂಬ ಕಾರಣಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತಿಲ್ಲ. ಭಾರತದ ಶಕ್ತಿಯಾದ ಯುವಜನರು ಇಂದು ಮದ್ಯದ ದಾಸರಾಗಿ, ದೇಶಕ್ಕೆ ಹೊರೆಯಾಗುತ್ತಿದ್ದಾರೆ. ಸ್ವಸ್ಥ ದೇಶ ನಿರ್ಮಾಣದ ಕನಸು ಕಂಡಿದ್ದ ದೇಶದಲ್ಲಿ ಮದ್ಯವ್ಯಸನಿಗಳ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಸಾಕ್ಷರತೆ ಪ್ರಮಾಣ ಹೆಚ್ಚಾಗುತ್ತಿದ್ದರೂ, ಅಪರಾಧಗಳ ಪ್ರಮಾಣವೂ ಸಹ ಹೆಚ್ಚಾಗುತ್ತಿರುವುದು ಇನ್ನೂ ಕಳವಳಕಾರಿ ಬೆಳವಣಿಗೆಯಾಗಿದೆ.

'ದಯವಿಲ್ಲದ ಧರ್ಮ ಅದಾವುದಯ್ಯ, ದಯವೇ ಧರ್ಮದ ಮೂಲವಯ್ಯ' ಎಂಬ ಮೌಲ್ಯವನ್ನು ಮನಮುಟ್ಟುವಂತೆ ಸರಳವಾಗಿ ಹೇಳಿದ್ದಾರೆ ಬಸವೇಶ್ವರರು. ಆದರೆ ಕಳೆದ ವಾರ ಕಾಶ್ಮೀರದಲ್ಲಿ ನಡೆದ ನರಮೇಧವು ಇಡೀ ಮನುಕುಲವೇ ಮನಃಕಲಕುವಂತಿದೆ. ಧರ್ಮದ ಹೆಸರಿನಲ್ಲಿ ಅಧರ್ಮದಿಂದ ಒಬ್ಬರ ಜೀವ ತೆಗೆಯುವುದು ಅದಾವ ಧರ್ಮಗ್ರಂಥದಲ್ಲಿದೆಯೋ ತಿಳಿಯೆ! ಸರ್ವ ಜನಾಂಗದ ಶಾಂತಿಯ ತೋಟವನ್ನು ಸೃಷ್ಟಿಸಲು ಶ್ರಮಿಸಿದ ಮಹಾಮಹಿಮರುಗಳು ತಿರುಗಾಡಿದ್ದ ನಮ್ಮ ದೇಶದಲ್ಲಿ ಇಂದು ಅಶಾಂತಿಯ ರಣಭೂಮಿ ನಿರ್ಮಾಣವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಮಹಾತ್ಮರ ಜಯಂತಿ ಮಹೋತ್ಸವದಂದು ಸಾಮಾಜಿಕ ಜಾಲತಾಣಗಳಲ್ಲಿ ಅವರ ಫೋಟೋಗಳನ್ನು ಹಾಕಿ ಶುಭ ಕೋರುವುದು ಇಂದು ಸಾಮಾನ್ಯವಾಗಿಬಿಟ್ಟಿದೆ. ವಾಟ್ಸಾಪ್ ಸ್ಟೇಟಸ್‌ನಲ್ಲಿ ಮಹಾತ್ಮರ ಫೋಟೋ ಹಾಕಿದಾಕ್ಷಣ ಅವರು ಹಾಕಿಕೊಟ್ಟ ಮೌಲ್ಯಗಳನ್ನು ಪಾಲಿಸಿದಂತೆ ಆಗುವುದಿಲ್ಲ. ಅವರ ಆದರ್ಶಗಳನ್ನು ಪಾಲಿಸಿದರೆ ಮಾತ್ರ ಸಾರ್ಥಕತೆ ಮೂಡುತ್ತದೆ. ಇಲ್ಲವಾದಲ್ಲಿ ಇವೆಲ್ಲವೂ ಕೇವಲ ತೋರಿಕೆಯಾಗುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಉತ್ತಮ ಓದುಗರಾಗಿದ್ದರು. ಹಾಗೆಯೇ ಅತಿಹೆಚ್ಚು ಪದವಿಗಳನ್ನು ಗಳಿಸಿದ್ದ ಮೇಧಾವಿ ಅವರಾಗಿದ್ದರು ಎಂದು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಅವರು ಅನುಸರಿಸಿದ ಮಾರ್ಗಗಳನ್ನು ಬಾಲ್ಯದಿಂದಲೇ ಅಳವಡಿಸಿಕೊಳ್ಳಬೇಕು, ಅವರ ತತ್ತ್ವಗಳ ಅನುಸರಣೆ ಆಗಬೇಕು. ಅವರ ಜ್ಞಾನಾರ್ಜನೆಯಿಂದ ಪ್ರಭಾವಿತರಾಗಿ ಅವರ ಅನುಯಾಯಿಗಳು ಪುಸ್ತಕ ಪ್ರೇಮಿಗಳಾಗಬೇಕು. ಹೆಚ್ಚು ಅಧ್ಯಯನಶೀಲರಾಗಿ ಜ್ಞಾನವಂತರಾಗಬೇಕು, ನೀತಿವಂತರಾಗಬೇಕು ಆಗ ಮಾತ್ರ ಸಮಾಜಕ್ಕೆ ಆಸ್ತಿ ಆಗಲು ಸಾಧ್ಯ. ಆಗ ಮಾತ್ರ ಅವರ ಜಯಂತಿ ಆಚರಣೆಗೆ ಒಂದು ಮಹತ್ವ ಬರುತ್ತದೆ.

ಬಸವಣ್ಣನವರು, 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ' ಎಂದು ವಚನವೊಂದರಲ್ಲಿ ಹೇಳಿರುವುದು ಮಾರ್ಮಿಕವಾಗಿದೆ. ಪ್ರಸ್ತುತದ ಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಅನೇಕ ಕಡೆಗಳಲ್ಲಿ ಮಹಾತ್ಮರ ಮೇಲಿನ ಗೌರವ ಹಾಗೂ ಅಭಿಮಾನದಿಂದ ಅವರ ಜನ್ಮದಿನಗಳನ್ನು ಆಚರಿಸುವ ಬದಲು ಜಾತಿಬಲದ ಪ್ರದರ್ಶನಕ್ಕೆ ಇಂತಹ ಕಾರ್ಯಕ್ರಮಗಳನ್ನು ವೇದಿಕೆಗಳಾಗಿ ಬಳಸಿ ಕೊಳ್ಳುತ್ತಿರುವುದು ತಿಳಿಯದ ವಿಷಯವೇನಲ್ಲ. ಇಂತಹ ಆಚರಣೆ ಗಳಿಂದ ಈ ಪೀಳಿಗೆಯ ಮಕ್ಕಳಿಗೆ ಕೊಡುವ ಸಂದೇಶವಾದರೂ ಏನು? ಎಂಬ ಪ್ರಶ್ನೆ ಮೂಡುತ್ತದೆ. ಆಚರಣೆಗಳಿಗೆ ಅರ್ಥ ಬರಬೇಕಾದರೆ ಮಹಾತ್ಮರನ್ನು ಅನುಸರಣೆ ಮಾಡಿದಾಗ ಮಾತ್ರ ಎಂಬುದನ್ನು ಮರೆಯಬಾರದು.

ಬಸವಣ್ಣನವರ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ' ಇದೊಂದು ವಚನವನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಇಡೀ ಜೀವಮಾನದಲ್ಲಿ ನೆಮ್ಮದಿ ತಮ್ಮದಾಗಿಸಿಕೊಳ್ಳಬಹುದು. ಅಂತಹ ಸರ್ವಶ್ರೇಷ್ಠ ವಚನ ಇದಾಗಿದೆ. ಎಲ್ಲರಿಗೂ ಎರಡು ದಿನಗಳ ಮೊದಲೆ ಬಸವ ಜಯಂತಿ ಶುಭಾಶಯಗಳನ್ನು ತಿಳಿಸಬಯಸುತ್ತೇನೆ.

ಹೂರಣ: ಮಹಾತ್ಮರ ಜನ್ಮ ದಿನಾಚರಣೆ ಮಾಡುವವರು ಮಾನವರು, ಅವರ ಆದರ್ಶ ಅನುಸರಣೆ ಮಾಡುವವರು ಪ್ರಾಜ್ಞರು!

ಪೆಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ




ಮಾಜಿ ಗೃಹಸಚಿವ ಪಿಜಿಆರ್ ಸಿಂಧ್ಯಾ, ಮಾಜಿ ಮೇಯರ್ ಪಿ.ವಿಶ್ವನಾಥ್ ಅವರ ನೇತೃತ್ವದಲ್ಲಿ ಪೆಹಲ್ಗಾಮ್ ಘಟನೆಯಲ್ಲಿ ಮೃತಪಟ್ಟವರಿಗೆ ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಕೋರಿದರು.

ಮೈಸೂರು, ಏ.27(ಎಸ್‌ಪಿಎನ್)- ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಹಾಗೂ ಮೈಸೂರು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಹಯೋಗದೊಂದಿಗೆ ಮೈಸೂರಿನ ಗೋಕುಲಂ ಮೂರನೇ ಹಂತದ ತ್ರಿನೇತ್ರ ವೃತ್ತದಲ್ಲಿ ಭಾನುವಾರ ಪೆಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲಿನ ಹತ್ಯಾಕಾಂಡವನ್ನು ಖಂಡಿಸಿ, ಮೃತಪಟ್ಟವರ ಆತ್ಮಕ್ಕೆ ಶಾಂತಿಕೋರಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಘಟಕದ ಆಯುಕ್ತರೂ ಆದ ಮಾಜಿ ಗೃಹಸಚಿವ ಪಿಜಿಆರ್ ಸಿಂಧ್ಯಾ ಹಾಗೂ ವಿದ್ಯಾವರ್ಧಕ ವಿದ್ಯಾಸಂಸ್ಥೆಯ ಕಾರ್ಯದರ್ಶಿಯೂ ಆದ ಮಾಜಿ ಮೇಯರ್ ಪಿ.ವಿಶ್ವನಾಥ್ ಅವರ ನೇತೃತ್ವದಲ್ಲಿ ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಕೋರಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಪಿಜಿಆರ್ ಸಿಂಧ್ಯಾ, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಹತ್ಯಾಕಾಂಡವನ್ನು ಯಾರೂ ಒಪ್ಪಲಾಗದು. ಪ್ರವಾಸಿಗರನ್ನು ಗುಂಡಿಕ್ಕಿ ಕೊಲ್ಲುವುದು ಅಮಾನವೀಯ. ಈ ಹತ್ಯಾಕಾಂಡದ ಹಿಂದಿರುವವರಿಗೆ ಕಠಿಣ ಶಿಕ್ಷೆ ನೀಡಬೇಕು. ಇದಕ್ಕಾಗಿ ಜನಸಾಮಾನ್ಯರು ಎಂತಹ ತ್ಯಾಗಕ್ಕಾದರೂ ದೇಶದೊಂದಿಗೆ ನಿಲ್ಲಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಘಟನೆಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದು, ಅವರ ಬೆಂಬಲಕ್ಕೆ ನಾವೆಲ್ಲರೂ ನಿಲ್ಲಬೇಕು ಎಂದು ಮನವಿ ಮಾಡಿದರು.

ಮಾಜಿ ಮೇಯರ್ ಪಿ.ವಿಶ್ವನಾಥ್ ಮಾತನಾಡಿದರು. ಇದಕ್ಕೂ ಮುನ್ನ ಕೆ.ಪಿ. ಕಾನ್ವೆಂಟ್ ಮುಂಭಾಗದಿಂದ ವಿದ್ಯಾವರ್ಧಕ ಇಂಜಿನಿಯರಿಂಗ್ ವಿದ್ಯಾರ್ಥಿಗಳು, ವಿವಿಧ ಶಾಲಾ ಕಾಲೇಜಿನ ಬೋಧಕರು, ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ತ್ರಿನೇತ್ರದ ವೃತ್ತದಲ್ಲಿ ಮೊಂಬತ್ತಿ ಬೆಳಗಿಸಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಕೋರಿದರು. ಈ ವೇಳೆ ವಿದ್ಯಾವರ್ಧಕ ತಾಂತ್ರಿಕ ಕಾಲೇಜಿ ಪ್ರಾಂಶುಪಾಲ ಡಾ.ಸದಾಶಿವೇಗೌಡ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಜಿಲ್ಲಾ ಘಟಕದ ಕಾರ್ಯದರ್ಶಿ ಅಬ್ದುಲ್ ಜಮೀಲ್ ಸೇರಿದಂತೆ ಇತರರಿದ್ದರು.

ವಿಕಲ ಚೇತನರ ಪ್ರತಿಭಟನೆಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಬೆಂಬಲ



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನವ ಕರ್ನಾಟಕ ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ವತಿಯಿಂದ ನಡೆಸುತ್ತಿರುವ ಪ್ರತಿಭಟನೆಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಬೆಂಬಲ ವ್ಯಕ್ತಪಡಿಸಿದರು.

ಮೈಸೂರು, ಏ.27- ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನವ ಕರ್ನಾಟಕ ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ಸದಸ್ಯರು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಬೆಂಬಲ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ್ದ ಅವರು, ರಾಜ್ಯ ಸರ್ಕಾರ ವಿಕಲ ಚೇತನರನ್ನು ಸಂಪೂರ್ಣವಾಗಿ ಕಡೆಗಾಣಿಸಿದೆ. ಆರೇಳು ದಿನಗಳಿಂದ ಧರಣಿ ನಡೆಸಿದರೂ ಸ್ಪಂದಿಸದಿರುವುದು ಮಾನವೀಯತೆಯಲ್ಲ. ಕೂಡಲೇ ವಿಕಲಚೇತನರ ಬೇಡಿಕೆ ಈಡೇರಿಸಬೇಕಿರುವುದು ಸರ್ಕಾರದ ಕರ್ತವ್ಯ ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳು ಇಲ್ಲಿಗೆ ಬಂದು ನಮ್ಮ ಬೇಡಿಕೆಗಳನ್ನು ಆಲಿಸಿ, ಸ್ಥಳದಲ್ಲೇ ಬೇಡಿಕೆ ಈಡೇರಿಸುವವರೆಗೂ ನಮ್ಮ ಹೋರಾಟ ಮುಂದುವರೆಸುತ್ತೇವೆ. ಅಂತಿಮವಾಗಿ ಅಮರಣಾಂತರ ಉಪವಾಸ ನಡೆಸಲು ಪ್ರತಿಭಟನಾನಿರತರು ನಿರ್ಧರಿಸಿದ್ದಾರೆ. ಹಾಗಾಗಿ ಸರ್ಕಾರ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.


ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್‌ಆರ್ ಡಬ್ಲ್ಯೂ, ವಿಆರ್‌ಡಬ್ಲ್ಯೂ ಮತ್ತು ಯುಆರ್‌ಡಬ್ಲ್ಯೂ ಹುದ್ದೆ ಕಾಯಂಮಾತಿ ಅಥವಾ ಕನಿಷ್ಠ ವೇತನ ವ್ಯಾಪ್ತಿಗೆ ತರುವುದು, ವಿಶೇಷ ಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 5,000ಕ್ಕೆ ಹೆಚ್ಚಿಸುವುದು, ದೈಹಿಕ ವಿಶೇಷ ಚೇತನರಿಗೆ ನೀಡಿರುವ ಬಸ್ ಪಾಸ್ ಮಿತಿಯನ್ನು ರಾಜ್ಯಾದ್ಯಂತ ವಿಸ್ತರಿಸುವುದು, ಮೈಸೂರು ನಗರದಲ್ಲಿ ವಾಸಿಸುತ್ತಿರುವ ವಿಶೇಷ ಚೇತನರಿಗೆ ಪ್ರತ್ಯೇಕ ಕಾಲೋನಿ ಅಥವಾ ನಿವೇಶನಗಳನ್ನು ಕಲ್ಪಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಧರಣಿ ನಡೆಸುತ್ತಿರುವುದು ನ್ಯಾಯಯುತವಾಗಿದ್ದು, ಇದಕ್ಕೆ ಎಲ್ಲರೂ ಬೆಂಬಲಿಸಬೇಕು ಎಂದರು.

ಮಾಜಿ ವೇಳೆ ಸಂದೇಶ್ ಸ್ವಾಮಿಯವರು ವೈಯಕ್ತಿಕ ನೆರವು ನೀಡಿದರು. ಬಿಜೆಪಿ ಎನ್.ಆರ್.ಕ್ಷೇತ್ರದ ಅಧ್ಯಕ್ಷ ಎಸ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಮಂಜು, ಮಾಜಿ ಕಾರ್ಪೊರೇಟರ್ ಸಾತ್ವಿಕ್, ಮುಖಂಡರಾದ ಮುರಳಿ, ಭಾನುಪ್ರಕಾಶ್, ವೇಲು, ಶೇಖರ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ರಸ್ತೆಗೆ ಚಾಚಿದ ಮರ: ಮಳೆಗಾಲಕ್ಕೂ ಮುನ್ನ ತೆರವುಗೊಳಿಸಲು ಸಾರ್ವಜನಿಕರ ಆಗ್ರಹ



ಆಲೂರು, ಏ.27– ಕಸಬಾ ಬೈರಾಪುರದಿಂದ ಮಗ್ಗೆ ಹಾಗೂ ಅಲೂರಿನಿಂದ ಕಾಮತಿಕೂಡಿಗೆ ಹೋಗುವ ರಸ್ತೆ ಇಕ್ಕೆಲಗಳಲ್ಲಿರುವ ಅಕೇಶಿಯಾ ಮರಗಳ ಕೊಂಬೆಗಳು ರಸ್ತೆಗೆ ಬಾಗಿಕೊಂಡಿವೆ.

ಕೆಲವು ಮರಗಳು ಒಣಗಿದ ಸ್ಥಿತಿಯಲ್ಲಿದ್ದು, ಮಳೆ, ಗಾಳಿ ಬರುವ ಸಂದರ್ಭದಲ್ಲಿ ವಾಹನಗಳು ಹಾಗೂ ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಸ್ತೆಯಲ್ಲಿ ಓಡಾಡುವ ಪಾದಚಾರಿಗಳು, ವಾಹನ ಸವಾರರಿಗೆ ನೆರಳಿನ ಆಸರೆಯಾಗಲಿ ಎಂಬ ಉದ್ದೇಶದಿಂದ 35 ವರ್ಷಗಳ ಹಿಂದೆ ಅರಣ್ಯ ಇಲಾಖೆಯು ರಸ್ತೆಯ ಎರಡೂ ಬದಿಗಳಲ್ಲಿ ಹಾಕಿದ್ದ ಅಕೇಶಿಯಾ ಮರಗಳು ಹೆಮ್ಮರವಾಗಿ ಬೆಳೆದು ನಿಂತಿವೆ. ತಿರುವುಗಳಲ್ಲಿ ಹಾಗೂ ಎದುರಿನಿಂದ ಬರುವ ವಾಹನಗಳು ಕಾಣಿಸದೇ ಇರುವುದರಿಂದ ಹೆಚ್ಚು ಅಪಘಾತಗಳು ಸಂಭವಿಸಿವೆ.

ವಾರದಿಂದ ಸುರಿಯುತ್ತಿರುವ ಮಳೆ, ಗಾಳಿಗೆ ಆಲೂರುನಿಂದ ಕಾಮತಿಕೂಡಿಗೆ ವರೆಗೂ ಹಲವು ಮರ ಹಾಗೂ ಮರದ ಕೊಂಬೆಗಳು ಅಲ್ಲಲ್ಲಿ ಬಿದ್ದಿದ್ದು, ತೆರವುಗೊಳಿಸಲು ಹರಸಾಹಸಪಡಬೇಕಾಯಿತು. ವಾಹನ ಮತ್ತು ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಸಂಚಾರಕ್ಕೆ ಅಡ್ಡಿಯಾಗಿರುವ ಮರಗಳನ್ನು ಕೂಡಲೇ ತೆರವು ಮಾಡುವಂತೆ ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಅಕೇಶಿಯಾ ಮರದ ಬೇರುಗಳು ಭೂಮಿಯಲ್ಲಿ ಆಳವಾಗಿರದೇ ಮೇಲ್ಪದರದಲ್ಲಿ ಅಗಲವಾಗಿ ಬೆಳೆಯುತ್ತಿದ್ದು, ಸ್ವಲ್ಪ ಗಾಳಿ, ಮಳೆಯಾದರೂ ಮರಗಳು ನೆಲಕ್ಕೆ ಉರುಳುತ್ತವೆ. ಐದಾರು ವರ್ಷಗಳಿಂದ ಮುಂಗಾರು ಮಳೆ, ಗಾಳಿ ಪ್ರಾರಂಭವಾದ ಸಂದರ್ಭದಲ್ಲಿ ಅಲ್ಲಲ್ಲಿ ಮರದ ಕೊಂಬೆಗಳು ಬೀಳುವುದರಿಂದ ಸಂಚಾರಕ್ಕೆ ತೊಂದರೆಯಾಗಿತ್ತು.

ಐದಾರು ದಿನಗಳಿಂದ ಈ ಭಾಗದಲ್ಲಿ ಗಾಳಿ, ಮಳೆಯಾಗುತ್ತಿದ್ದು, ರಸ್ತೆ ಬದಿಯಲ್ಲಿರುವ ಮರಗಳು ಅಥವಾ ಕೊಂಬೆಗಳು ರಸ್ತೆಗೆ ಉರುಳುತ್ತಿವೆ. ರಸ್ತೆ ಬದಿಯಲ್ಲಿ ಮರಗಳು ಇರುವುದರಿಂದ ಎದುರಿನಿಂದ ಬರುವ ವಾಹನಗಳು ತಿರುವು ರಸ್ತೆಯಲ್ಲಿ ಕಾಣಿಸದಂತಾಗಿದೆ ಮುಂಗಾರು ಮಳೆ ಪ್ರಾರಂಭವಾಗುವ ಮೊದಲು ಸಂಚಾರಕ್ಕೆ ಅಡ್ಡಿಯಾಗುವ ಮರಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಯಶಸ್ವಿಗೊಂಡ ಹಾಸನ ನಾದ ಧ್ಯಾನ ಚಕ್ರ–5 ಮೆಡಿಟೇಶನ್



ಹಾಸನ, ಏ.27– ನಗರದ ಬಿ.ಎಂ. ರಸ್ತೆ ಬಳಿ ಇರುವ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಹಾಸನ ನಾದ ಧ್ಯಾನ ಚಕ್ರ–5 ಮೆಡಿಟೇಶನ್ ಭಾನುವಾರದಂದು ಉದ್ಘಾಟನೆಗೊಂಡು ಸತತ 3 ಗಂಟೆಗಳ ಕಾಲ ಯಶಸ್ವಿಯಾಗಿ ಜರುಗಿತು. ಸಾವಿರಾರು ಜನರು ಧ್ಯಾನದಲ್ಲಿ ಮಗ್ನರಾಗಿದ್ದರು.

ಉತ್ತಮ ಆರೋಗ್ಯಕ್ಕಾಗಿ ಯೋಗಾಸನಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಅದೆ ರೀತಿ ಧ್ಯಾನಕ್ಕೂ ಕೂಡ ಸಾವಿರಾರು ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು. ಜ್ಞಾನಾಕ್ಷಿ ಕಲ್ಯಾಣ ಮಂಟಪ ಪೂರ್ಣ ಪ್ರಮಾಣದಲ್ಲಿ ತುಂಬಿ ತುಳುಕುತಿತ್ತು. ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಧ್ಯಾನಕ್ಕೆ ಚಾಲನೆ ಕೊಟ್ಟರು. ನಂತರ ಕೆಲ ಸಮಯದಲ್ಲೆ ಕೊಳಲು ವಾದನ ವೀಣೆಯನ್ನು ನುಡಿಸುವ ಮೂಲಕ ಧ್ಯಾನ ಆರಂಭವಾಯಿತು.

ಇದೇ ವೇಳೆ ಮೆಡಿಟೇಶನ್ ಕೋಚರ್ ಅಯ್ಯಪ್ಪ ಪಿಂಡಿ ಉದ್ದೇಶಿಸಿ ಮಾತನಾಡುತ್ತಾ, ಧ್ಯಾನ ಎಂಬುದು ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ನಾವು ಕಳೆದ 40 ದಿನಗಳಿಂದಲೂ ಹಾಸನದಲ್ಲಿ ಓಡಾಡಿದಾಗ ನಮಗೆ ಕೇಳಿ ಬಂದಿದ್ದು ನಮಗೂ ಧ್ಯಾನ ಬೇಕು ಎನ್ನುವ ಮಾತು. ಧ್ಯಾನದಲ್ಲಿ ಕರ್ನಾಟಕ ನಂಬರ್ ಒನ್ ಆಗಬೇಕು. ಪ್ರತಿ ಜಿಲ್ಲೆಯಲ್ಲೂ ಧ್ಯಾನ ಆದಾಗ ಮಾತ್ರ ಸಮಾಜದಲ್ಲಿ ಒಂದು ಬದಲಾವಣೆ ಕಾಣಬಹುದು. ಒತ್ತಡ ಹೋಗಲಾಡಿಸಲು ಧ್ಯಾನ ಎಂಬುದು ಬಹಳ ಮುಖ್ಯ. ಎಷ್ಟು ಮೆಡಿಷನ್, ರಿಸರ್ಚ್ ಸೈಂಟಿಸ್ಟ್ ಆಗಲಿ ಮೆಡಿ ಟೇಶನ್ ಮಾಡಬೇಕೆಂದು ಹೇಳುತ್ತಿದ್ದಾರೆ ಎಂದು ಹೇಳಿದರು.

ಕೋಆರ್ಡಿನೇಟರ್ ಮಮತಾ, ಸ್ವಾಮಿಗೌಡ, ರೋಟರಿ ಕ್ಲಬ್ ಆಫ್ ಸೆಂಟ್ರಲ್ ಹಾಸನ್ ಸದಸ್ಯ ರಮೇಶ್, ಬೊಮ್ಮೇಗೌಡ, ಪ್ರಕಾಶ್, ವಕೀಲೆ ಎಂ.ಸುಮಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ದಿ ಹಾಸನ್ ಕ್ಲಬ್ ಅಧ್ಯಕ್ಷರಾಗಿ ಡಿ.ಸಿ. ಅರವಿಂದ್ ಆಯ್ಕೆ



ಹಾಸನ, ಏ.27– ನಗರದ ಬಿ.ಎಂ. ರಸ್ತೆ ಬಳಿ ಇರುವ ದಿ ಹಾಸನ್ ಕ್ಲಬ್‌ನ 2025–28ನೇ ಸಾಲಿನ ಆಡಳಿತ ಮಂಡಳಿ ಚುನಾವಣೆಯು ಭಾನುವಾರ ನಡೆಯಿತು. ಮತ ಎಣಿಕೆಯಲ್ಲಿ ನೂತನ ಅಧ್ಯಕ್ಷರಾಗಿ ಡಿ.ಸಿ.ಅರವಿಂದ್ ಆಯ್ಕೆಗೊಂಡರು. ಚುನಾವಣೆಯಲ್ಲಿ 680 ಜನ ಮತದಾರರಿದ್ದು, ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಖಜಾಂಚಿ ಸ್ಥಾನಕ್ಕೆ ಹಾಗೂ 9 ಜನ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷರಾಗಿ ಡಿ.ಸಿ. ಅರವಿಂದ್ ಆಯ್ಕೆಗೊಂಡರು. ಕಾರ್ಯದರ್ಶಿಯಾಗಿ ಎಂ.ಕೆ.ಕಮಲ್ ಕುಮಾರ್, ಖಜಾಂಚಿಯಾಗಿ ಶಿವಣ್ಣ ಹಾಗೂ ನಿರ್ದೇಶಕರಾಗಿ ಕೆ.ಪಿ.ಅಮಿತ್, ಬಸವರಾಜು, ಜಯಚಂದ್ರ, ಬಿ.ಯು. ಮಹಾನ್, ಲಕ್ಷ್ಮೀಗೌಡ, ಅರುಣ್ ಕುಮಾರ್, ಮೂಡಲಪ್ಪ, ಅಶೋಕ್ ಕುಮಾರ್, ಪ್ರಸನ್ನ (ಪಾಪು) 9 ಜನರು ನಿರ್ದೇಶಕರಾಗಿ ಆಯ್ಕೆಗೊಂಡರು.

ಎಂಸಿಇ ಕಾಲೇಜು ನೌಕರರ ಕಲ್ಯಾಣ ಸಂಘಕ್ಕೆ ಆಯ್ಕೆ



ಹಾಸನ, ಏ.27– ನಗರದ ಸಾಲಗಾಮೆ ರಸ್ತೆ ಬಳಿ ಇರುವ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ನೌಕರರ ಕಲ್ಯಾಣ ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆಯು ಕಾಲೇಜಿನ ಅಲ್ಯುಮಿನಿ ಹಾಲ್‌ನಲ್ಲಿ ನಡೆದು ಕಾರ್ಯದರ್ಶಿಯಾಗಿ ಜಿ.ಬಿ.ಪಾಂಡುಕುಮಾರ್ ಗೆಲುವು ಕಂಡರು. ಇದೇ ವೇಳೆ ಕಾಲೇಜಿನ ಮಾಜಿ ಕಾರ್ಯದರ್ಶಿ ಹಾಗೂ ಕಾಲೇಜಿನ ಅಧೀಕ್ಷಕ ಕಟ್ಟಾಯ ಶಿವಕುಮಾರ್ ಹಾರ ಹಾಕಿ ಅಭಿನಂದಿಸಿದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಕರುಣೆ ಇಲ್ಲದ ಕೃತ್ಯ

ಡಾ.ಕಲ್ಯಾಣಸಿರಿ ಭಂತೇಜಿ ಆಕ್ರೋಶ



ಮೈಸೂರಿನ ಪೊಲೀಸ್ ಬಡಾವಣೆಯ ಜೈಭೀಮ್ ಬಂಧು ಬಳಗವು ಸಮಾನಮನಸ್ಕರ ವೇದಿಕೆ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನದ ಕಾರ್ಯಕ್ರಮದಲ್ಲಿ ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ ಮಾತನಾಡಿದರು.

ಮೈಸೂರು,ಏ.27(ಎಂಟಿವೈ)– ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿ ಕರುಣೆಯಿಲ್ಲದ ಕೃತ್ಯ ಎಂದು ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಪೊಲೀಸ್ ಬಡಾವಣೆಯ (ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ ಹಾಗೂ ಐಪಿಎಸ್ ಶ್ರೀನಿವಾಸನ್ ನಗರ) ಜೈಭೀಮ್ ಬಂಧು ಬಳಗವು ಸಮಾನಮನಸ್ಕರ ವೇದಿಕೆ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರುಣೆ, ಮಾನವೀಯತೆ ಮತ್ತು ಪ್ರೀತಿ ಇಲ್ಲದ ದೇಶ ನಾಶವಾಗಲಿದೆ. ಹೆತ್ತ ತಾಯಿ ಮತ್ತು ಹೊತ್ತ ಭೂಮಿ ಸ್ವರ್ಗಕ್ಕಿಂತ ಮಿಗಿಲು. ಭಾರತ ಇತರೆ ದೇಶಕ್ಕಿಂತ ಭಿನ್ನ ಎಂಬುದು ಈಗಾಗಲೇ ಗೊತ್ತಾಗಿದೆ. ದೇಶ ಪ್ರಬುದ್ಧವಾಗಬೇಕಾದರೆ ಎಲ್ಲರೂ ಉದ್ಧಾರ ಆಗಬೇಕು ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಅಂಬೇಡ್ಕರ್ ಅವರು ಒಂದು ಸಮುದಾಯಕ್ಕೆ ಸೀಮಿತವಾದ ಕೆಲಸ ಮಾಡಲಿಲ್ಲ. ಎಲ್ಲಾ ಜಾತಿಗೆ ಹಕ್ಕು, ಅಧಿಕಾರ ತಂದುಕೊಟ್ಟರು. ಹಿಂದೂ ಕೋಡ್ ಬಿಲ್ ಜಾರಿಗೆ ಅವಿರತ ಶ್ರಮಿಸಿದರು. ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೆ ಶ್ರಮಿಸಿದರು. ಕಾರ್ಮಿಕ ಯಂತ್ರವಲ್ಲ ಎಂಬ ವಿಚಾರವನ್ನು ಮುಂದೆ ತಂದರು. ಹೆಣ್ಣುಮಕ್ಕಳಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟರು ಎಂದು ತಿಳಿಸಿದರು.

ದೇಶದಲ್ಲಿರುವ ತುಳಿತಕ್ಕೊಳಗಾದ ಜನ ಉನ್ನತ ಶಿಕ್ಷಣ ಪಡೆಯಬೇಕು, ಪ್ರಜ್ಞಾವಂತರಾಗಬೇಕು. ಶೋಷಿತ ವರ್ಗದ ಜನ ದೇಶವನ್ನು ಆಳುವ ವರ್ಗವಾಗಿ ರೂಪುಗೊಳ್ಳಬೇಕು. ಬುದ್ಧ ಧಮ್ಮದ ಕಡೆ ನನ್ನ ಜನ ಹೊರಳಬೇಕು ಎಂಬುದು ಅಂಬೇಡ್ಕರ್ ಅವರ ಸಂಕಲ್ಪವಾಗಿತ್ತು. ನಮ್ಮ ಉದ್ಧಾರದ ಆಸೆ ಅಂಬೇಡ್ಕರ್ ಅವರ ಕಲ್ಪನೆಯಾಗಿತ್ತು. ಆಳುವ ವರ್ಗದ ಕಡೆಗೆ ಹೋಗುವುದು ಈಗಿನ ಸಂದರ್ಭದಲ್ಲಿ ಕಷ್ಟವಿದೆ. ಆದರೆ, ಶಿಕ್ಷಣ ಪಡೆಯಲು ಕಷ್ಟವಿಲ್ಲ. ಆ ಕಡೆ ಗಮನ ಕೊಡಬೇಕು. ಭಾರತ ಇಂದು ರೋಗಗ್ರಸ್ತವಾಗಿದೆ. ಯಾವ ಸಮಾಜ, ಧರ್ಮ ಮತ್ತೊಂದು ಸಮಾಜವನ್ನು ಕಡೆಗಣಿಸುತ್ತದೋ ಅದು ಧರ್ಮವೇ ಅಲ್ಲ. ಧರ್ಮ ಎಂದರೆ ವೈಚಾರಿಕ ಭಾವನೆ ಹೊಂದಿರಬೇಕು, ಕಿಡಿಗೇಡಿ ಮನಸ್ಥಿತಿ ಇರಬಾರದು. ಮಾನವೀಯ ಮೌಲ್ಯಗಳನ್ನು, ಗುಣಗಳನ್ನು ಹೊಂದಿರಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಜೆ.ಸೋಮಶೇಖರ್, ಡಿಸಿಪಿ ಕೆ.ಎಸ್.ಸುಂದರರಾಜ್, ಆಲನಹಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸ್ವರ್ಣ, ಬಳಗದ ಅಧ್ಯಕ್ಷ ವೈ.ಎಂ.ರಂಗಸ್ವಾಮಿ, ಪದಾಧಿಕಾರಿಗಳಾದ ಮೋಹನ್, ಶಿವಸ್ವಾಮಿ, ಸಿದ್ದೇಶ್, ಶಾಂತರಾಜು, ಶ್ರೀನಿವಾಸ್ ಪ್ರಸಾದ್, ನಾಗರಾಜು, ಶಿವರಾಮಚಂದ್ರ ಮತ್ತಿತರರು ಉಪಸ್ಥಿತರಿದ್ದರು. ಈ ವೇಳೆ ಬಳಗದ ಸದಸ್ಯ ಪ್ರವೀಣ್ ಸಂವಿಧಾನ ಪೀಠಿಕೆ ಬೋಧಿಸಿದರು.

ಮೈಸೂರಲ್ಲಿ ಆಟಿಸಂ ಜಾಗೃತಿ ಜಾಥಾ



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಆಯೋಜಿಸಿದ್ದ ಆಟಿಸಂ ಜಾಗೃತಿ ಜಾಥಾಕ್ಕೆ ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಶಂಕರಗೌಡ ಪಾಟೀಲ್ ಚಾಲನೆ ನೀಡಿದರು.

ಮೈಸೂರು,ಏ.27(ಎಂಟಿವೈ)– ವಿಶ್ವ ಆಟಿಸಂ ಜಾಗೃತಿ ದಿನದ ಅಂಗವಾಗಿ ಮೈಸೂರಲ್ಲಿ ಭಾನುವಾರ ದೇವದಾನ್ ಫೌಂಡೇಶನ್ ಕಲಿಕಾ ಕೇಂದ್ರ ಹಾಗೂ ಪಾದಾ ಟ್ರಸ್ಟ್ ಆಯೋಜಿಸಿದ್ದ ಆಟಿಸಂ ಜಾಗೃತಿ ಜಾಥಾದಲ್ಲಿ ಹಲವು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ 'ಭರವಸೆಯ ನಡಿಗೆಯೊಂದಿಗೆ– ಆಟಿಸಂ ಸ್ವೀಕರಿಸೋಣ' ಘೋಷಣೆಯೊಂದಿಗೆ ಆಯೋಜಿಸಿದ್ದ ವಾಕಥಾನ್ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನ ತಲುಪಿ ಕೊನೆಗೊಂಡಿತು.

ಇದೇ ವೇಳೆ ವಾಕಥಾನ್‌ಗೆ ಚಾಲನೆ ನೀಡಿದ ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಶಂಕರಗೌಡ ಪಾಟೀಲ್ ಮಾತನಾಡಿ, ಆಟಿಸಂ ಎನ್ನುವುದು ಗುರುತಿಸಲ್ಪಟ್ಟ 21 ಅಂಗವೈಕಲ್ಯಗಳಲ್ಲಿ ಒಂದಾಗಿದೆ. ಇಂತಹ ಕಾಯಿಲೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮಗಳು ಅಗತ್ಯ. ಆಟಿಸಂನ ಗುಣ ಲಕ್ಷಣಗಳನ್ನು ಆರಂಭದಲ್ಲಿಯೇ ಗುರುತಿಸಿ, ಚಿಕಿತ್ಸೆ ಕೊಡಿಸಿದರೆ ಸಮಸ್ಯೆಯನ್ನು ಬಗೆಹರಿಸಬಹುದು. ಅದಕ್ಕಾಗಿ ಸರ್ಕಾರದ ನೆರವು ಸಿಗುತ್ತದೆ ಎಂದರು. ಇದೇ ವೇಳೆ ಆಟಿಸಂ ಕುರಿತು ಶಾಶ್ವತಿ ಸಿಂಗ್ ಹಾಗೂ ಮನೋವೈದ್ಯ ಡಾ.ಕೃಷ್ಣ ಮಾತನಾಡಿದರು.

ಈ ಸಂದರ್ಭದಲ್ಲಿ ದೇವದಾನ್ ಫೌಂಡೇಶನ್ ಕಲಿಕಾ ಕೇಂದ್ರದ ನಿರ್ದೇಶಕ ಕೋಟೆರ ದೇವಯ್ಯ, ಪಾದಾ ಟ್ರಸ್ಟಿನ ಟ್ರಸ್ಟಿ ಸಂಗೀತ, ಫ್ಯಾಷನ್ ಡಿಸೈನರ್ ಜಯಂತಿ ಬಲ್ಲಾಳ್, ದೇವದಾನ್ ಫೌಂಡೇಶನ್ ಸಂಸ್ಥಾಪಕ ಉತ್ತಪ್ಪ, ಅಧ್ಯಕ್ಷೆ ಧನ್ಯಾ ಉತ್ತಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ಶ್ರೀ ಗುರುಶಾಂತ ಸ್ವಾಮೀಜಿಯವರ ಪುಣ್ಯಾರಾಧನೆ, ಅಕ್ಕಮಹಾದೇವಿ, ಬಸವ ಜಯಂತ್ಯುತ್ಸವ

ಮೈಸೂರು, ಏ.27(ಜಿಎ)–ಶ್ರೀ ಹೊಸಮಠ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಏ.28, 29ರಂದು ವಿದ್ವಾನ್ ಶ್ರೀ ಗುರುಶಾಂತ ಸ್ವಾಮೀಜಿಯವರ 30ನೇ ಪುಣ್ಯಾರಾಧನೆ ಹಾಗೂ ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯುತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮಹದೇವಪ್ಪ ಹೇಳಿದರು.

ಶ್ರೀ ಹೊಸಮಠದ ಶ್ರೀ ನಟರಾಜ ಕಲ್ಯಾಣ ಮಂದಿರದಲ್ಲಿ ಏ.28ರಂದು ಬೆಳಗ್ಗೆ 6ಕ್ಕೆ ಶ್ರೀ ಗುರುಶಾಂತ ಸ್ವಾಮೀಜಿ ಗದ್ದುಗೆಗೆ ವಿಶೇಷ ಪೂಜೆ ಮಾಡಲಾಗುವುದು. ಬೆಳಗ್ಗೆ 9ಕ್ಕೆ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಲಿಂಗಾಯತ ಹೆಣ್ಣು ಮಕ್ಕಳಿಗೆ ಲಿಂಗ ದೀಕ್ಷಾ ಸಂಸ್ಕಾರ ಏರ್ಪಡಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಗ್ಗೆ 11ಕ್ಕೆ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್ ಉದ್ಘಾಟಿಸುವರು. ಕನ್ನಡ ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ ಅಕ್ಕನ ಜಾಗತಿಕ ಚಿಂತನೆಗಳು ಕುರಿತು ಉಪನ್ಯಾಸ ನೀಡುವರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಎನ್.ಕೆ.ಲೋಲಾಕ್ಷಿ ಅಧ್ಯಕ್ಷತೆ ವಹಿಸುವರು ಎಂದರು.

ಏ.29ರಂದು ಬೆಳಗ್ಗೆ 10.30ಕ್ಕೆ ಬಸವ ಜಯಂತಿ ಕಾರ್ಯಕ್ರಮವನ್ನು ಕೊಡಗು ವಿವಿ ಕುಲಪತಿ ಡಾ.ಅಶೋಕ್ ಆಲೂರು ಉದ್ಘಾಟಿಸುವರು. ಬಸವಣ್ಣನವರ ದೃಷ್ಟಿಯಲ್ಲಿ ಸಮಸಮಾಜ ಕುರಿತು ಕಥೆಗಾರರಾದ ಅಬ್ದುಲ್ ರಶೀದ್ ಮಾತನಾಡುವರು.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಬಿ.ಎಂ. ಮರಪ್ಪ, ನಟರಾಜ ಪ್ರತಿಷ್ಠಾನ ಆಡಳಿತಾಧಿಕಾರಿ ಬಿ.ದಿಲೀಪ್, ಹೊಸಮಠ ವಾತ್ಸಲ್ಯ ಬಿ.ಎಡ್ ಕಾಲೇಜಿನ ಪ್ರಾಂಶುಪಾಲರಾದ ಮಹೇಶ್ ದಳಪತಿ ಉಪಸ್ಥಿತರಿದ್ದರು.



ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಡಾ.ಎಂ.ಬಿ.ಮಂಜೇಗೌಡ, ಉಪಾಧ್ಯಕ್ಷ ಡಾ.ಆನಂದ, ನಿರ್ದೇಶಕರಾದ ಹನುಮಂತ, ಯೋಗಾನಂದ, ಮುತ್ತುಕುಮಾರ್, ಚಂದ್ರಶೇಖರ್, ಯತಿರಾಜು, ರಾಮನಾಥನ್, ಮಂಜುನಾಥ್, ಶಿವಶಂಕರ್, ಉತ್ತೇಜ್, ಶ್ರೀಮತಿ ಶ್ವೇತಾ, ನಿರ್ಮಲ, ಚಂದ್ರಶೇಖರ್, ನಂದಕುಮಾರ್, ರೈಲ್ವೆ ಮಜ್ದೂರ್ ಯೂನಿಯನ್ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸ್ಥಿತಿವಂತರು ಉಚಿತ ಯೋಜನೆಗಳ ತಿರಸ್ಕರಿಸಿ

ಆರ್‌ಎಸ್‌ಎಸ್ ಕಾರ್ಯಕರ್ತ ಪುಟ್ಟಸ್ವಾಮಿ ಮನವಿ

ಮೈಸೂರು,ಏ.27(ಎಂಟಿವೈ)– ರಾಜ್ಯ ಹಾಗೂ ಕೇಂದ್ರ ಸರ್ಕಾರ ನೀಡುವ ಉಚಿತ ಯೋಜನೆಗಳ ಸದುಪಯೋಗವನ್ನು ಆರ್ಥಿಕವಾಗಿ ಪ್ರಬಲವಾಗಿರುವವರು ತಿರಸ್ಕರಿಸಿ, ಅರ್ಹರಿಗೆ ಸೌಲಭ್ಯ ಸಿಗುವಂತೆ ಸಹಕರಿಸಬೇಕು ಎಂದು ಮಹದೇವಪುರ ನಿವಾಸಿ, ಆರ್‌ಎಸ್‌ಎಸ್ ಕಾರ್ಯಕರ್ತ ಪುಟ್ಟಸ್ವಾಮಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನೊಬ್ಬ ಆರ್‌ಎಸ್‌ಎಸ್ ಕಾರ್ಯಕರ್ತನೂ ಹಾಗೂ ರೈತನೂ ಆಗಿದ್ದು, ಮನೆಯಲ್ಲಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಆದರೆ, ರಾಜ್ಯ ಸರ್ಕಾರ ಜಾರಿಗೊಳಿಸಿರುವ ಉಚಿತ ಯೋಜನೆಗಳು ದುರ್ಬಳಕೆಯಾಗುತ್ತವೆ. ಸರ್ಕಾರಿ ನೌಕರರು ಸೇರಿದಂತೆ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಗ್ಯಾರಂಟಿ ಯೋಜನೆಗಳು ಅರ್ಹರಿಗೆ ತಲುಪಿಸುವ ಉದ್ದೇಶದಿಂದ ಹಾಗೂ ಅನಗತ್ಯ ಹೊರೆ ತಪ್ಪಿಸುವುದಕ್ಕೆ ಆರ್ಥಿಕವಾಗಿ ಸ್ಥಿತಿವಂತರು, ಸರ್ಕಾರಿ ನೌಕರರು ಗ್ಯಾರಂಟಿ ಯೋಜನೆಗಳನ್ನು ಸ್ವಯಂ ಪ್ರೇರಣೆಯಿಂದ ತಿರಸ್ಕರಿಸಬೇಕು. ಆ ಮೂಲಕ ಮಾದರಿಯಾಗಬೇಕು. ಕೇಂದ್ರ ಸರ್ಕಾರದ ಉಚಿತ ಯೋಜನೆಗಳನ್ನು ಸ್ಥಿತಿವಂತರು ತಿರಸ್ಕರಿಸಬೇಕು ಎಂದು ಮನವಿ ಮಾಡಿದರು.

ಪ್ರತಿದಿನ ಬೆಳಗಾದರೆ ಟಿವಿಗಳಲ್ಲಿ ಜಾತಿ ಸಂಘರ್ಷ, ಕೋಮು ಗಲಭೆ, ಅಪರಾಧ, ಆತ್ಮಹತ್ಯೆಯಂತಹ ವರದಿಗಳು ವೈಭವೀಕರಣಗೊಳಿಸಿ, ಬಿತ್ತರಿಸಲಾಗುತ್ತಿದೆ. ಇದರಿಂದ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ಸುದ್ದಿ ಪ್ರಸಾರ ಮಾಡುವಾಗ ಸಮಾಜದ ಹಿತದ ಬಗ್ಗೆ ಚಿಂತಿಸಬೇಕು ಎಂದರು.

ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿರುವ ಗುಂಡಿನ ದಾಳಿ ಖಂಡನೀಯ. ಹಿಂದೂಗಳನ್ನೇ ಗುರಿಯಾಗಿಸಿಕೊಂಡು ಹತ್ಯೆ ಮಾಡಿರುವುದು ತಲೆ ತಗ್ಗಿಸುವ ಸಂಗತಿ. ಇಂತಹ ಘಟನೆಗಳಿಂದ ಹಿಂದೂ ಕಾರ್ಯಕರ್ತರು ಪ್ರಚೋದನೆಗೊಳಿಸಿದಂತಾಗುತ್ತದೆ ಎಂದು ತಿಳಿಸಿದರು.

ಪ್ರಾಥಮಿಕ ಶಿಕ್ಷಣ ಕ್ಷೇತ್ರ ಕಡೆಗಣಿಸದಂತೆ ಒತ್ತಾಯಿಸಿ ಸಹಿ ಸಂಗ್ರಹ ಅಭಿಯಾನ



ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸದಂತೆ ಒತ್ತಾಯಿಸಿ 50 ಲಕ್ಷ ಸಹಿ ಸಂಗ್ರಹ ಚಳವಳಿಗೆ ಚಾಲನೆ ನೀಡಲಾಯಿತು.

ಮೈಸೂರು, ಏ.27(ಎಸ್‌ಪಿಎನ್)– ರಾಜ್ಯ ಸರ್ಕಾರ ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸದಂತೆ ಒತ್ತಾಯಿಸಿ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಗಾಂಧಿ ಚೌಕದಲ್ಲಿ 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿದರು.


ರಾಜ್ಯದಲ್ಲಿ 6 ಸಾವಿರಕ್ಕೂ ಹೆಚ್ಚು ಏಕೋಪಾಧ್ಯಾಯ ಶಾಲೆಗಳಿವೆ. ಇದರಲ್ಲಿ 3,500ಕ್ಕೂ ಹೆಚ್ಚು ಶಾಲೆಗಳಲ್ಲಿ ಬಳಕೆಗೆ ಯೋಗ್ಯ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಹಲವು ಶಾಲೆಗಳ ಕಟ್ಟಡಗಳು ದುರಸ್ತಿ ಕಂಡು ವರ್ಷಗಳೇ ಕಳೆದಿವೆ. ಗ್ರಾಮೀಣ ಪ್ರದೇಶದ ಶಾಲಾ ಚಾವಣಿಗಳು ಸೋರುತ್ತಿವೆ. ಎಲ್ಲದಕ್ಕಿಂತ ಮುಖ್ಯವಾಗಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಪಿಎಸ್‌ಟಿ ಮತ್ತು ಜಿಪಿಟಿ ಗೊಂದಲದಿಂದಾಗಿ 59 ಸಾವಿರಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿಯಿದ್ದರೂ ನೇಮಕ ಮಾಡಲು ಸರ್ಕಾರ ಮುಂದಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ರಾಜ್ಯದಲ್ಲಿ 29 ಸಾವಿರಕ್ಕಿಂತ ಹೆಚ್ಚು ಪ್ರಾಥಮಿಕ ಸರ್ಕಾರಿ ಶಾಲೆಗಳು ಶಿಥಿಲಗೊಂಡು ಬೀಳುವ ಹಂತದಲ್ಲಿವೆ. ಸರ್ಕಾರದ ಬೇಜವಾಬ್ದಾರಿತನದಿಂದ, ಹಲವು ವರ್ಷಗಳಿಂದ ದುರಸ್ತಿ ಕಾಣದ ಶಾಲೆಗಳ ಚಾವಣಿ ಕುಸಿದು ಮಕ್ಕಳು ಗಾಯಗೊಂಡಿದ್ದು, ಪ್ರಾಣ ಕಳೆದುಕೊಂಡಿದ್ದರೂ ರಾಜ್ಯ ಸರ್ಕಾರ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯದ ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಕಡಿಮೆ ದಾಖಲಾತಿ ಹೆಸರಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ನಿರ್ಧಾರ, ಬಡವರ ಮಕ್ಕಳಿಂದ ಶಾಶ್ವತವಾಗಿ ಶಿಕ್ಷಣವನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ ಎಂದು ಆರೋಪಿಸಿದರಲ್ಲದೆ, ಮೈಸೂರಲ್ಲಿ 891 ಶಾಲೆಗಳನ್ನು ಮುಚ್ಚುತ್ತಿರುವುದು ಬೇಸರದ ಸಂಗತಿ. ಕೂಡಲೇ ಹಾಜರಾತಿ ಕಡಿಮೆ ಇರುವ ಶಾಲೆಗಳನ್ನು ಮುಚ್ಚುವ ಬದಲು ಅವಶ್ಯಕ ಮೂಲ ಸೌಲಭ್ಯಗಳನ್ನು ನೀಡಿ ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮಾ, ಚಂದನ, ಚಂದ್ರಿಕಾ, ದಿಶಾ ಅಂಜಲಿ ನಂದೀಶ್, ವಿದ್ಯಾರ್ಥಿಗಳಾದ ಅಭಿಷೇಕ್, ಆರತಿ, ಚೆಲುವರಾಜ್, ಆನಂದ್, ರಕ್ಷಿತಾ ದೀಕ್ಷಾ ಭಾಗವಹಿಸಿದ್ದರು.

ಆದಿಶಕ್ತಿ ಪಟ್ಟಲದಮ್ಮ ಪೂಜಾ ಮಹೋತ್ಸವ...



ಮೈಸೂರಿನ ವಿಶ್ವೇಶ್ವರನಗರ ಡಿ.ದೇವರಾಜ ಅರಸು ಕಾಲೋನಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿಶಕ್ತಿ ಪಟ್ಟಲದಮ್ಮ ಅವರ ಪೂಜಾ ಮಹೋತ್ಸವ, ಮೆರವಣಿಗೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮುಖಂಡರಾದ ಪಳನಿಸ್ವಾಮಿ, ಶಂಕರ್, ನವೀನ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್ ಮತ್ತಿತರರು ಉಪಸ್ಥಿತರಿದ್ದರು.

10ಎಕ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ಔಪಚಾರಿಕ ಉದ್ಘಾಟನೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ '10ಎಕ್ಸ್ ಇಂಟರ್‌ನ್ಯಾಷನಲ್ ಸ್ಕೂಲ್' ಅನ್ನು ಔಪಚಾರಿಕವಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು,ಏ.27(ಪಿಎಂ)– ಮೈಸೂರಿನ ಮೊದಲ ಐಬಿ ಶಾಲೆ '10ಎಕ್ಸ್ ಇಂಟರ್‌ನ್ಯಾಷನಲ್ ಸ್ಕೂಲ್' ಅನ್ನು ಔಪಚಾರಿಕವಾಗಿ ಉದ್ಘಾಟಿಸಲಾಯಿತು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೈಸೂರು ರಾಜವಂಶಸ್ಥರೂ ಆದ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಇಂಡಸ್ ಟ್ರಸ್ಟ್‌ನ 10ಎಕ್ಸ್ ಇಂಟರ್‌ನ್ಯಾಷನಲ್ ಸ್ಕೂಲಿನ (ಅಂತಾರಾಷ್ಟ್ರೀಯ ಬ್ಯಾಕಲೌರಿಯೇಟ್ ಸಿಲಬಸ್) ಕಟ್ಟಡದ ಮಾಡೆಲ್ ಅನ್ನು ಅನಾವರಣಗೊಳಿಸುವ ಮೂಲಕ ಉದ್ಘಾಟಿಸಿದರು.

ವಿದ್ಯಾರಣ್ಯಪುರಂನ ಮಾನಂದವಾಡಿ ರಸ್ತೆಯಲ್ಲಿ ಶಾಲಾ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು, ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಸಿಲಿಕಾನ್ ವ್ಯಾಲಿ ಉದ್ಯಮಿಯೂ ಆದ ಇಂಡಸ್ ಟ್ರಸ್ಟ್‌ನ ಟ್ರಸ್ಟಿ ಡಾ.ಕುಮಾರ್ ಮಳವಳ್ಳಿ ಅವರು ಅಮೆರಿಕದಿಂದ ಆನ್‌ಲೈನ್ ಮೂಲಕ ಸಮಾರಂಭದಲ್ಲಿ ಮಾತನಾಡಿ, 21ನೇ ಶತಮಾನಕ್ಕೆ ಪೂರಕವಾಗಿ ಶಿಕ್ಷಣವನ್ನು ಮರು ವ್ಯಾಖ್ಯಾನಿಸುವ ದೃಷ್ಟಿಕೋನವನ್ನು 10ಎಕ್ಸ್ ಇಂಟರ್‌ನ್ಯಾಷನಲ್ ಶಾಲೆ ಹೊಂದಿದೆ. ವಿದ್ಯಾರ್ಥಿಗಳು ಭಾರತವನ್ನು ನಾಯಕತ್ವದ ಭೂಮಿಯಾಗಿ ನೋಡುವಂತೆ ಪ್ರೇರೇಪಿಸುವುದು ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.

10ಎಕ್ಸ್ ಒಂದು ನಾವೀನ್ಯತೆ ಶಾಲೆಯಾಗಿ ಆರಂಭಗೊಳ್ಳುತ್ತಿದ್ದು, ಅನ್ವೇಷಣೆಗಳಲ್ಲಿ ಹತ್ತು ಪಟ್ಟು ಉತ್ತಮರಾಗಲು ಮತ್ತು ಉತ್ತಮ ಸಾಧನೆ ಮಾಡಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಬದ್ಧವಾಗಿದೆ. ಉದ್ಯಮಶೀಲತೆ, ಸಮುದಾಯ ಸೇವೆ ಮತ್ತು ವೃತ್ತಿ ಮಾರ್ಗದರ್ಶನದ ಮೇಲೆ ಬಲವಾದ ಗಮನವನ್ನು ಶಾಲೆ ನೀಡಲಿದೆ ಎಂದರು.

ಇದಕ್ಕೂ ಮುನ್ನ ಬೆಂಗಳೂರಿನ ಇಂಡಸ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥನಾ ನೃತ್ಯ ಪ್ರದರ್ಶಿಸಿದರು. ಇಂಡಸ್ ಟ್ರಸ್ಟ್‌ನ ಸಿಇಓ ಮತ್ತು ಎಂಡಿ ಲೆಫ್ಟಿನೆಂಟ್ ಜನರಲ್ ಅರ್ಜುನ್ ರೇ (ನಿವೃತ್ತ), 10ಎಕ್ಸ್ ಇಂಟರ್ ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲ ಡಾ.ಚಿರಾಗ್ ಝಾಲಾ ಸೇರಿದಂತೆ ಇನ್ನಿತರ ಗಣ್ಯರು, ಮೈಸೂರಿನ ಹಲವು ಗಣ್ಯ ನಾಗರಿಕರು ಹಾಜರಿದ್ದರು.



ಜಿಲ್ಲಾ ಮಟ್ಟದ ಬೌದ್ಧ ಸಮ್ಮೇಳನದಲ್ಲಿ ಭಾಗವಹಿಸಿರುವ ಸಚಿವರುಗಳು ಮತ್ತು ಮುಖಂಡರು.

ಶೋಷಿತ ಸಮಾಜ ಮುಖ್ಯವಾಹಿನಿಗೆ ಬರಲು ಬುದ್ಧ, ಬಸವಣ್ಣ, ಅಂಬೇಡ್ಕರ್ ಸನ್ಮಾರ್ಗ ಅಗತ್ಯ

ಜಿಲ್ಲಾ ಮಟ್ಟದ ಬೌದ್ಧ ಸಮ್ಮೇಳನದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅಭಿಮತ

ಮಂಡ್ಯ,ಏ.27– ಶೋಷಿತ ಸಮುದಾಯ ಸಮಾಜದಲ್ಲಿ ಮುಖ್ಯ ವಾಹಿನಿಗೆ ಬರಲು ಸಮಾಜ ಸುಧಾರಕರಾದ ಬುದ್ಧ, ಬಸವಣ್ಣ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಸನ್ಮಾರ್ಗವನ್ನು ಅನುಸರಿಸಬೇಕೆಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕರೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಡ್ಯ ಜಿಲ್ಲಾ ಬುದ್ಧಿಸ್ಟ್ ಒಕ್ಕೂಟ, ಮಾನವ ಬಂಧುತ್ವ ವೇದಿಕೆ ಹಾಗೂ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಸಹಯೋಗದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಬೌದ್ಧ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಇಲ್ಲದಿದ್ದರೆ ನಾವಿನ್ನು ಜೀತ ಪದ್ಧತಿಯಲ್ಲಿ ಇರಬೇಕಿತ್ತು. ಅಂಬೇ ಡ್ಕರ್ ಅವರ ಸಂವಿಧಾನ ಒಂದು ಸಮುದಾಯಕ್ಕೆ ಮಾತ್ರ ಅಲ್ಲ, ದೇಶದ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಿದೆ ಎಂದರು.

ಬಹಳ ದೊಡ್ಡ ಧರ್ಮವಾದ ಬೌದ್ಧ ಧರ್ಮ 6ನೇ ಶತಮಾನದಲ್ಲಿ ನಮ್ಮೆಲ್ಲರಿಗೂ ಸಮಾನತೆ, ಶಾಂತಿ, ಸಹಬಾಳ್ವೆ ತೋರಿಸಿದ ಧರ್ಮವಾಗಿದೆ. ಆದರೂ ನಾವೆಲ್ಲರೂ ಈಗಲೂ ಸಂಘರ್ಷ ಮಾಡಿಕೊಂಡು ಬದುಕುತ್ತಿದ್ದು, ಡಾ.ಬಿ.ಆರ್.ಅಂಬೇಡ್ಕರ್, ಬುದ್ಧ, ಬಸವಣ್ಣ ಅವರು ನಮ್ಮ ಸಮಾಜದಲ್ಲಿ ಬದುಕಿ ನಮಗೆ ಸನ್ಮಾರ್ಗ ಕೊಟ್ಟಿದ್ದರೂ ಅವರು ಹೇಳಿದ ಹಾದಿಯಲ್ಲಿ ಹೋಗಲು ನಮಗೆ ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.

ನಮ್ಮಲ್ಲಿ ಮೊದಲು ಸಂಘರ್ಷ ಹೋಗಬೇಕು. ಶಿಕ್ಷಣದಿಂದ ನಮ್ಮಲ್ಲಿ ಸಾಕಷ್ಟು ಬದಲಾವಣೆ ಆಗಬೇಕು. ಅದೇ ಕಾರಣಕ್ಕೆ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಮಹತ್ವ ಕೊಟ್ಟಿದ್ದರು. ಬೌದ್ಧ ಧರ್ಮ ಮೊದಲು ಇದ್ದಿದ್ದು ಭಾರತದಲ್ಲಿ. ಇಂದು ಪ್ರತಿ ಮನೆಯಲ್ಲಿ ಬೌದ್ಧ ಧರ್ಮ ಬೆಳೆಯಬೇಕಿತ್ತು. ಆದರೆ ಇಲ್ಲಿ ಕೆಲವರು ಬೆಳೆಯಲು ಬಿಡಲಿಲ್ಲ, ಪ್ರಪಂಚದ ಹೊರಗಿನ ದೇಶಗಳಾದ ಚೀನಾ, ಜಪಾನ್, ಹಾಂಕಾಂಗ್, ಸಿಂಗಾಪುರ, ಮಲೇಷಿಯಾಗಳಂತ ದೇಶಗಳಲ್ಲಿ ಬೆಳೆಯಿತು, ಇದಲ್ಲದೆ ಬಸವಣ್ಣ ಅವರು ಲಿಂಗಾಯತ ಧರ್ಮ ಸ್ಥಾಪಿಸಿದರು. ಆದರೆ, ಅದನ್ನು ಸಹ ಬೆಳೆಯಲು ಬಿಡಲಿಲ್ಲ. ಯಾವ ಧರ್ಮ ಸಮಾಜಕ್ಕೆ ಒಳ್ಳೆಯದನ್ನು ಬಯಸುತ್ತದೆಯೋ ಅಂತಹ ಧರ್ಮವನ್ನು ನಾಶ ಮಾಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂದು ಈ ಸಮ್ಮೇಳನಕ್ಕೆ ಬರುವ ಉದ್ದೇಶ ನಿಮ್ಮ ಜೊತೆ ನಾವಿದ್ದೇವೆಂಬುದನ್ನು ಹೇಳಲು. ಬುದ್ಧರ ಅನೇಕ ಸಂದೇಶಗಳನ್ನು ನಾವು ಇನ್ನೂ ತಲುಪಲು ಆಗಲಿಲ್ಲ. ಬಸವಣ್ಣನವರ 22 ಸಾವಿರ ತತ್ವಗಳನ್ನು ಇನ್ನು ತಲುಪಿಲ್ಲ, ಅವೆಲ್ಲವನ್ನು ಅಳಿಸಿ ಹಾಕಿ 2000 ತತ್ವ ಸಂದೇಶಗಳನ್ನಷ್ಟೇ ಉಳಿಸಿದ್ದಾರೆ. ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನವನ್ನು ಬದಲಿಸುವ ಕೆಲಸ ಆಆಗುತ್ತಿದ್ದು, ಅದನ್ನು ಉಳಿಸುವ ಕೆಲಸ ನಾವು ಮಾಡಬೇಕು ಎಂದು ತಿಳಿಸಿದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ದೇಶದ ಆಡಳಿತ ಚುಕ್ಕಾಣಿ ಹಿಡಿದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಇವರ ಬೆಂಬಲಕ್ಕೆ ನಿಂತಿರುವ ಆರ್‌ಎಸ್‌ಎಸ್‌ನವರು ಒಮ್ಮೆ ಸಂವಿಧಾನ ಒಪ್ಪುತ್ತಾರೆ, ಮತ್ತೊಮ್ಮೆ ಟೀಕೆಯನ್ನು ಮಾಡುತ್ತಾರೆ. ಇವರಿಗೆ ಸಂವಿಧಾನದ ಮಹತ್ವವೇ ಗೊತ್ತಿಲ್ಲ. ದೇಶದಲ್ಲಿ ಸಮಾನತೆಯ ಬದುಕಿಗಾಗಿ ಹೋರಾಟ ನಡೆದಿದೆ. ಮಹನೀಯರು ಪ್ರಾಮಾಣಿಕವಾಗಿ ಸ್ಪಂದಿಸಿದ್ದಾರೆ. ಆದರೆ ಸಮಾನತೆಯ ಹೋರಾಟದಲ್ಲಿ ಎಂದು ಸಹ ಗುರುತಿಸಿಕೊಂಡಿರದವರು ಜಾತ್ಯತೀತ ವ್ಯವಸ್ಥೆ, ಸಮಾನತೆ ಪ್ರತಿಪಾದಿಸುವ ಬುದ್ಧಿಜೀವಿಗಳು ಹಾಗೂ ಶೋಷಿತರ ಪರವಾಗಿರುವ ಕಾಂಗ್ರೆಸ್ ಪಕ್ಷವನ್ನು ಸದಾಕಾಲ ಬಿಜೆಪಿ ಮತ್ತಿತರರು ಟೀಕಿಸುತ್ತಾ ಬಂದಿದ್ದಾರೆ, ಜನತೆ ಇತಿಹಾಸ ಅರಿಯದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಶಾಸಕ ಪಿ.ರವಿಕುಮಾರ್ ಗಣಿಗ ಮಾತನಾಡಿದರು. ವೇದಿಕೆಯಲ್ಲಿ ಚನ್ನಲಿಂಗನಹಳ್ಳಿ ಬೌದ್ಧ ಬಿಕ್ಕು ಮನೋರಕ್ಕಿತ ಬಂತೇಜಿ, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಆರ್.ನಂದಿನಿ, ಬುದ್ಧಿಸ್ಟ್ ಒಕ್ಕೂಟದ ಎಂ.ಸಿ.ಬಸವರಾಜು, ದೇವರಾಜ್ ಕೊಪ್ಪ, ಮುಖಂಡರಾದ ಸುನಂದಾ ಜಯರಾಂ, ಸಿ.ಶಿವಲಿಂಗಯ್ಯ ಇನ್ನಿತರರು ಉಪಸ್ಥಿತರಿದ್ದರು.

ಒಂದೇ ಕುಟುಂಬದ ಐವರು ನಾಪತ್ತೆ



ನಾಪತ್ತೆಯಾಗಿರುವ ಸುರೇಶ್ ಕುಟುಂಬ

ಶ್ರೀರಂಗಪಟ್ಟಣ: ಒಂದೇ ಕುಟುಂಬದ ಐವರು ನಾಪತ್ತೆಯಾಗಿರುವ ಘಟನೆ ಕೆ.ಆರ್.ಸಾಗರ ನಲ್ಲೂರು ಫೈಲ್ ಬಡಾವಣೆಯಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಸುಬ್ಬಯ್ಯನವರ ಹಿರಿಯ ಮಗಳು ಗರ್ಭಿಣಿ ಭಾವನ(22), ಈಕೆ ಮಗ ಹೇಮಂತ್, ಭಾವನ ಪತಿ ಸುರೇಶ್ (29) ಮತ್ತು ಸುಬ್ಬಯ್ಯ ಅವರ ಕಿರಿಯ ಮಗಳು ಐಶ್ವರ್ಯ(14) ಏ.15 ರಂದು ಮನೆಯಿಂದ ಹೋದವರು ನಾಪತ್ತೆಯಾಗಿದ್ದಾರೆ. ಸುರೇಶ್ ಮೈಸೂರು ಜ್ಯೋತಿ ನಗರದ ನಿವಾಸಿಯಾಗಿದ್ದು ಈತ ಮೈಸೂರು ನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಏ.15 ರಂದು ಮನೆಯಿಂದ ಹೊರಟ ಇವರು ಎಲ್ಲಿದ್ದಾರೆ ಎಂಬುದು ತಿಳಿಯದಾಗಿದೆ. ಇಲ್ಲಿಯ ತನಕ ಇವರಿಗಾಗಿ ಹುಡುಕಾಟ ಮಾಡಿದ್ದು ತಡವಾಗಿ ದೂರು ನೀಡಿರುವುದಾಗಿ ಸುಬ್ಬಯ್ಯ ದೂರಿನಲ್ಲಿ ತಿಳಿಸಿದ್ದಾರೆ.

ಚಹರೆ : ಸುರೇಶ್ 5.7 ಅಡಿ ಎತ್ತರ ಎಣ್ಣೆಗೆಂಪು ಬಣ್ಣ, ಕೋಲು ಮುಖ ಗಡ್ಡ ಬಿಟ್ಟಿದ್ದು, ಕಪ್ಪು ಬಣ್ಣದ ತುಂಬುತೋಳಿನ ಶರ್ಟ್, ನೀಲಿದ ಬಣ್ಣದ ಪ್ಯಾಂಟ್ ಧರಿಸಿದ್ದಾನೆ.

2. ಭಾವನ 5.2 ಅಡಿ ಎತ್ತರ ಸಾಧರಣ ಮೈಕಟ್ಟು, ಗೋಧಿ ಮೈಬಣ್ಣ, ಕೋಲು ಮುಖ ಕೆಂಪು ಬಣ್ಣದ ಟಾಪು, ಕಪ್ಪು ಬಣ್ಣದ ಆಂಕಲ್ ಪ್ಯಾಂಟ್ ಧರಿಸಿದ್ದಾರೆ.

3. ಹೇಮಂತ 2 ವರ್ಷ ದುಂಡು ಮುಖ, ಗೋಧಿ ಮೈಬಣ್ಣ, ನೀಲಿ ಬಣ್ಣದ ಶರ್ಟ್ ನೀಲಿ ಬಣ್ಣದ ನಿಕ್ಕರ್ ಧರಿಸಿರುತ್ತಾನೆ.

4. ಐಶ್ವರ್ಯ ದುಂಡು ಮುಖ 5.3 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧರಣ ಮೈಕಟ್ಟು, ಗುಲಾಬಿ ಬಣ್ಣದ ಟಾಪು ಹಾಗೂ ಗುಲಾಬಿ ಬಣ್ಣದ ಲೆಗಿನ್ಸ್ ಪ್ಯಾಂಟ್ ಧರಿಸಿದ್ದಾಳೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಕೆ.ಆರ್.ಸಾಗರ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ ಅಥವಾ ಸಬ್‌ಇನ್ಸ್‌ಪೆಕ್ಟರ್ ಮೊಬೈಲ್ ಸಂಖ್ಯೆ 9480804856 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮಾದಾಪುರದಲ್ಲಿ ಗ್ರಾಮದೇವತೆ ರಂಗದ ಹಬ್ಬ



ಕಿಕ್ಕೇರಿ ಹೋಬಳಿಯ ಮಾದಾಪುರದಲ್ಲಿ ಗ್ರಾಮದೇವತೆ ಸಿಂಗಮ್ಮ ದೇವಿಯ ರಂಗದ ಹಬ್ಬ ಸಡಗರ ಸಂಭ್ರಮದಿಂದ ಜರುಗಿತು. ರಂಗಕುಣಿತದಾರರು ಕಾಲಿಗೆ ಗೆಜ್ಜೆ, ಹಣೆಗೆ ತಿಲಕವಿಟ್ಟುಕೊಂಡು ಕೈಯಲ್ಲಿ ಟವಲ್ ಹಿಡಿದು ತಮಟೆ ನಾದಕ್ಕೆ ಲಯವಾದ ಗೆಜ್ಜೆಯ ಹೆಜ್ಜೆ ಹಾಕಿದರು.

ಪಾಲಹಳ್ಳಿಯಲ್ಲಿ ಡಿಜಿಟಲ್ ಗ್ರಂಥಾಲಯ



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಿರ್ಮಿಸಲಾಗಿರುವ ಡಿಜಿಟಲ್ ಗ್ರಂಥಾಲಯವನ್ನು ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಜಿಲ್ಲಾ ಡಿಸಿಸಿ ಬ್ಯಾಂಕಿನ ನಿರ್ದೇಶಕ ಪಿ.ಎಸ್. ಚಂದ್ರಶೇಖರ್, ಗ್ರಾಪಂ ಅಧ್ಯಕ್ಷ ಆದರ್ಶ್, ಉಪಾಧ್ಯಕ್ಷೆ ಆಶಾ, ಹಿರಿಯ ಖಗೋಳ ವಿಜ್ಞಾನಿ ವಿಶ್ವನಾಥ್, ಪೈ ಮುಕುಂದ, ಇಓ ವೇಣು, ಪಿಡಿಓ ರವಿ, ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಸೀತಾಪುರ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪಾಂಡವಪುರ, ಏ.27– ತಾಲೂಕಿನ ಸೀತಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಜೆಡಿಎಸ್–ರೈತಸಂಘ ಬೆಂಬಲಿತ ಅಭ್ಯರ್ಥಿಗಳು ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ರೈತ ಸಂಘದ ಚಂದ್ರಶೇಖರ್ ಅಧ್ಯಕ್ಷರಾಗಿ, ಜೆಡಿಎಸ್ ರಾಜೇಶ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ಸೀತಾಪುರ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದಲ್ಲಿ ಜೆಡಿಎಸ್–ರೈತಸಂಘ ಮೈತ್ರಿಕೂಟದಿಂದ ಆಯ್ಕೆಯಾದ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ರಾಜೇಶ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಸಹಕಾರ ಸಂಘ 11 ಮಂದಿ ನಿರ್ದೇಶಕರ ಸಂಖ್ಯಾಬಲ ಹೊಂದಿದ್ದು, ಇದರಲ್ಲಿ ಜೆಡಿಎಸ್–ರೈತಸಂಘದ ಮೈತ್ರಿಕೂಟದ 9 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದರು. ಗ್ರಾಪಂ ಮಾಜಿ ಅಧ್ಯಕ್ಷ ಸೀತಾಪುರ ವಿಶ್ವನಾಥ್ ನೇತೃತ್ವದಲ್ಲಿ ಎರಡು ಪಕ್ಷದ ಸಹ ಒಡಂಬಡಿಕೆಯ ಮೂಲಕ ಅಧಿಕಾರವನ್ನು ಹಂಚಿಕೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಚುನಾವಣೆಯಲ್ಲಿ ಜೆಡಿಎಸ್–ರೈತ ಸಂಘದ ಮೈತ್ರಿಯ ಚಂದ್ರಶೇಖರ್, ರಾಜೇಶ್, ರಮೇಶ್, ಅಂಬರೀಶ್, ವೆಂಕಟೇಶ್, ನಂದೀಶ್, ಬಾಲಕೃಷ್ಣ, ರೇವಣ್ಣ, ಲಕ್ಷ್ಮಮ್ಮ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಆಯ್ಕೆಯಾದ ಜೆಡಿಎಸ್–ರೈತಸಂಘದ ಮೈತ್ರಿಕೂಟದ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಭಿನಂಧಿಸಿದರು.

ಮಾಜಿ ಸಚಿವ ಪುಟ್ಟರಾಜು ಮಾತನಾಡಿ, ಸಹಕಾರ ಸಂಘಗಳು ಪಕ್ಷಾತೀತವಾಗಿ ಕೆಲಸ ಮಾಡಬೇಕು ಎಂಬುದಕ್ಕ ಉದಾಹರಣೆ ಸೀತಾಪುರ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ. ಸಹಕಾರ ಸಂಘದಲ್ಲಿ ಜೆಡಿಎಸ್–ರೈತಸಂಘದ ಮೈತ್ರಿಕೂಟ ನಿರ್ದೇಶಕರು ಒಡಂಬಡಿಕೆ ಮೂಲಕ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಸಹಕಾರ ಸಂಘದಲ್ಲಿ ಎರಡು ಪಕ್ಷದವರು ಸೇರಿ ಜತೆಗೂಡಿ ಕೆಲಸ ಮಾಡಲಿ ಎಂಬ ಕಾರಣದಿಂದ ನಿರ್ದೇಶಕರನ್ನು ಆಯ್ಕೆ ಮಾಡಿದ ಗ್ರಾಮದ ಜನರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಸಹ ಸಂಘದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು ಎಂದರು.


ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ವಿಶ್ವನಾಥ್, ಎಸ್.ಎಂ.ಅರುಣೇಶ್, ಗಿರೀಶ್, ರವಿ, ನಂದೀಶ್, ರಾಜೇಶ್, ಅರುಣ, ರಾಮಕೃಷ್ಣ, ಕಿಶೋರ್, ರಾಜು, ಸ್ವಾಮೀಗೌಡ, ವೈರಮುಡಿ, ಜಯವರ್ಧನ್, ಉಮೇಶ್, ಲಕ್ಷ್ಮೀಗೌಡ, ಶ್ರೀಧರ, ಗ್ರಾಪಂ ಸದಸ್ಯರಾದ ಉಮೇಶ್, ಶಿವರಾಮು, ಅಶೋಕ್ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ಗ್ಯಾಲರಿ ಕುಸಿದು ಓರ್ವ ಸಾವು



ಗ್ಯಾಲರಿ ಕುಸಿದಿರುವುದು.



ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಗಾಯಾಳು ಆರೋಗ್ಯ ವಿಚಾರಿಸಿದರು.

ಗಾಯಗೊಂಡಿದ್ದು, ಅವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಿಗೆ ರಾತ್ರಿಯೇ ದಾಖಲು ಮಾಡಲಾಗಿದೆ. ಘಟನಾ ಸ್ಥಳಕ್ಕೆ ತಡರಾತ್ರಿ ಭೇಟಿ ನೀಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿ, ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು. ಘಟನೆ ಕುರಿತು ಮಾತನಾಡಿದ ಅವರು, ಘಟನೆಯಲ್ಲಿ ಓರ್ವ ಸಾವನ್ನಪ್ಪಿ, ಮಕ್ಕಳು ಸೇರಿ 13 ಮಂದಿಯಷ್ಟು ಗಾಯಗೊಂಡಿದ್ದಾರೆ ಎಂಬುದು ದುಃಖಕರವಾದ ಸಂಗತಿ. ಈ ಪಂದ್ಯಾವಳಿ ಆಯೋಜಕರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಪೊಲೀಸರಿಗೆ ಸೂಚಿಸಿದರು.

ಇಂತಹ ಪಂದ್ಯಾವಳಿ ಆಯೋಜಿಸುವಾಗ ಮುಂಜಾಗ್ರತಾ ಕ್ರಮ ವಹಿಸಬೇಕು. ಇಲ್ಲದಿದ್ದರೆ ಇಂತಹ ಅನಾಹುತಗಳು ಸಂಭವಿಸುತ್ತವೆ. ಮೃತ ಮತ್ತು ಗಾಯಾಳುಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಜಿಲ್ಲಾಡಳಿತದೊಂದಿಗೆ ಚರ್ಚಿಸುವೆ ಎಂದು ತಿಳಿಸಿದರು. ಇನ್ನು ಭಾನುವಾರ ಬೆಳಿಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಹ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಹ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘಟನೆಯಲ್ಲಿ ಓರ್ವ ಸಾವನ್ನಪ್ಪಿ, ಹಲವು ಮಂದಿ ಗಾಯಗೊಂಡಿರುವುದು ನಿಜಕ್ಕೂ ದುರಂತ. ಗಾಯಾಳುಗಳು ಬೇಗ ಗುಣಮುಖರಾಗಬೇಕು. ಮೃತ ಪಾಪಣ್ಣಚಾರ್ ಕುಟುಂಬಕ್ಕೆ ಸೂಕ್ತ ಪರಿಹಾರ ದೊರಕಿಸಿ ಕೊಡುವಂತೆ ಒತ್ತಾಯಿಸಿದರು.

ಘಟನೆ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕಬಡ್ಡಿ ಪಂದ್ಯಾವಳಿ ವೇಳೆ ಗ್ಯಾಲರಿ ಕುಸಿದು ಓರ್ವ ಸಾವನ್ನಪ್ಪಿ, ಹಲವು ಮಂದಿ ಗಾಯಗೊಂಡಿರುವುದು ದುರಾದೃಷ್ಟಕರ. ಘಟನೆ ಅತ್ಯಂತ ದುಃಖ ಭರಿಸಿದ್ದು, ಮೃತರ ಕುಟುಂಬಕ್ಕೆ ಶಾಂತಿ ಸಿಗಲಿ. ಗಾಯಗೊಂಡಿರುವ ಆರು ಮಕ್ಕಳು ಸೇರಿದಂತೆ ಎಲ್ಲರೂ ಬೇಗ ಗುಣಮುಖರಾಗಲಿ ಎಂದಿದ್ದಾರೆ.

ಘಟನೆ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಂದ್ಯಾವಳಿ ಆಯೋಜಕರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಬೇಡವೆಂದು ಹೇಳಿಲ್ಲ

ಇದೇ ವೇಳೆ ಕೆಲವು ಕಿಡಿಗೇಡಿಗಳು ಯುದ್ಧೋನ್ಮಾದವನ್ನು ಸೃಷ್ಟಿಸಿ ದೇಶದೊಳಗಿನ ಸೌಹಾರ್ದತೆಯನ್ನು ಕಲಕುವ ಪ್ರಯತ್ನ ಮಾಡುತ್ತಿದ್ದು ಇಂತಹವರ ವಿರುದ್ಧವೂ ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು. ಇಂದು ದೇಶ ಅತ್ಯಂತ ಸೂಕ್ಷ್ಮ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬಾಹ್ಯ ಶತ್ರುವನ್ನು ಎದುರಿಸಬೇಕಾದರೆ ಆಂತರಿಕವಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕಾಗುತ್ತದೆ. ಪಾಕಿಸ್ತಾನ ಇಂದು ಆರ್ಥಿಕವಾಗಿ ದಿವಾಳಿಯಾಗಿರುವ ರೋಗಗ್ರಸ್ತ ದೇಶವಾಗಿದೆ. ಅವರು ಕಳೆದುಕೊಳ್ಳುವುದೇನೂ ಇಲ್ಲ. ಈ ಕಾರಣದಿಂದಾಗಿಯೇ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ಬೆಳೆಯುತ್ತಿರುವ ಭಾರತ ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗಿದೆ. ಈ ಸಂದರ್ಭದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಪಾಕ್ ಪ್ರೇರಿತ ಭಯೋತ್ಪಾದನೆಯನ್ನು ಖಂಡಿಸಿ ಭಾರತದ ಪರವಾಗಿ ನಿಂತಿವೆ. ಈ ಬೆಳವಣಿಗೆಯನ್ನು ಭಾರತ ಸದುಪಯೋಗಪಡಿಸಿಕೊಂಡು ಪಾಕಿಸ್ತಾನ ಮುಂದೆಂದೂ ಇಂತಹ ದುಸ್ಸಾಹಸಕ್ಕೆ ಕೈಹಾಕದಂತೆ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಶಾಕ್ ನೀಡಿದ ಭಾರತ

ಇದು ಅಂತರರಾಷ್ಟ್ರೀಯ ನಿಯಮಗಳು ಮತ್ತು ನೀರಿನ ಒಪ್ಪಂದಗಳ ಸಂಪೂರ್ಣ ಉಲ್ಲಂಘನೆ ಎಂದು ಹೇಳಿದ್ದಾರೆ. ನೀರು ರಭಸವಾಗಿ ಹರಿಯಲು ಆರಂಭಿಸಿತ್ತು. ನಾವು ಜೀವ ಮತ್ತು ಆಸ್ತಿಯನ್ನು ರಕ್ಷಿಸಲು ಈಗ ಹೆಣಗಾಡುತ್ತಿದ್ದೇವೆ ಎಂದು ಪಾಕ್ ಆಕ್ರಮಿತ ಕಾಶ್ಮೀರದ ನದಿ ದಂಡೆಯಲ್ಲಿರುವ ಡುಮೆಲ್ ಎಂಬ ಹಳ್ಳಿಯ ನಿವಾಸಿ ಹೇಳಿದ್ದಾರೆ

ಭಾರತವು ಉದ್ದೇಶಪೂರ್ವಕ 'ಜಲ ಭಯೋತ್ಪಾದನೆಯಲ್ಲಿ' ತೊಡಗಿದೆ ಎಂದು ಪಿಒಕೆ ಸರ್ಕಾರ ಆರೋಪಿಸಿದೆ. ಹಟ್ಟಿಯನ್ ಬಾಲಾದಲ್ಲಿ ಆಡಳಿತವು ತಾತ್ಕಾಲಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಾವು ನಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದ್ದೇವೆ. ಆದರೆ ಭಾರೀ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ಜಿಲ್ಲಾಡಳಿತ ಹೇಳಿದೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರ ದಾಳಿ ನಡೆಸಿದ ಬಳಿಕ ಭಾರತ ಸಿಂಧೂ ನದಿ ಒಪ್ಪಂದವನ್ನು ಅಮಾನತಿನಲ್ಲಿಟ್ಟಿದೆ. ಒಪ್ಪಂದವನ್ನು ಅಮಾನತಿನಲ್ಲಿಟ್ಟ ಕಾರಣ ಭಾರತ ಯಾವಾಗ ಬೇಕಾದರೂ ಪಾಕಿಸ್ತಾನಕ್ಕೆ ಮಾಹಿತಿ ನೀಡದೇ ನೀರನ್ನು ಹರಿಸಬಹುದಾಗಿದೆ. ಉರಿ ಜಲಾಶಯದಿಂದ ನೀರನ್ನು ಹರಿಸಿದ ಬಗ್ಗೆ ಭಾರತ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಉಡಾಯಿಸಬಲ್ಲ ಯಶಸ್ವಿ ಕ್ಷಿಪಣಿ ಪರೀಕ್ಷೆ

ಒಪ್ಪಂದವನ್ನು ರದ್ದುಗೊಳಿಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಅಬ್ಬಾಸಿ ಈ ಬೆದರಿಕೆ ಹಾಕಿದ್ದಾರೆ. ತಿನ್ನೋಕೆ ಹಿಟ್ಟಿಲ್ಲದಿದ್ರು ಇಂಥ ಮಾತುಗಳಿಗೇನು ಕಡಿಮೆಯಿಲ್ಲ. ಹನೀಫ್ ಅಬ್ಬಾಸಿ ಭಾರತವು ಸಿಂಧೂ ನದಿಯ ನೀರನ್ನು ನಿಲ್ಲಿಸಿದರೆ "ಪೂರ್ಣ ಪ್ರಮಾಣದ ಯುದ್ಧ" ನಡೆಯುತ್ತದೆ ಎಂದಿದ್ದಾರೆ. ಪಾಕಿಸ್ತಾನದ ಪರಮಾಣು ಶಸ್ತ್ರಗಳು ಪ್ರದರ್ಶನಕ್ಕಲ್ಲ, ದಾಳಿಗೆ ಸಿದ್ಧವಾಗಿವೆ ಎಂದಿದ್ದಾರೆ. ಅವರ ಕ್ಷಿಪಣಿಗಳು ಭಾರತದ ಮೇಲೆ ಗುರಿಯಾಗಿವೆ ಎಂದು ಬೆದರಿಕೆ ಹಾಕಿದ್ದಾರೆ. ಇಂತಹ ಮಾತುಗಳು ಜವಾಬ್ದಾರಿಯಿಂದ ಕೂಡಿರುವ ಸಚಿವನಿಗೆ ಶೋಭೆ ತರುವುದಿಲ್ಲ. ಪಾಕಿಸ್ತಾನ ಶಾಂತಿಯ ಬದಲು ಯುದ್ಧದ ಮಾತಾಡುತ್ತಿದೆ. ಇದು ಅವರ ದುರಾಸೆ ಮತ್ತು ದುರಹಂಕಾರವನ್ನು ತೋರಿಸುತ್ತದೆ.

ಅಮೆರಿಕಾದಲ್ಲಿ ಪತ್ನಿ, ಪುತ್ರನಿಗೆ ಗುಂಡಿಕ್ಕಿ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಮೈಸೂರು ಉದ್ಯಮಿ ಹರ್ಷ ಕಿಕ್ಕೇರಿ

- ಮತ್ತೊಬ್ಬ ಪುತ್ರ ಅದೃಷ್ಟವಶಾತ್ ಪಾರು
- ಕೌಟುಂಬಿಕ ಕಾರಣವೇ ದುರಂತಕ್ಕೆ ಕಾರಣ ಶಂಕೆ

ಮೈಸೂರು, ಏ.27– ಮೈಸೂರಿನ ಯಶಸ್ವಿ ಉದ್ಯಮಿ ಹರ್ಷ ಕಿಕ್ಕೇರಿ ಅಲಿಯಾಸ್ ಹರ್ಷವರ್ಧನ್(57) ಅವರು ಅಮೆರಿಕಾದಲ್ಲಿ ಪತ್ನಿ ಹಾಗೂ ಪುತ್ರನಿಗೆ ಗುಂಡಿಕ್ಕಿ ಹತ್ಯೆ ಮಾಡಿ, ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಮೆರಿಕಾ ಕಾಲಮಾನದಲ್ಲಿ ಗುರುವಾರ ರಾತ್ರಿ ಈ ದುರ್ಘಟನೆ ನಡೆದಿದ್ದು, ಈ ಸಂಬಂಧ ಅಲ್ಲಿನ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈವರೆಗೂ ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಪೊಲೀಸರೂ ಅಧಿಕೃತ ಮಾಹಿತಿ ನೀಡಿಲ್ಲ.

ಹರ್ಷ ಅವರು ಪತ್ನಿ ಶ್ವೇತಾ, ಇಬ್ಬರು ಪುತ್ರರೊಂದಿಗೆ ಅಮೆರಿಕಾದ ನ್ಯೂ ಕ್ಯಾಸಲ್‌ನಲ್ಲಿ ನೆಲೆಸಿದ್ದರು. ಗುರುವಾರ ರಾತ್ರಿ ಹರ್ಷ, ಪತ್ನಿ ಹಾಗೂ ಹಿರಿಯ ಪುತ್ರನಿಗೆ ಗುಂಡಿಕ್ಕಿ, ನಂತರ ತಾವೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ವೇಳೆ ಏಳು ವರ್ಷದ ಕಿರಿಯ ಪುತ್ರ ಮನೆಯಿಂದ ಹೊರಹೋಗಿದ್ದರಿಂದ ಅದೃಷ್ಟವಶಾತ್ ಬದುಕುಳಿದಿದ್ದಾನೆ ಎಂದು ತಿಳಿದುಬಂದಿದೆ.

ಮೂಲತಃ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕು, ಕಿಕ್ಕೇರಿಯವರಾದ ಹರ್ಷ, ಮೈಸೂರಿನ ಎಸ್‌ಜೆಸಿಇ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ನಂತರ ಅಮೆರಿಕಾದಲ್ಲಿ ಮೈಕ್ರೋಸಾಫ್ಟ್‌ನಲ್ಲಿ ಉದ್ಯೋಗಿಯಾಗಿ ಹಲವು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದರು. ಬಳಿಕ ಭಾರತಕ್ಕೆ ವಾಪಸ್ಸಾದ ಅವರು ತಮ್ಮ ಪತ್ನಿ ಶ್ವೇತಾ ಅವರೊಂದಿಗೆ ಸೇರಿ 2018ರಲ್ಲಿ 'ಹೋಲೋ ವರ್ಲ್ಡ್' ರೊಬೋಟಿಕ್ ಸಂಸ್ಥೆ ಸ್ಥಾಪಿಸಿದ್ದರು.

ಶ್ವೇತಾ ಅಧ್ಯಕ್ಷರಾಗಿದ್ದರೆ, ಇವರು ಸಿಇಓ ಆಗಿದ್ದರು. ಮಾಜಿ ಕ್ರಿಕೆಟರ್ ಯುವರಾಜ್ ಸಿಂಗ್ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಈ ಕಂಪನಿಯ ಉತ್ಪನ್ನಗಳಿಗೆ ಭಾರೀ ಬೇಡಿಕೆಯೂ ಸೃಷ್ಟಿಯಾಗಿತ್ತು. ಭಾರತದ ಗಡಿಭಾಗದ ಸೂಕ್ಷ್ಮ ಪ್ರದೇಶಗಳಲ್ಲಿ ಸೈನಿಕರಂತೆ ಕಾರ್ಯ ನಿರ್ವಹಿಸಬಲ್ಲ ರೋಬೋಟ್‌ಗಳನ್ನು ಬಳಕೆ ಮಾಡುವ ಸಂಬಂಧ ಪ್ರಧಾನಿ ಮೋದಿ ಅವರನ್ನು ಹರ್ಷ ಭೇಟಿ ಮಾಡಿ, ಚರ್ಚೆ ನಡೆಸಿದ್ದರು. ದ ಇಂಡಸ್ ಎಂಟ್ರಪ್ರನರ್ಸ್(ಟೈ–TiE) ಸದಸ್ಯರೂ ಆಗಿದ್ದ ಹರ್ಷ, ಮೈಸೂರಿನಲ್ಲಿ ನಡೆದ ಉದ್ಯಮಿಗಳ ಸಮಾವೇಶದಲ್ಲೂ ರೋಬೋಟಿಕ್ ತಂತ್ರಜ್ಞಾನದ ಬಗ್ಗೆ ಉಪನ್ಯಾಸ ನೀಡಿದ್ದರು. ಉದ್ಯಮದಲ್ಲಿ ಯಶಸ್ವಿಯಾಗಿ ಪ್ರಯಾಣ ಮುಂದುವರೆಸಿದ್ದ ಹರ್ಷ ಅವರ ಈ ತಪ್ಪು ನಿರ್ಧಾರಕ್ಕೆ ಕಾರಣವೇನೆಂದು ಪೊಲೀಸರ ತನಿಖೆಯಿಂದಲೇ ತಿಳಿಯಬೇಕಿದೆ.



ಹರ್ಷ ಕಿಕ್ಕೇರಿ



ಶ್ವೇತಾ

ಮೈಸೂರು ವಿಜಯನಗರ ಮೂರನೇ ಹಂತದ ನಿರ್ಮಿತಿ ಕೇಂದ್ರದ ರಸ್ತೆಯಲ್ಲಿ 'ಹೋಲೋ ವರ್ಲ್ಡ್' ಕಂಪನಿಯ ಕಾರ್ಪೊರೇಟ್ ಕಚೇರಿಯಿದೆ. ಇಲ್ಲಿ ಸಂಸ್ಥೆಯನ್ನು ಯಶಸ್ವಿಯಾಗಿ ಸ್ಥಾಪಿಸಿದ ಬಳಿಕ ದಂಪತಿ ಅಮೆರಿಕಾಗೆ ವಾಪಸ್ಸಾಗಿದ್ದರು.

ಯಶಸ್ವಿ ಹಾಗೂ ಕ್ರಿಯಾಶೀಲ ಉದ್ಯಮಿ ಹರ್ಷ ಕಿಕ್ಕೇರಿ, ಅವರ ಪತ್ನಿ ಹಾಗೂ ಪುತ್ರನ ಸಾವಿಗೆ ಟೈ ಮೈಸೂರು ಚಾಪ್ಟರ್‌ನ ಅಧ್ಯಕ್ಷರೂ ಆದ ಈಕ್ವಲೀಜ್ ಆರ್‌ಸಿಎಂ–ಇಂಡಿಯಾ ಛೇರ್ಮನ್ ಭಾಸ್ಕರ್ ಕಳಲೆ ಸೇರಿದಂತೆ ಅನೇಕ ಉದ್ಯಮಿಗಳು ಸಂತಾಪ ಸೂಚಿಸಿದ್ದಾರೆ.

ರಿಕ್ಕಿ ರೈ ಮೇಲೆ ಶೂಟೌಟ್: ಮುತ್ತಪ್ಪ ರೈ 2ನೇ ಪತ್ನಿ ಅನುರಾಧ ವಿಚಾರಣೆ

ರಾಮನಗರ, ಏ.27– ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣದ 2ನೇ ಆರೋಪಿಯಾಗಿರುವ ಮುತ್ತಪ್ಪ ಅವರ ಎರಡನೇ ಪತ್ನಿ ಅನುರಾಧ ಅವರನ್ನು ಬಿಡದಿ ಠಾಣೆ ಪೊಲೀಸರು ಭಾನುವಾರ ವಿಚಾರಣೆ ನಡೆಸಿದರು. ಬೆಳಿಗ್ಗೆ 11 ಗಂಟೆ ಸುಮಾರಿಗೆ ಠಾಣೆಗೆ ಬಂದ ಅವರನ್ನು ಇನ್ಸ್‌ಪೆಕ್ಟರ್ ಶಂಕರ್ ನಾಯಕ್ ಅವರನ್ನು ಒಳಗೊಂಡ ತಂಡವು ಸತತ 5 ತಾಸು ವಿಚಾರಣೆಗೆ ಒಳಪಡಿಸಿತು.



ವಿಚಾರಣೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅನುರಾಧ, ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಆದೂ, ಯಾಕೆ ನನ್ನ ಮೇಲೆ ಆರೋಪ ಮಾಡಿ ದೂರು ಕೊಟ್ಟಿದ್ದಾರೂ ಗೊತ್ತಿಲ್ಲ. ವಿಚಾರಣೆ ಸಂದರ್ಭದಲ್ಲಿ ಪೊಲೀಸರಿಗೆ ಎಲ್ಲಾ ಮಾಹಿತಿ ನೀಡಿದ್ದೇನೆ ಎಂದರು. ರಿಕ್ಕಿ ಮತ್ತು ನನ್ನ ನಡುವೆ ಕೋರ್ಟ್‌ನಲ್ಲಿದ್ದ ಜಮೀನು ವ್ಯಾಜ್ಯ ಪ್ರಕರಣವು ರಾಜಿಯಾಗಿ ಸುಖಾಂತ್ಯ ಕಂಡಿದೆ. ಕಳೆದ ಅಕ್ಟೋಬರ್‌ನಲ್ಲಿ ಕೋರ್ಟ್‌ಗೆ ಸಹಿ ಹಾಕಲು ಬಂದಾಗಷ್ಟೇ ರಿಕ್ಕಿ ಅವರನ್ನು ನಾನು ನೋಡಿದ್ದೆ. ಉಳಿದಂತೆ ನನಗೂ ಮತ್ತು ಅವರಿಗೂ ಯಾವುದೇ ಸಂಪರ್ಕವಿಲ್ಲ ಎಂದು ತಿಳಿಸಿದರು.

ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ಸಿದ್ದಪ್ಪಾಜಿ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿರೋಧ

ನಿರ್ಧಾರ ಕೈಬಿಡಲು ಶ್ರೀ ಧರೆಗೆ ದೊಡ್ಡವರ ಸಂಸ್ಥಾನದ ಪೀಠಾಧಿಪತಿ ಶ್ರೀ ಬಿ.ಎಸ್.ಜ್ಞಾನಾನಂದ ಚನ್ನರಾಜೇ ಅರಸ್ ಸ್ವಾಮೀಜಿ ಆಗ್ರಹ

ಮೈಸೂರು,ಏ.27(ಪಿಎಂ)– ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ಸಿದ್ದಪ್ಪಾಜಿ ಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠದ ಪೀಠಾಧಿಪತಿಗಳೂ ಆದ ಆಡಳಿತಾಧಿಕಾರಿ ಶ್ರೀ ಬಿ.ಎಸ್.ಜ್ಞಾನಾನಂದ ಚನ್ನರಾಜೇ ಅರಸ್ ಸ್ವಾಮೀಜಿ ವಿರೋಧ ವ್ಯಕ್ತಪಡಿಸಿದ್ದಾರೆ.

ಶತ ಶತಮಾನದಷ್ಟು ಇತಿಹಾಸ ಹೊಂದಿರುವ ಶ್ರೀ ಮಂಟೇಸ್ವಾಮಿ ಗುರು–ಶಿಷ್ಯ ಪರಂಪರೆಗೆ ಮುಖ್ಯವಾಗಿ ಎರಡು ಗುರುಪೀಠಗಳಿದ್ದು, ಮೂಲ ಗುರುಪೀಠವು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ರಾಜಬೊಪ್ಪೇಗೌಡನಪುರ ಗ್ರಾಮದಲ್ಲಿರುವ ಶ್ರೀಧರೆಗೆ ದೊಡ್ಡವರ ಸಂಸ್ಥಾನ ಮಠವಾಗಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಮಳವಳ್ಳಿ ಮಠ ಹಾಗೂ ಆದಿಹೊನ್ನಾಯಕನಹಳ್ಳಿ ಕ್ಷೇತ್ರಗಳು ಸಮಪೀಠವಾಗಿವೆ.

ಗುರುಪೀಠದ ಸ್ಥಾಪನೆಯ ನಂತರ ಮಂಟೇಸ್ವಾಮಿಯವರ ಆದೇಶದಂತೆ ಅವರ ಶಿಷ್ಯವೃಂದದವರಾದ ಶ್ರೀ ರಾಚಪ್ಪಾಜಿ ಅವರು ಶ್ರೀ ಕಪ್ಪಡಿ ಕ್ಷೇತ್ರ, ಶ್ರೀ ಸಿದ್ದಪ್ಪಾಜಿ ಅವರು ಶ್ರೀ ಚಿಕ್ಕಲೂರು ಕ್ಷೇತ್ರ, ಶ್ರೀ ಲಿಂಗಯ್ಯ–ಚೆನ್ನಯ್ಯ ಅವರು ಕುರುಬನಕಟ್ಟೆ ಕ್ಷೇತ್ರ ಮತ್ತು ಶ್ರೀ ರಾಚಪ್ಪಾಜಿ ಅವರ ಧರ್ಮಪತ್ನಿಯವರಾದ ದೊಡ್ಡಮ್ಮ ತಾಯಿಯವರು ಮುಟ್ಟನಹಳ್ಳಿ ಕ್ಷೇತ್ರದಲ್ಲಿ ನೆಲೆ ನಿಂತರು.



ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠ ಮತ್ತು ಸದರಿ ಕ್ಷೇತ್ರಗಳ ಪರಂಪರೆಯು ತಲತಲಾಂತರಗಳಿಂದ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದು, ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠದಿಂದ ನೀಲಗಾರರ ಮೇಳ, ನಿತ್ಯ ಅನ್ನದಾಸೋಹ ಮತ್ತು ಜಾತ್ರಾ ಮಹೋತ್ಸವ ಸೇರಿದಂತೆ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಸಕಲ ಮೂಲಭೂತ ಸೌಕರ್ಯಗಳು ಒಳಗೊಂಡಂತೆ ನಮ್ಮ ಕುಟುಂಬದವರ ಸಹಕಾರದಿಂದ ನಡೆಸಿಕೊಂಡು ಬಂದಿರುತ್ತೇವೆ. ನಾವು ಮೂಲಭೂತ ಸೌಕರ್ಯ ಕಲ್ಪಿಸದೇ ಇದ್ದರೆ ಅಷ್ಟು ಬಹುಸಂಖ್ಯೆಯಲ್ಲಿ ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವುದು ಸಾಧ್ಯವೇ ಎಂಬುದನ್ನು ರಾಜ್ಯ ಸರ್ಕಾರ ಮನವರಿಕೆ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಪ್ರಾಧಿಕಾರ ರಚನೆಯ ಪ್ರಸ್ತಾವನೆಯನ್ನು ಈ ಕೂಡಲೇ ಹಿಂಪಡೆಯಬೇಕು. ನಮ್ಮಂತಹ ಪ್ರಾಚೀನ ಧಾರ್ಮಿಕ ಮಠಗಳು, ಸಂಸ್ಥೆಗಳ ಸ್ವಾಯತ್ತತೆಯನ್ನು ಗೌರವಿಸಬೇಕು. ಶ್ರೀ ಕ್ಷೇತ್ರಗಳ (ಧರೆಗೆ ದೊಡ್ಡವರ ಸಂಸ್ಥಾನಕ್ಕೆ ಸೇರಿದ ಐದು ಪುಣ್ಯ ಕ್ಷೇತ್ರಗಳು) ಮೇಲೆ ಪರಿಣಾಮ ಉಂಟಾಗುವಂತಹ ಯಾವುದೇ ಕ್ರಮ ಕೈಗೊಳ್ಳಬಾರದು. ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠ, ರಾಜಬೊಪ್ಪೇಗೌಡನಪುರ ಮಠವು ಸರ್ಕಾರದ ನಿರ್ಧಾರವನ್ನು ಪ್ರಶ್ನಿಸುವ ಹಾಗೂ ಶ್ರೀಮಠದ ಪರಂಪರೆಯನ್ನು ರಕ್ಷಿಸುವ ಅಗತ್ಯವಿರುವ ಎಲ್ಲಾ ಕಾನೂನಾತ್ಮಕ ಹಾಗೂ ಸಂವಿಧಾನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತದೆ.

ಎಲ್ಲಾ ನೀಲಗಾರರು, ಭಕ್ತಾದಿಗಳು, ನಾಗರಿಕರು ಸಂಯಮ ಕಳೆದುಕೊಳ್ಳದೇ ಸಂಘಟಿತರಾಗಿ, ವಿಶ್ವಾಸದಿಂದಿರಬೇಕು. ಸತ್ಯ, ಸಂಪ್ರದಾಯ ಮತ್ತು ನಮ್ಮ ಪವಿತ್ರ ಸಂಸ್ಥೆಗಳ ಹಕ್ಕುಗಳನ್ನು ಎತ್ತಿ ಹಿಡಿಯಲು ಶ್ರೀಮಠವು ಸದಾ ಬದ್ಧವಾಗಿರುತ್ತದೆ ಎಂದು ಶ್ರೀ ಬಿ.ಎಸ್.ಜ್ಞಾನಾನಂದ ಚನ್ನರಾಜೇ ಅರಸ್ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ

ಮೈಸೂರು, ಏ.27 (ಎಂಟಿವೈ)– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ



ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪಿರಿಯಾಪಟ್ಟಣ ತಾಲೂಕಿನ ರಾವಂದೂರಿನ ಪ್ರಸನ್ನ ಬಿನ್ ಸಣ್ಣೇಗೌಡ ಅವರನ್ನು ನೇಮಕ ಮಾಡಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಸೂಚನೆ ಮೇರೆಗೆ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಸ್.ಮಧು ಬಂಗಾರಪ್ಪ, ಪ್ರಸನ್ನ ಅವರನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದಾರೆ.

ರಾಷ್ಟ್ರೀಯ ಸಮ್ಮೇಳನ

ಮೈಸೂರು: ಕರ್ನಾಟಕ ವಿಜ್ಞಾನ–ತಂತ್ರಜ್ಞಾನ ಅಕಾಡೆಮಿ ವತಿಯಿಂದ ಮೇ 14ರಿಂದ 16ರವರೆಗೆ ರಾಷ್ಟ್ರೀಯ ಸಮ್ಮೇಳನವನ್ನು ಅಕಾಡೆಮಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅಭ್ಯರ್ಥಿಗಳು ಮೇ 6ರೊಳಗೆ https://forms.gle/nphLXewAESvuPP5YB ಮೂಲಕ ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಅಕಾಡೆಮಿ ಅಧಿಕಾರಿಗಳ ಮೊ.ನಂ: 9845258894, 9743084194, 9686449019 ಸಂಪರ್ಕಿಸಬಹುದು.

ಅಂತಿಮ ಹಂತದಲ್ಲಿ ಮೈಸೂರಿನ ಯುದ್ಧ ಸ್ಮಾರಕ ಕಾಮಗಾರಿ



ಮೈಸೂರಿನ ಹಳೆ ಡಿಸಿ ಕಚೇರಿ ಪಕ್ಕದ ಎನ್‌ಸಿಸಿ ಕವಾಯತು ಮೈದಾನದಲ್ಲಿ ಯುದ್ಧ ಸ್ಮಾರಕದ ಬೃಹತ್ ಗಾತ್ರದ ಸ್ಲ್ಯಾಬ್‌ಗಳನ್ನು ಕ್ರೇನ್ ಮೂಲಕ ಜೋಡಿಸುತ್ತಿರುವುದು.

“ತ್ವರಿತಗತಿಯಲ್ಲಿ ಕೆಲಸ ನಡೆಯುತ್ತಿದೆ

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಪರೇಡ್ ಮೈದಾನದಲ್ಲಿ ನಿರ್ಮಿಸಲಾಗುತ್ತಿರುವ ಯುದ್ಧ ಸ್ಮಾರಕದ ಅಂತಿಮ ಹಂತದ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದೆ. ಸ್ಮಾರಕಕ್ಕಾಗಿ ಚಾಮರಾಜನಗರ ಹಾಗೂ ಹಾಸನದಿಂದ ದಾನವಾಗಿ ಪಡೆದಿರುವ ಕೋಟ್ಯಾಂತರ ರೂ. ಮೌಲ್ಯದ ಉತ್ಕೃಷ್ಟ ಶಿಲೆಗೆ ಸ್ಮಾರಕದ ರೂಪ ನೀಡಿ, ಮೊದಲ ಹಂತದ ಪಾಲಿಶ್ ಕಾರ್ಯ ಪೂರ್ಣಗೊಳಿಸಿ ಸ್ಮಾರಕದ ಫ್ಲಾಟ್‌ಫಾರಂ ಮೇಲೆ ಸ್ಲ್ಯಾಬ್‌ಗಳನ್ನು ಜೋಡಣೆ ಮಾಡಲಾಗಿದೆ. ಅಂತಿಮ ಹಂತದ ಪಾಲಿಶ್ ಮುಗಿದ ನಂತರ ಬೇಸ್ಮೆಂಟ್‌ಗೆ ಹಸಿರು ಶಿಲೆಯ ಸ್ಲ್ಯಾಬ್ ಜೋಡಿಸಲಾಗುತ್ತದೆ. ಹಂತ ಹಂತವಾಗಿ ಯುದ್ಧ ಸ್ಮಾರಕದ ಸುತ್ತ ಇರುವ ಮೈದಾನದಲ್ಲಿ ಪಾರಂಪರಿಕ ಗಿಡ ಹಾಗೂ ಅಲಂಕಾರಿಕ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತದೆ. ಮೈಸೂರಿಗೆ ಬರುವ ಪ್ರವಾಸಿಗರು ಯುದ್ಧ ಸ್ಮಾರಕವನ್ನು ಬಂದು ವೀಕ್ಷಣೆ ಮಾಡುವ ಮೂಲಕ ದೇಶಭಕ್ತಿ ಪಸರಿಸಲು ಬೇಕಾದ ವಾತಾವರಣ ಸೃಷ್ಟಿಸಲು ಉದ್ದೇಶಿಸಲಾಗಿದೆ. ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ಸೇನಾ ಮ್ಯೂಸಿಯಂ ಮಾಡಲು ನೀಡುವಂತೆಯೂ ಈ ಹಿಂದೆ ಪತ್ರ ಬರೆಯಲಾಗಿತ್ತು. –ಸಿ.ಎಲ್.ಆನಂದ್, ಸ್ಥಳ ನಿರೀಕ್ಷೆಯಲ್ಲಿರುವ ಹಿರಿಯ ಕೆಎಎಸ್ ಅಧಿಕಾರಿ (ನಿವೃತ್ತ ಸೇನಾಧಿಕಾರಿ)

ಮೈಸೂರು,ಏ.27(ಎಂಟಿವೈ)– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಮೈದಾನದಲ್ಲಿ ನಿರ್ಮಿಸುತ್ತಿರುವ 'ಯುದ್ಧ ಸ್ಮಾರಕ'ದ ಅಂತಿಮ ಹಂತ ಕಾಮಗಾರಿ ಬಿರುಸಾಗಿ ಸಾಗುತ್ತಿದ್ದು, ಸ್ಮಾರಕ ಬೇಸ್ಮೆಂಟ್ ಮೇಲೆ ಸ್ಲ್ಯಾಬ್‌ಗಳ ಜೋಡಣೆ ಮಾಡಿ ಪಾಲಿಶ್ ಮಾಡಲಾಗುತ್ತಿದೆ.

ಯುದ್ಧ ಸ್ಮಾರಕಕ್ಕಾಗಿ ಉತ್ಕೃಷ್ಟ ಶಿಲೆಯ ಆರು ಬೃಹತ್ ಸ್ಲ್ಯಾಬ್‌ಗಳನ್ನು ಮೈದಾನದಲ್ಲಿ ಈಗಾಗಲೇ ಪ್ರತ್ಯೇಕವಾಗಿ ಕೆತ್ತನೆ ಮಾಡಲಾಗಿತ್ತು. ಕಳೆದ ನಾಲ್ಕು ದಿನದ ಹಿಂದಷ್ಟೇ ಬೃಹತ್ ಸಾಮರ್ಥ್ಯದ ಕ್ರೇನ್ ಬಳಸಿ, ಸ್ಮಾರಕದ ತಳಪಾಯದ ಮೇಲೆ ಆಕಾರಕ್ಕೆ ತಕ್ಕಂತೆ ಜೋಡಣೆ ಮಾಡಲಾಗಿತ್ತು. ಇದೀಗ ಅಂತಿಮ ಹಂತದ ಪಾಲಿಶ್ ಮಾಡುವ ಕಾರ್ಯ ಬಿರುಸಾಗಿ ನಡೆಸಲಾಗುತ್ತಿದ್ದು, ಶೀಘ್ರದಲ್ಲೇ ಉದ್ಘಾಟನೆಗೆ ಸ್ಮಾರಕ ಸಜ್ಜುಗೊಳಿಸಲಾಗುತ್ತಿದೆ. ಗೋಪುರ ಮಾದರಿಯಲ್ಲಿ ಜೋಡಣೆ ಮಾಡಲಾಗಿರುವ ಸ್ಲ್ಯಾಬ್‌ಗಳಿಗೆ ಪಾಲಿಶ್ ಮಾಡಿದ ನಂತರ ಬೇಸ್ಮೆಂಟ್ ಸುತ್ತಲೂ ಪಾರಂಪರಿಕ ಸ್ಪರ್ಶ ನೀಡಲು ಉತ್ಕೃಷ್ಟವಾದ ಹಸಿರು ಕಲ್ಲನ್ನು ಜೋಡಣೆ ಮಾಡಲಾಗುತ್ತದೆ. ಬಳಿಕ ಸ್ಮಾರಕದ ಸ್ಲ್ಯಾಬ್‌ಗೆ ಅಂತಿಮ ಟಚ್ ನೀಡಿ, ಗೋಲ್ಡನ್ ಕಲರ್‌ನಲ್ಲಿ ಅಕ್ಷರ ಕೆತ್ತನೆ ಮಾಡಲಾಗುತ್ತದೆ.

ಚೌಕಾಕಾರದಲ್ಲಿ ನಿರ್ಮಿಸಲಾಗುತ್ತಿರುವ ಯುದ್ಧ ಸ್ಮಾರಕದಲ್ಲಿ ಭೂ ಸೇನೆ, ವಾಯುಸೇನೆ, ನೌಕಾದಳ ಅರೆಸೇನಾ ಪಡೆಯ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಲಾಗಿದೆ. ಈ ಸಂಬಂಧ ನಿವೃತ್ತ ಸೇನಾಧಿಕಾರಿಯೂ ಆಗಿರುವ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಅವರು ಬಳಸಲ್ಪಟ್ಟ ಯುದ್ಧ ಪರಿಕರಗಳನ್ನು ಯುದ್ಧ ಸ್ಮಾರಕಕ್ಕೆ ನೀಡುವಂತೆ ಪತ್ರ ವ್ಯವಹಾರ ನಡೆಸಿದ್ದು, ಅದಕ್ಕೆ ಕೇಂದ್ರ ಸರ್ಕಾರ ಹಾಗೂ ರಕ್ಷಣಾ ಸಚಿವಾಲಯ ಸಮ್ಮತಿ ನೀಡಿದೆ. ಸ್ಮಾರಕ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಬಳಸಲ್ಪಟ್ಟ ಯುದ್ಧ ಟ್ಯಾಂಕರ್, ಗನ್ ಹಾಗೂ ಇನ್ನಿತರ ಯುದ್ಧ ಪರಿಕರಗಳು ಮೈಸೂರು ತಲುಪಲಿವೆ. ಆ ನಂತರ ಅವುಗಳನ್ನು ಸ್ಮಾರಕದ ಮುಂದೆ ಪ್ರತಿಷ್ಠಾಪಿಸಲಾಗುತ್ತದೆ.



ಯುದ್ಧ ಸ್ಮಾರಕದ ಸ್ಲಾಬ್‌ಗೆ ಅಂತಿಮ ಹಂತದ ಪಾಲಿಶ್.

ಸ್ಮಾರಕ ನಿರ್ಮಾಣಕ್ಕೆ ಹೋರಾಟ: 2000ರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಿಸಿ ವೀಕೇರ್ ನಿವೃತ್ತ ಸೈನಿಕರ ಟ್ರಸ್ಟ್‌ನ ಎಂ.ಎನ್.ಸುಬ್ರಹ್ಮಣಿ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. 2010ರಲ್ಲಿ ಪುನಃ ಮನವಿ ಸಲ್ಲಿಸಿದಾಗ ಸ್ಥಳ ಆಯ್ಕೆ ಪ್ರಕ್ರಿಯೆ ಆರಂಭವಾಯ್ತು. ನಂತರ ಅದು ನೆನೆಗುದಿಗೆ ಬಿದ್ದಿತ್ತು. ಆದರೆ 2012ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಯಿತು. 2016ರಲ್ಲಿ ನಿವೃತ್ತ ಯೋಧರೂ ಆಗಿರುವ ಮೈಸೂರು ಉಪವಿಭಾಗಾಧಿಕಾರಿಯಾಗಿದ್ದ ಸಿ.ಎಲ್.ಆನಂದ್(ಹಾಲಿ ಸ್ಥಳ ನಿರೀಕ್ಷೆಯಲ್ಲಿದ್ದಾರೆ) ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಾದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಮೈಸೂರು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು. ಸರ್ಕಾರವೂ ಈ ಹಿಂದೆಯೇ ಅನುದಾನ ಬಿಡುಗಡೆ ಮಾಡಿತ್ತು.

ಕೊನೆ ಘಳಿಗೆಯಲ್ಲಿ ಸೀಟು ರದ್ದುಪಡಿಸುವ ವಿದ್ಯಾರ್ಥಿ ಸಿಇಟಿಯಿಂದ 3 ವರ್ಷ ಬ್ಯಾನ್

ಇಂಜಿನಿಯರಿಂಗ್ ಕಾಲೇಜಲ್ಲಿ ಸೀಟ್ ಬ್ಲಾಕಿಂಗ್ ತಡೆಗೆ ಕೆಇಎ ಹೊಸ ತಂತ್ರ

ಬೆಂಗಳೂರು, ಏ.27– ಪ್ರಮುಖ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆಯುವ ಸೀಟ್ ಬ್ಲಾಕಿಂಗ್ ಎಂಬ ಕರಾಳ ದಂಧೆಗೆ ಬ್ರೇಕ್ ಹಾಕಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಂದಾಗಿದ್ದು, ಈ ಬಾರಿ ಹೊಸ ತಂತ್ರ ಪ್ರಯೋಗ ಮಾಡಿದೆ.

ಇಂಜಿನಿಯರಿಂಗ್ ಮಾಡಬೇಕು ಎಂಬ ಕನಸು ಹೊತ್ತ ವಿದ್ಯಾರ್ಥಿಗಳು ಸಿಇಟಿ ಬರೆದು ಸೀಟು ಗಿಟ್ಟಿಸಿಕೊಳ್ಳುತ್ತಾರೆ. ಆದರೆ, ಕೊನೆ ಗಳಿಗೆಯಲ್ಲಿ ತಮ್ಮ ನಿರ್ಧಾರ ಬದಲಿಸಿ ಬಿಡುತ್ತಾರೆ. ಇದೇ ಕಾರಣಕ್ಕೆ ಸೀಟ್ ಬ್ಲಾಕಿಂಗ್ ದಂಧೆ ನಡೆಯುತ್ತಿದೆ ಎಂಬ ಮಾತು ಕೇಳಿಬರುತ್ತಿತ್ತು. ಹೀಗಾಗಿ ಕೆಇಎ ಹೊಸ ರೂಲ್ಸ್ ತಂದಿದ್ದು, ಸೀಟ್ ಬ್ಲಾಕ್ ಮಾಡಿದರೆ ಅಥವಾ ನಿರ್ಲಕ್ಷ್ಯ ವಹಿಸಿದರೆ ವಿದ್ಯಾರ್ಥಿಗಳ ಭವಿಷ್ಯವೇ ಹಾಳಾಗಿ ಹೋಗುತ್ತದೆ ಎಂದು ಕೆಇಎ ಎಚ್ಚರಿಕೆ ಕೊಟ್ಟಿದೆ.

ಇಂಜಿನಿಯರಿಂಗ್ ಸೀಟ್ ಪಡೆದ ವಿದ್ಯಾರ್ಥಿ ಅಂತಿಮ ಹಂತದಲ್ಲಿ ಸೀಟ್ ರದ್ದು ಪಡಿಸಿದರೆ, 5 ಪಟ್ಟು ಹೆಚ್ಚು ಶುಲ್ಕ ಕಟ್ಟಬೇಕು. ಜೊತೆಗೆ ಸಿಇಟಿಯಿಂದ 3 ವರ್ಷ ಅಂತಹ ವಿದ್ಯಾರ್ಥಿಯನ್ನು ಬ್ಯಾನ್ ಮಾಡಲು ಕೆಇಎ ನಿರ್ಧರಿಸಿದೆ. ಇಷ್ಟು ದಿನ ಶುಲ್ಕ ಕಟ್ಟಿದ ನಂತರ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಲು ಅವಕಾಶವಿತ್ತು.

ಆದರೆ, ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕೆಇಎಗೆ ಮಾಹಿತಿ ಸಿಗುತ್ತಿರಲಿಲ್ಲ. ಇದೇ ಕಾರಣಕ್ಕೆ ಈಗ ಪ್ರವೇಶ ಪತ್ರದ ಬದಲು, ಸೀಟು ಖಚಿತತೆ ಪತ್ರ ನೀಡಲು ಕೆಇಎ ತೀರ್ಮಾನಿಸಿದೆ. ಇದರಿಂದ ವಿದ್ಯಾರ್ಥಿಗಳು ಆಯ್ಕೆಯಾದ ಕಾಲೇಜಿಗೆ ಕಡ್ಡಾಯವಾಗಿ ಹೋಗಲೇಬೇಕಾಗುತ್ತದೆ. ಒಂದು ವೇಳೆ ವಿದ್ಯಾರ್ಥಿ ಆ ಕಾಲೇಜಿಗೆ ಹೋಗದಿದ್ದರೇ ಆ ಸೀಟನ್ನು ಉಳಿಕೆ ಸೀಟು ಎಂದು ಮುಂದಿನ ಸುತ್ತಿಗೆ ಪರಿಗಣಿಸಲಾಗುತ್ತೆ. ಈ ಹೊಸ ನಿಯಮದಿಂದ ಇತರೆ ಅರ್ಹ ವಿದ್ಯಾರ್ಥಿಗಳಿಗೆ ಬೇಕಾದ ಕಾಲೇಜಿನಲ್ಲಿ ಸೀಟು ಸಿಗಲು ಅವಕಾಶ ಸಿಗುತ್ತದೆ. ಆದರೆ, ಕೆಇಎ ತಂದಿರುವ ಈ ಹೊಸ ನಿಯಮದಿಂದ ಸೀಟ್ ಬ್ಲಾಕಿಂಗ್ ದಂಧೆಗೆ ಕಡಿವಾಣ ಬೀಳುತ್ತಾ ಕಾದು ನೋಡಬೇಕಿದೆ.

ಸೌಂದರ್ಯ ಲಹರೀ, ಮಂಥನ ಪುಸ್ತಕ ಬಿಡುಗಡೆ



ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ಸುಮಾ ಶೇಷಾಚಲನ್ ರಚನೆಯ ಸೌಂದರ್ಯ ಲಹರೀ ಹಾಗೂ ಮಂಥನ ಪುಸ್ತಕಗಳನ್ನು ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಬಿಡುಗಡೆ ಮಾಡಿದರು.

ಮೈಸೂರು,ಏ.27(ಎಂಟಿವೈ)– ಶಂಕರಾಚಾರ್ಯರು ಧರ್ಮ ಗ್ರಂಥಗಳ ರಚನೆಗೆ ನೀಡಿದ ಮಹತ್ವವನ್ನು ಕಾವ್ಯ ಸೃಷ್ಟಿಗೆ ನೀಡಿದ್ದರೆ, ಕವಿ ಕಾಳಿದಾಸನನ್ನು ಮೀರಿಸುತ್ತಿದ್ದರು ಎಂದು ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಿದ್ದ ಲೇಖಕಿ ಸುಮಾ ಶೇಷಾಚಲನ್ ಅವರು ರಚಿಸಿರುವ 'ಸೌಂದರ್ಯ ಲಹರೀ'(ರಸ್ಯ ರಹಸ್ಯಾರ್ಥಗಳು) ಹಾಗೂ 'ಮಂಥನ'(ಭಾರತೀಯ ಸಂಸ್ಕೃತಿ ರಸಪ್ರಶ್ನೋತ್ತರಗಳು) ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ಜಗತ್ತಿನ ಶ್ರೇಷ್ಠರಲ್ಲಿ ಒಬ್ಬರಾಗಿದ್ದಾರೆ. ಅವರ ಬಗ್ಗೆ ಮಾತನಾಡುವುದು ಅಷ್ಟು ಸುಲಭವಲ್ಲ. ಮಾತನಾಡಲು ಆರಂಭಿಸಿದರೆ ನಮ್ಮನ್ನು ನಾವೇ ಮರೆಯುತ್ತೇವೆ. ಶಂಕರಾಚಾರ್ಯರು ಬದುಕಿದ ಕಾಲ ಕಡಿಮೆಯಾಗಿದ್ದರೂ, ಅನೇಕ ಧರ್ಮ ಗ್ರಂಥ ರಚಿಸಿದ್ದಾರೆ. ಅವುಗಳನ್ನು ನೂರಾರು ವರ್ಷ ಓದಿದರೂ ಅರ್ಥೈಸಿಕೊಳ್ಳಲು ಸಾಧ್ಯವಾಗದ ಅಪಾರ ವಿದ್ವತ್ ಅವರ ಗ್ರಂಥದಲ್ಲಿದೆ ಎಂದರು.

ಶಂಕರಾಚಾರ್ಯರು 16ನೇ ವಯಸ್ಸಿನಲ್ಲಿಯೇ ವಾರಣಾಸಿಯಲ್ಲಿ ವೇದ, ಗ್ರಂಥ, ಉಪನಿಷತ್ತುಗಳನ್ನು ಪಾರಂಗತ ಮಾಡಿಕೊಂಡಿದ್ದರು. ಅವರು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಗ್ರಂಥ ರಚಿಸಿದ್ದಾರೆ. ಅವರ ಗ್ರಂಥಗಳಲ್ಲಿ ಕಾವ್ಯಾತ್ಮಕತೆ ಕಟ್ಟಿಕೊಟ್ಟಿದ್ದಾರೆ. ಶಂಕರಾಚಾರ್ಯರು ಎಲ್ಲಾ ದೇವರುಗಳ ಮೇಲೂ ಸ್ತೋತ್ರಗಳನ್ನು ರಚಿಸಿದ್ದಾರೆ ಎಂದು ತಿಳಿಸಿದರು.

ಮುಲಕನಾಡು ಸಭಾ ಅಧ್ಯಕ್ಷ ಕೆ.ಎನ್.ಗುರುಮೂರ್ತಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಜೆಸಿಇ ಇಂಜಿನಿಯರಿಂಗ್ ಕಾಲೇಜು ನಿವೃತ್ತ ಪ್ರಾಧ್ಯಾಪಕ ಸಿ.ಆರ್.ನಟರಾಜ್, ಸಂಸ್ಕೃತ ನಿವೃತ್ತ ಪ್ರಾಧ್ಯಾಪಕಿ ಡಾ.ಕೆ.ಎಲ್.ಪ್ರಸನ್ನಾಕ್ಷಿ, ಲೇಖಕಿ ಸುಮಾ ಶೇಷಾಚಲನ್ ಉಪಸ್ಥಿತರಿದ್ದರು.

ಇಂದಿನಿಂದ ಶ್ರೀ ಶಂಕರ ಜಯಂತಿ

5 ದಿನಗಳ ಕಾಲ ವೇದ, ವೈದಿಕ ಕಲಾಪಗಳು, ಪಾರಾಯಣ

ಮೈಸೂರು, ಏ.27(ಜಿಎ)–ಅಭಿನವ ಶಂಕರಾಲಯ, ಶೃಂಗೇರಿ ಶ್ರೀಮಠದ ವತಿಯಿಂದ ಏ.28ರಿಂದ ಮೇ 2ರವರೆಗೆ 5 ದಿನಗಳ ಶ್ರೀಶಂಕರ ಜಯಂತಿ ಉತ್ಸವವನ್ನು ಮೈಸೂರಿನ ಫೋರ್ಟ್ ಮೊಹಲ್ಲಾದಲ್ಲಿರುವ ಅಭಿನವ ಶಂಕರಾಲಯದಲ್ಲಿ ಆಯೋಜಿಸಲಾಗಿದೆ ಎಂದು ಅಭಿನವ ಶಂಕರಾಲಯದ ಕಾರ್ಯಕರ್ತರಾದ ಪ್ರಸನ್ನ ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 5 ದಿನಗಳು ಬೆಳಗ್ಗೆ ವೈದಿಕ ಕಲಾಪಗಳು, ವೇದ, ಭಾಷ್ಯ ಹಾಗೂ ಶ್ರೀ ಶಂಕರ ವಿಜಯ ಪಾರಾಯಣ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ. ಪ್ರತಿದಿನ ಸಂಜೆ 6ರಿಂದ 8ರವರೆಗೆ ವಿಶೇಷ ಉಪನ್ಯಾಸ ಮಾಲಿಕೆ ಇರಲಿದೆ ಎಂದರು.

ಏ.28ರಂದು ವಿದುಷಿ ರಮ್ಯ ಅವರಿಂದ 'ಅದ್ವೈತ ಮತ್ತು ಶಂಕರರು–ವೇದಾರ್ಥದ ಬೆಳಕಿನಲ್ಲಿ' ಎಂಬ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಏ.29ರಿಂದ ಮೇ 1ರವರೆಗೆ ವಿದ್ವಾನ್ ಡಾ.ಜಿ.ಬಿ. ಹರೀಶ್ ಶ್ರೀಶಂಕರರ ವಿವಿಧ ವಿಷಯ ಕುರಿತು ಮಾತನಾಡಲಿದ್ದಾರೆ. ಮೇ 2ರಂದು ಶ್ರೀಶಂಕರ ಭಗವತ್ಪಾದಾಚಾರ್ಯರಿಗೆ ವಿಶೇಷ ಪೂಜೆ ಮತ್ತು ಅಲಂಕಾರವಿದ್ದು, ಮಧ್ಯಾಹ್ನ 12 ಗಂಟೆಗೆ ಮಂಗಳಾರತಿ ಹಾಗೂ ತೀರ್ಥ, ಪ್ರಸಾದ ವಿನಿಯೋಗವಿದೆ. ಸಂಜೆ 6.30ರಿಂದ ರಾತ್ರಿ 9ರವರೆಗೂ ರಥೋತ್ಸವ ನಡೆಯಲಿದ್ದು, ಮೊಹಲ್ಲಾದ ಪ್ರಮುಖ ಬೀದಿಗಳಲ್ಲಿ ವೇದಘೋಷಗಳೊಂದಿಗೆ ಅಭಿನವ ಶಂಕರಾಲಯದಿಂದ ಹೊರಟು ಶಂಕರ ಮಠದ ರಸ್ತೆ, ಉತ್ತರಾದಿ ಮಠ ರಸ್ತೆ ಮೂಲಕ ಅಭಿನವ ಶಂಕರಾಲಯ ತಲುಪಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಗಣೇಶ್‌ರಾವ್ ಉಪಸ್ಥಿತರಿದ್ದರು.

ಪ್ಯಾನಲ್ ವಕೀಲರ ನೇಮಕಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.27–ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ 3 ವರ್ಷಗಳ ಅವಧಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರಲ್ಲಿ ಪ್ಯಾನಲ್ ವಕೀಲರನ್ನು ನೇಮಿಸಲು ಕಾನೂನು ವೃತ್ತಿಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 30, 2025ರಂದು 3 ವರ್ಷಗಳ ಸೇವಾ ಅವಧಿ ಪೂರ್ಣಗೊಳ್ಳುವ ಕಾರಣ ಪ್ಯಾನಲ್ ವಕೀಲರನ್ನು ನೇಮಕಾತಿ ಮಾಡಬೇಕಾಗಿರುತ್ತದೆ. ಆಸಕ್ತರು ನಿಗದಿತ ಅರ್ಜಿ ನಮೂನೆಯಲ್ಲಿ ಮೇ 1ರಂದು ಸಂಜೆ 5 ಗಂಟೆಯ ಒಳಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ಕಚೇರಿಯಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದ್ದು, ನಿಗದಿತ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಮಡಿವಾಳ ಸಮುದಾಯದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗಾಗಿ ನಂ.ಗೂಡು ತಾಲೂಕು ವೀರ ಮಡಿವಾಳರ ಸಂಘ ಅಸ್ತಿತ್ವಕ್ಕೆ

ಮೈಸೂರು, ಏ.27(ಜಿಎ)–ಮಡಿವಾಳ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ನಂಜನಗೂಡು ತಾಲೂಕು ವೀರ ಮಡಿವಾಳರ ಸಂಘ ಅಸ್ತಿತ್ವಕ್ಕೆ ಬಂದಿದೆ ಎಂದು ಅಧ್ಯಕ್ಷ ಡಾ.ಡಿ.ಚಂದ್ರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯದ ಸಂಘಗಳನ್ನು ಕಟ್ಟಿಕೊಂಡು ಕೇವಲ ರಾಜಕೀಯ ಲಾಭ ಪಡೆದುಕೊಂಡು ತಾವು ಅಭಿವೃದ್ಧಿಯಾಗುತ್ತಿದ್ದಾರೆ ಹೊರತು ಸಮುದಾಯದ ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ನೂತನ ಸಂಘವನ್ನು ಸ್ಥಾಪಿಸಲಾಗಿದೆ ಎಂದರು.

ನಂಜನಗೂಡಿನಲ್ಲಿ ಮಡಿವಾಳರ ಸಮುದಾಯದವರು ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಇದ್ದಾರೆ. ಆದರೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಬಹಳ ಹಿಂದುಳಿದಿದ್ದು, ಸಂಘಟನೆ, ಒಗ್ಗಟ್ಟಿನ ಕೊರತೆಯಿಂದ ನಾವು ರಾಜಕೀಯವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಅವರ ಅನುಯಾಯಿಗಳಾದ ನಾವು ಅವರು ತಿಳಿಸಿರುವಂತೆ ಸಾಮಾಜಿಕವಾಗಿ ಸಮುದಾಯವನ್ನು ಒಗ್ಗೂಡಿಸಲು ಸಂಘ ಮುಂದಾಗಲಿದೆ ಎಂದು ತಿಳಿಸಿದರು.

ಜಾತಿಗಣತಿಯಲ್ಲಿ ಮಡಿವಾಳ ಸಮುದಾಯವನ್ನು ಸಂಪೂರ್ಣ ಕಡೆಗಣಿಸಿದ್ದಾರೆ. ಕರ್ನಾಟಕದಲ್ಲಿ ನಾವು 10 ಲಕ್ಷಕ್ಕೂ ಅಧಿಕ ಮಂದಿ ಇದ್ದೇವೆ. ಮರು ಪರಿಶೀಲಿಸಿ ಸಮುದಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು. ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳಲ್ಲಿ ಮಡಿವಾಳ ಸಮುದಾಯವನ್ನು ಪರಿಶಿಷ್ಟರು ಎಂದು ಸೌಲಭ್ಯ ನೀಡುತ್ತಾರೆ. ರಾಜ್ಯದಲ್ಲಿಯೂ ಹಾಗೇ ಸೌಲಭ್ಯ ನೀಡಬೇಕು ಎಂದ ಅವರು, ದೋಬಿಘಾಟ್‌ನಲ್ಲಿ ಕೆಲಸ ಮಾಡುವವರ ಆರೋಗ್ಯಕ್ಕೆ ಯಾವುದೇ ರಕ್ಷಣೆ ಇಲ್ಲದಂತೆ ಇದ್ದು, ಆಸ್ಪತ್ರೆಯಿಂದ ಬಂದ ಬಟ್ಟೆಗಳನ್ನು ಯಾವುದೇ ಅಂಜಿಕೆ ಇಲ್ಲದೆ ಶುದ್ಧಿಗೊಳಿಸುತ್ತಾರೆ. ಇದರಿಂದ ಅವರ ಆರೋಗ್ಯದ ಮೇಲೆ ಪರಿಣಾಮ ಬೀಳುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಹೆಲ್ತ್ ಕಾರ್ಡ್ ನೀಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಮಹದೇವಶೆಟ್ಟಿ, ಕಾರ್ಯದರ್ಶಿ ಶ್ರೀರಾಮು, ಉಪಾಧ್ಯಕ್ಷರಾದ ಎಂ.ಸ್ವಾಮಿ, ಮಹೇಶ್, ಖಜಾಂಚಿ ಸಿ.ಎಂ.ಕೃಷ್ಣಶೆಟ್ಟಿ, ನಿರ್ದೇಶಕ ಶ್ರೀನಿವಾಸ್ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ 'ಡಾ.ರಾಜ್ ರಂಗರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ಏ.27(ಎಸ್‌ಪಿಎನ್)– ಮೈಸೂರಿನ ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ಡಾ.ರಾಜ್‌ಕುಮಾರ್ ರಂಗ ಪರಿಷತ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಐವರು ಸಾಧಕರಿಗೆ ಡಾ.ರಾಜ್ ರಂಗರತ್ನ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿನಿತ್ಯ ಒಂದಿಲ್ಲೊಂದು ಸಂಘ–ಸಂಸ್ಥೆಗಳು ಸಾಧಕರನ್ನು ಗುರುತಿಸಿ ಪ್ರಶಸ್ತಿ ವಿತರಿಸುತ್ತವೆ. ಯಾವುದೇ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ಪ್ರದಾನ ಮಾಡುವ ಪ್ರಶಸ್ತಿಗಳು ಸಮಾಜಕ್ಕೆ ಸಂದೇಶ ಕೊಡುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಡಾ.ರಾಜ್ ರಂಗ ಪರಿಷತ್ ಪದಾಧಿಕಾರಿಗಳು ಕೆಲಸ ಮಾಡುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದರು.



ವಿವಿಧ ಕ್ಷೇತ್ರದ ಸಾಧಕರಿಗೆ 'ಡಾ.ರಾಜ್ ರಂಗರತ್ನ ಪ್ರಶಸ್ತಿ' ನೀಡಿ, ಗೌರವಿಸಲಾಯಿತು.

ಇತ್ತೀಚೆಗೆ ಕೆಲ ಸಂಘ–ಸಂಸ್ಥೆಗಳು ಕೇವಲ ಪ್ರಚಾರಕ್ಕೆ ನೀಡುವ ಪ್ರಶಸ್ತಿ, ಬಿರುದಾವಳಿಗಳು ಅರ್ಥ ಕಳೆದುಕೊಳ್ಳುತ್ತಿವೆ. ಆದರೆ, ವರನಟ ಡಾ.ರಾಜ್‌ಕುಮಾರ್ ಅವರ ಹೆಸರಿನಲ್ಲಿ ಕೊಡಮಾಡುತ್ತಿರುವ ಪ್ರಶಸ್ತಿ ಅರ್ಥಪೂರ್ಣವಾಗಿದೆ. ನಟ ಸಾರ್ವಭೌಮ ಎಂದೇ ಅಭಿಮಾನಿಗಳಿಂದ ಕರೆಸಿಕೊಳ್ಳುತ್ತಿದ್ದ ಡಾ.ರಾಜ್‌ಕುಮಾರ್ ನಡೆ–ನುಡಿ, ಸರಳತೆ, ಭಾಷಾ ಪ್ರಯೋಗ ಇಂದಿನ ಯುವ ಸಮೂಹಕ್ಕೆ ಆದರ್ಶವಾಗಬೇಕು. ವ್ಯಕ್ತಿ ಎಷ್ಟು ದೊಡ್ಡವರು ಎಂಬುದು ಮುಖ್ಯವಲ್ಲ. ಅವರ ಸಾಧನೆ ಸಮಾಜಕ್ಕೆ ಎಷ್ಟು ದೊಡ್ಡದು ಎಂಬುದು ಮುಖ್ಯ ಹಾಗೂ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸುವ ವ್ಯಕ್ತಿಗಳ ಸಾಧನೆಯೂ ಅಷ್ಟೇ ಮುಖ್ಯ ಎಂದರು.

ಡಾ.ರಾಜ್‌ಕುಮಾರ್, ಒಂದು ವೇಳೆ ರಾಜಕಾರಣಕ್ಕೆ ಧುಮುಕಿದ್ದರೆ, ಈ ರಾಜ್ಯದ ಮುಖ್ಯಮಂತ್ರಿಯಾಗಿರುತ್ತಿದ್ದರು. ಅವರಿಗೆ ರಾಜಕೀಯ ಕೈಬೀಸಿ ಕರೆದರೂ ಅದರತ್ತ ಮುಖ ಮಾಡದೇ ಬರೀ ಕಲೆಯನ್ನೇ ಉಸಿರಾಗಿಸಿಕೊಂಡು, ಕಲಾ ಸೇವೆಯಲ್ಲಿ ತೊಡಗಿಬಿಟ್ಟರು. ಗೋಕಾಕ್ ಚಳುವಳಿಯ ಕೇಂದ್ರಬಿಂದುವಾಗಿ ಕನ್ನಡದ ಕಾಯಕ ಮಾಡಿ, ಕನ್ನಡಿಗರನ್ನು ಒಗ್ಗೂಡಿಸುವ ಕೆಲಸ ಮಾಡಿದರು. ಹಾಗಾಗಿ ಡಾ.ರಾಜ್‌ಕುಮಾರ್ ಎಂದರೆ, ಜನಸಾಮಾನ್ಯರ ನೆಚ್ಚಿನ ನಟ ಎಂದೇ ಕರೆಸಿಕೊಳ್ಳುವುದಕ್ಕೆ ಇಂದಿನ ಕಾರ್ಯಕ್ರಮವೇ ಸಾಕ್ಷಿ ಎಂದರು.

ಸನ್ಮಾನ: ವಿವಿಧ ಕ್ಷೇತ್ರದ ಸಾಧಕರಾದ ರಂಗಭೂಮಿ ಹಾಗೂ ಚಿತ್ರ ನಿರ್ದೇಶಕ ಬಿ.ಸಿದ್ದೇಗೌಡ ಜಿ.ಬಿ.ಎಸ್, ರಂಗ ಕಲಾವಿದ ಕಟ್ಟೆ ಎಂ.ಎಸ್ ಕೃಷ್ಣಸ್ವಾಮಿ, ಹಿರಿಯ ರಂಗಕರ್ಮಿ ಎಸ್.ಡಿ ದಯಾನಂದ, ಹಿರಿಯ ಕಲಾವಿದರಾದ ವಿ.ಉದಯಕುಮಾರ್, ಎಚ್.ಸಿ ಮಹೇಶ್‌ಕುಮಾರ್ ಅವರಿಗೆ 'ಡಾ.ರಾಜ್ ರಂಗರತ್ನ ಪ್ರಶಸ್ತಿ' ನೀಡಿ, ಆತ್ಮೀಯವಾಗಿ ಗೌರವಿಸಲಾಯಿತು. ವೇದಿಕೆಯಲ್ಲಿ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಪ್ರಾಧ್ಯಾಪಕ ಡಾ.ಎಸ್.ಬಸವರಾಜಪ್ಪ, ಬಸವರಾಜೇಂದ್ರ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಭಾರತದ ಮೇಲೆ ದಾಳಿಗೆ 130 ಪರಮಾಣು ಬಾಂಬ್‌ಗಳು, ಕ್ಷಿಪಣಿಗಳು ಸಿದ್ಧವಾಗಿವೆ

ಪಾಕ್ ಸಚಿವ ಹನೀಫ್ ಅಬ್ಬಾಸಿ ಬಹಿರಂಗ ಬೆದರಿಕೆ

ಇಸ್ಲಾಮಾಬಾದ್: ಪಹಲ್ಗಾಮ್ ಭಯೋತ್ಪಾದಕ ದಾಳಿ



ನಂತರ ಭಾರತ–ಪಾಕಿಸ್ತಾನ ಸಂಬಂಧಗಳಲ್ಲಿ ಮತ್ತಷ್ಟು ಉದ್ವಿಗ್ನತೆ ನಡುವೆ ಪಾಕಿಸ್ತಾನ ಸಚಿವ ಹನೀಫ್ ಅಬ್ಬಾಸಿ ಭಾರತಕ್ಕೆ ಪರಮಾಣು ಪ್ರತೀಕಾರದ ಬೆದರಿಕೆ ಹಾಕಿದ್ದಾರೆ. ಘೋರಿ, ಶಾಹೀನ್ ಮತ್ತು ಘಜ್ನವಿ ಕ್ಷಿಪಣಿಗಳು ಸೇರಿದಂತೆ ಪಾಕಿಸ್ತಾನದ ಕ್ಷಿಪಣಿ ಶಸ್ತ್ರಾಸ್ತ್ರಗಳು ಮತ್ತು 130 ಪರಮಾಣು ಬಾಂಬ್‌ಗಳನ್ನು ಭಾರತಕ್ಕಾಗಿ ಮಾತ್ರ ಇಡಲಾಗಿದೆ ಎಂದು ಹೇಳಿಕೊಂಡಿದ್ದು ಅವರ ಮಾತಿಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. 28 ಜನರ ಸಾವಿಗೆ ಕಾರಣವಾದ ಮಾರಕ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ಇತ್ತೀಚಿನ ನಿರ್ಧಾರಕ್ಕೆ ಪ್ರತಿಕ್ರಿಯೆಯಾಗಿ ಅಬ್ಬಾಸಿ ಈ ಬೆದರಿಕೆ ಒಡ್ಡಿದ್ದಾರೆ. ಭಾರತ ಸರ್ಕಾರ ನಮಗೆ ನೀರು ಸರಬರಾಜನ್ನು ನಿಲ್ಲಿಸಿದರೆ, ಅವರು ಯುದ್ಧಕ್ಕೆ ಸಿದ್ಧರಾಗಿರಬೇಕು. ನಮ್ಮಲ್ಲಿರುವ ಮಿಲಿಟರಿ ಉಪಕರಣಗಳು, ಕ್ಷಿಪಣಿಗಳು ಪ್ರದರ್ಶನಕ್ಕೆ ಅಲ್ಲ. ನಮ್ಮ ಪರಮಾಣು ಶಸ್ತ್ರಾಸ್ತ್ರಗಳನ್ನು ಎಲ್ಲಿ ಇರಿಸಿದ್ದೇವೆಂದು ಯಾರಿಗೂ ತಿಳಿದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ.

ರಾಜಸ್ಥಾನ ಗಡಿಯ ಬಂಕರ್‌ಗಳಲ್ಲಿ ಪಾಕಿಸ್ತಾನದ ಸೇನೆ ನಿಯೋಜನೆ

ಜೈಪುರ: ರಾಜಸ್ಥಾನದ ಗಡಿಯಲ್ಲಿ ಒಂದು ಪ್ರಮುಖ



ಬೆಳವಣಿಗೆ ನಡೆದಿದೆ. ಪಹಲ್ಗಾಮ್ ಉಗ್ರರ ದಾಳಿಯಿಂದ ಈ ಪ್ರದೇಶದಲ್ಲಿ ಕೂಡ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಪಾಕಿಸ್ತಾನ ತನ್ನ ಮಿಲಿಟರಿಗೆ ಬಂಕರ್‌ಗಳಲ್ಲಿಯೇ ಇರಲು ಸೂಚಿಸಿದೆ ಎಂದು ವರದಿಯಾಗಿದೆ. ಹೆಚ್ಚಿನ ಭದ್ರತಾ ಕ್ರಮಗಳ ಭಾಗವಾಗಿ ಪಾಕಿಸ್ತಾನಿ ರೇಂಜರ್‌ಗಳು ಮತ್ತು ಗಡಿ ಕ್ರಿಯಾ ತಂಡವನ್ನು ಈ ಬಂಕರ್‌ಗಳಲ್ಲಿ ನಿಯೋಜಿಸಲಾಗಿದೆ. ಹೆಚ್ಚುವರಿಯಾಗಿ ವೈದ್ಯಕೀಯ ತಂಡವು ಸಿಂಧ್‌ನಲ್ಲಿ ಬೀಡುಬಿಟ್ಟಿದೆ. ಇದು ಸಂಭಾವ್ಯ ಸಂಘರ್ಷಕ್ಕೆ ಸಿದ್ಧತೆಯನ್ನು ಸೂಚಿಸುತ್ತದೆ. ಪರಿಸ್ಥಿತಿ ತೀವ್ರಗೊಳ್ಳುತ್ತಿದ್ದಂತೆ ಪಾಕಿಸ್ತಾನ ಯುದ್ಧ ವಲಯಕ್ಕೆ ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಸಂಗ್ರಹಿಸುತ್ತಿದೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಮಾರಕ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಪಹಲ್ಗಾಮ್ ದಾಳಿಯಲ್ಲಿ ಹಲವಾರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡರು. ಇದಕ್ಕೆ ಕೂಡಲೆ ಪ್ರತಿಕ್ರಿಯಿಸಿದ ಭಾರತ ಪಾಕಿಸ್ತಾನದ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿತು. ಇದು ಪಾಕಿಸ್ತಾನದಲ್ಲಿ ಕಳವಳವನ್ನುಂಟುಮಾಡಿದೆ.

ಭಾರತ–ಪಾಕ್ ನಡುವೆ ಮಧ್ಯಸ್ಥಿಕೆಗೆ ಇರಾನ್ ಪ್ರಸ್ತಾವನೆ

ಟೆಹ್ರಾನ್: ಮಂಗಳವಾರ ಪಹಲ್ಗಾಮ್‌ನಲ್ಲಿ ನಡೆದ



ಮಾರಕ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನ ನಡುವಿನ ರಾಜತಾಂತ್ರಿಕ ಮತ್ತು ಮಿಲಿಟರಿ ಉದ್ವಿಗ್ನತೆಗಳು ಹೆಚ್ಚಾಗುತ್ತಿದ್ದಂತೆಯೇ, ಇರಾನ್ ಎರಡೂ ದೇಶಗಳ ನಡುವೆ ಮಧ್ಯಸ್ಥಿಕೆ ವಹಿಸುವ ಪ್ರಸ್ತಾಪದೊಂದಿಗೆ ಮುಂದೆ ಬಂದಿದೆ. ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಭಾರತ ಮತ್ತು ಪಾಕಿಸ್ತಾನ ಎರಡನ್ನೂ ಸಹೋದರ ನೆರೆಹೊರೆಯವರು ಎಂದು ಬಣ್ಣಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನ ಇರಾನ್‌ನ ಸಹೋದರ ನೆರೆಹೊರೆಯ ದೇಶಗಳಾಗಿವೆ. ಶತಮಾನಗಳಷ್ಟು ಹಳೆಯ ಸಾಂಸ್ಕೃತಿಕ ಮತ್ತು ನಾಗರಿಕ ಸಂಬಂಧಗಳಲ್ಲಿ ಬೇರೂರಿರುವ ಸಂಬಂಧಗಳನ್ನು ನಾವು ಹೊಂದಿದ್ದೇವೆ. ಇತರ ನೆರೆಹೊರೆಯವರಂತೆ ನಾವು ಅವರನ್ನು ನಮ್ಮ ಪ್ರಮುಖ ಆದ್ಯತೆ ಎಂದು ಪರಿಗಣಿಸುತ್ತೇವೆ. ಈ ಕಷ್ಟದ ಸಮಯದಲ್ಲಿ ಹೆಚ್ಚಿನ ತಿಳುವಳಿಕೆಯನ್ನು ರೂಪಿಸಲು ಟೆಹ್ರಾನ್ ಇಸ್ಲಾಮಾಬಾದ್ ಮತ್ತು ನವದೆಹಲಿಯಲ್ಲಿ ತನ್ನ ಕಚೇರಿಗಳನ್ನು ಬಳಸಲು ಸಿದ್ಧವಾಗಿದೆ ಎಂದು ವಿದೇಶಾಂಗ ಸಚಿವರು ಹೇಳಿದ್ದಾರೆ.

ಪಹಲ್ಗಾಮ್ ದಾಳಿ; ದೇಶದ್ರೋಹದ ಹೇಳಿಕೆ: 19 ಮಂದಿ ಬಂಧನ

ಗುವಾಹಟಿ: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಕುರಿತು ದೇಶ ದ್ರೋಹದ ಹೇಳಿಕೆ ನೀಡಿದ್ದಕ್ಕಾಗಿ ಈಶಾನ್ಯದ ಮೂರು ರಾಜ್ಯಗಳಲ್ಲಿ ಕನಿಷ್ಠ 19 ಜನರನ್ನು ಬಂಧಿಸಲಾಗಿದೆ.

ಅಸ್ಸಾಂ, ಮೇಘಾಲಯ ಮತ್ತು ತ್ರಿಪುರಾದಲ್ಲಿ ಬಂಧಿಸಲ್ಪಟ್ಟ ಜನರಲ್ಲಿ ಶಾಸಕ, ಪತ್ರಕರ್ತ, ವಿದ್ಯಾರ್ಥಿಗಳು, ವಕೀಲರು ಮತ್ತು ನಿವೃತ್ತ ಶಿಕ್ಷಕರು ಸೇರಿದ್ದಾರೆ. ಹೆಚ್ಚಿನ ಬಂಧನಗಳು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಗೆ ಸಂಬಂಧಿಸಿದ್ದಾಗಿವೆ. ಇಲ್ಲಿಯವರೆಗೆ ಅಸ್ಸಾಂ ಒಂದರಲ್ಲೇ 14 ಮಂದಿಯನ್ನು ಬಂಧಿಸಲಾಗಿದೆ. ಅಸ್ಸಾಂನ ವಿರೋಧ ಪಕ್ಷವಾದ ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್‌ನ ಶಾಸಕ ಅಮೀನುಲ್ ಇಸ್ಲಾಂ ಅವರನ್ನು ಬಂಧಿಸಲಾಯಿತು. ಅಸ್ಸಾಂನಲ್ಲಿ ಬಂಧನಕ್ಕೊಳಗಾದ ಇತರರಲ್ಲಿ ಹೈಲಕಂಡಿಯ ಎಂಡಿ ಜಬೀರ್ ಹುಸೇನ್, ಸಿಲ್ಚಾರ್‌ನ ಎಂಡಿ ಎಕೆ ಬಹಾವುದ್ದೀನ್ ಮತ್ತು ಎಂಡಿ ಜಾವೇದ್ ಮಜುಂದಾರ್, ಮೋರಿಗಾಂವ್‌ನ ಎಂಡಿ ಮಹಾಹರ್ ಮಿಯಾ ಮತ್ತು ಶಿವಸಾಗರ್‌ನ ಎಂಡಿ ಸಾಹಿಲ್ ಅಲಿ ಸೇರಿದ್ದಾರೆ. ಕರೀಂಗಂಜ್‌ನ ಎಂಡಿ ಮುಸ್ತಾ ಅಹ್ಮದ್ ಅಲಿಯಾಸ್ ಸಹೇಲ್ ಅವರನ್ನು ಶುಕ್ರವಾರ ರಾತ್ರಿ ಫೇಸ್‌ಬುಕ್‌ನಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಪೋಸ್ಟ್ ಮಾಡಿದ್ದಕ್ಕಾಗಿ ಬಂಧಿಸಲಾಗಿದೆ.

ಮಲಯಾಳಂ ನಿರ್ದೇಶಕರಾದ ಖಾಲಿದ್ ರೆಹಮಾನ್, ಅಶ್ರಫ್ ಹಮ್ಜಾ ಬಂಧನ: ಹೈಬ್ರೀಡ್ ಗಾಂಜಾ ವಶ

ಕೊಚ್ಚಿ: ಮಾದಕ ವಸ್ತುಗಳ ಇಟ್ಟುಕೊಂಡಿದ್ದ ಮಲೆಯಾಳಂ ಸಿನಿಮಾದ ಇಬ್ಬರು ನಿರ್ದೇಶಕರನ್ನು ಕೊಚ್ಚಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.



ಖಾಲೀದ್ ರೆಹಮಾನ್ ಹಾಗೂ ಆಶ್ರಫ್ ಹಮ್ಜಾ ಬಂಧಿತ ಆರೋಪಿಗಳಾಗಿದ್ದಾರೆ. ಇಬ್ಬರ ಬಳಿಯಿದ್ದ ಹೈಬ್ರೀಡ್ ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಗೌಪ್ಯ ಮಾಹಿತಿಯ ಮೇರೆಗೆ ದಾಳಿ ನಡೆಸಿರುವ ಅಬಕಾರಿ ಇಲಾಖೆ ಅಧಿಕಾರಿಗಳು ಇಂದು ಬೆಳಗಿನಜಾವ 2.30ರ ಸುಮಾರಿಗೆ ನಿರ್ದೇಶಕರನ್ನು ಬಂಧನಕ್ಕೊಳಪಡಿಸಿದ್ದಾರೆ. ಆಲಪ್ಪುಳ ಜಿಮ್ಖಾನಾ ಮತ್ತು ತಲ್ಲುಮಾಲಾದಂತಹ ಸಿನಿಮಾಗಳನ್ನು ನಿರ್ದೇಶಿಸಿದ ಮತ್ತು ಮಂಜುಮಲ್ ಬಾಯ್ಸ್ ಚಿತ್ರದಲ್ಲಿ ನಟಿಸಿದ್ದ ರೆಹಮಾನ್, ತಮಾಶಾ, ಭೀಮಂತೆ ವಾಝಿ ಮತ್ತು ಸುಲೈಖಾ ಮಂಜಿಲ್ ಚಿತ್ರದ ನಿರ್ದೇಶಕ ಹಮ್ಜಾ ಮನೆಗಳ ಮೇಲೆ ದಾಳಿ ನಡೆಸಿದಾಗ ಗಾಂಜಾ ಪತ್ತೆಯಾಗಿದ್ದು, ನಂತಹ ಇಬ್ಬರು ನಿರ್ದೇಶಕರು ಸೇರಿ ಹಲವರನ್ನು ಬಂಧನಕ್ಕೊಳಪಡಿಸಲಿದ್ದಾರೆಂದು ತಿಳಿದುಬಂದಿದೆ.

ದೇಶ, ರಾಜ್ಯದಲ್ಲಿ ಹಾಕಿ ಕ್ರೀಡೆ ಉಳಿಯಲು ಕೊಡವರು ಕಾರಣ

ಮುದ್ದಂಡ ಕಪ್ ಹಾಕಿ ಸಮಾರೋಪದಲ್ಲಿ ಗೃಹ ಸಚಿವ ಪರಮೇಶ್ವರ್



ಕೊಡವ ಕುಟುಂಬ ತಂಡಗಳ ನಡುವಿನ ಮುದ್ದಂಡ ಕಪ್ ಹಾಕಿ ಉತ್ಸವದ ಸಮಾರೋಪ ಸಮಾರಂಭವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಿದರು.

ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್

ಬೆಳ್ಳಿ ಹಬ್ಬದ ಮುದ್ದಂಡ ಕಪ್ ಹಾಕಿ ಉತ್ಸವದ ಪುರುಷರ ಪಂದ್ಯಾವಳಿಯಲ್ಲಿ ಸುಮಾರು 396 ತಂಡಗಳು 5544 ಆಟಗಾರರು, 397 ಪಂದ್ಯಗಳು ಹಾಗೂ ಮಹಿಳೆಯರ 5ಎ ಸೈಡ್ ಪಂದ್ಯಾವಳಿಯಲ್ಲಿ 58 ತಂಡಗಳು, 464 ಕ್ರೀಡಾಪಟುಗಳು, ಹಾಗೂ 57 ಪಂದ್ಯಗಳ ಮೂಲಕ ದಾಖಲೆ ಮಾಡಿದ ಮುದ್ದಂಡ ಕಪ್ ಹಾಕಿ ಉತ್ಸವ ಅಧಿಕೃತವಾಗಿ 'ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್'ನಲ್ಲಿ ದಾಖಲಾಯಿತು. ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್‌ನ ಪ್ರಮುಖರಾದ ಸಿಂಧುಜಾ ದಾಖಲೆಯನ್ನು ಘೋಷಿಸಿ ಪ್ರಮಾಣ ಪತ್ರವನ್ನು ಮುದ್ದಂಡ ಕುಟುಂಬಕ್ಕೆ ಹಸ್ತಾಂತರಿಸಿದರು.

ಮುದ್ದಂಡ ಕುಟುಂಬದ ಪಟ್ಟೆದಾರ ಡಾಲಿ ತಿಮ್ಮಯ್ಯ, ಮುದ್ದಂಡ ಕಪ್ ಹಾಕಿ ಉತ್ಸವದ ಗೌರವಾಧ್ಯಕ್ಷ ಮುದ್ದಂಡ ದೇವಯ್ಯ, ಕಾರ್ಯದರ್ಶಿ ಆದ್ಯ ಪೂವಣ್ಣ, ಕೊಡವ ಹಾಕಿ ಅಕಾಡೆಮಿ ಉಪಾಧ್ಯಕ್ಷ ಕುಕ್ಕೇರ ಜಯಚಿಣ್ಣಪ್ಪ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಮಡಿಕೇರಿ,ಏ.27–ದೇಶ ಮತ್ತು ರಾಜ್ಯದಲ್ಲಿ ಹಾಕಿ ಕ್ರೀಡೆ ಜೀವಂತವಾಗಿರಲು ಕೊಡವರು ಕಾರಣ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಶ್ಲಾಘಿಸಿದ್ದಾರೆ.

ಕೊಡವ ಕುಟುಂಬ ತಂಡಗಳ ನಡುವಿನ ಮುದ್ದಂಡ ಕಪ್ ಹಾಕಿ ಉತ್ಸವದ ಅಂತಿಮ ಪಂದ್ಯಾವಳಿಯ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕ್ರೀಡೆಗೆ ಉತ್ತೇಜನ ನೀಡುತ್ತಿದೆ. ಪೊಲೀಸ್ ಇಲಾಖೆ ಹುದ್ದೆಗಳಲ್ಲಿ ಕ್ರೀಡಾಪಟುಗಳಿಗೆ ಶೇ.3ರಷ್ಟು ಮೀಸಲಾತಿ ಪ್ರಕಟಿಸಲಾಗಿದೆ. ಉಳಿದ ಎಲ್ಲಾ ಇಲಾಖೆಗಳಲ್ಲಿ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲಾತಿ ಘೋಷಿಸಿದ್ದು, ಬೇರೆ ಯಾವುದೇ ರಾಜ್ಯದಲ್ಲಿ ಈ ವ್ಯವಸ್ಥೆ ಇಲ್ಲ. ಕೊಡವ ಹಾಕಿ ಹಬ್ಬಕ್ಕೆ ಪ್ರತಿವರ್ಷ 1 ಕೋಟಿ ರೂ.ಗಳನ್ನು ಸರ್ಕಾರ ನೀಡುತ್ತಿದೆ. ಹೆಚ್ಚಿನ ಅನುದಾನದ ಬಗ್ಗೆ ಮುಂದಿನ ದಿನಗಳಲ್ಲಿ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಬೆಂಗಳೂರು ಕೊಡವ ಸಮಾಜಕ್ಕೆ ಸುಮಾರು 50 ಕೋಟಿ ರೂ. ಬೆಲೆ ಬಾಳುವ 7 ಏಕರೆ ಜಾಗವನ್ನು ರಾಜ್ಯ ಸರ್ಕಾರ ನೀಡಿದೆ. ಈ ಜಾಗ ಮಂಜೂರಾಗಲು ರಾಜ್ಯ ಸರ್ಕಾರದ ಟ್ರಬಲ್ ಶೂಟರ್ ಎಂದೇ ಹೆಸರಾಗಿರುವ ಶಾಸಕ ಎ.ಎಸ್.ಪೊನ್ನಣ್ಣ ಸಾಕಷ್ಟು ಶ್ರಮವಹಿಸಿ ನಮ್ಮ ಮೇಲೆ ಒತ್ತಡ ಹಾಕಿದ್ದಾರೆ. ಇದು ಪೊನ್ನಣ್ಣ ಅವರಿಗೆ ಕೊಡವ ಸಮಾಜದ ಮೇಲೆ ಇರುವ ಪ್ರೀತಿ ಮತ್ತು ಕಾಳಜಿಯನ್ನು ತೋರುತ್ತದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ಪ್ರವಾಸಿ ಕ್ಷೇತ್ರವಾಗಿ ಹೆಸರು ಗಳಿಸಿರುವ ಪ್ರಕೃತಿ ಸೌಂದರ್ಯದ ಕೊಡಗು ಜಿಲ್ಲೆ ಎಂದರೆ ಎಲ್ಲರಿಗೂ ಪ್ರೀತಿ. ಕೊಡವರು ಧೈರ್ಯ ಮತ್ತು ತ್ಯಾಗಕ್ಕೆ ಹೆಸರಾದವರು. ಕ್ರೀಡಾಕೂಟಕ್ಕೆ ಇಷ್ಟು ದೊಡ್ಡ ಮಟ್ಟದಲ್ಲಿ ಪ್ರೋತ್ಸಾಹ ನೀಡುತ್ತಿರುವುದನ್ನು ವಿಶ್ವದ ಬೇರೆಲ್ಲೂ ನೋಡಲು ಸಾಧ್ಯವಿಲ್ಲವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಖ್ಯಾತ ಕ್ರೀಡಾಪಟು ಎಂ.ಪಿ. ಗಣೇಶ್ ಅವರಿಗೆ ನಮ್ಮ ತಂದೆಯವರು ಅಧಿಕಾರದಲ್ಲಿದ್ದಾಗ ಹಾಕಿ ಅಕಾಡೆಮಿ ಸ್ಥಾಪನೆಗೆ 20 ಏಕರೆ ಭೂಮಿ ಮಂಜೂರು ಮಾಡುವುದಾಗಿ ತಿಳಿಸಿದ್ದರು. ಆದರೆ ಇದನ್ನು ನಿರಾಕರಿಸಿದ ಗಣೇಶ್ ಆ ಜಾಗದಲ್ಲಿ ಕ್ರೀಡಾ ಹಾಸ್ಟೆಲ್ ಸ್ಥಾಪಿಸುವಂತೆ ಕೇಳಿಕೊಂಡಿದ್ದರು ಎಂದು ಶ್ಲಾಘಿಸಿದರು.

ಸಂಸದ ಯದುವೀರ್ ಮಾತನಾಡಿ ಕ್ರೀಡಾಕೂಟಕ್ಕೆ ನನ್ನ ಸಂಪೂರ್ಣ ಪ್ರೋತ್ಸಾಹ ಮತ್ತು ಬೆಂಬಲವಿದೆ. ಹಾಕಿ ಹಬ್ಬಕ್ಕೆ ಶಾಶ್ವತ ಮೂಲ ಸೌಕರ್ಯದ ಅಗತ್ಯವಿದ್ದು, ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದರೆ ಸಂಪೂರ್ಣ ಬೆಂಬಲ ಸೂಚಿಸುವುದಾಗಿ ಭರವಸೆ ನೀಡಿದರು.

ಶಾಸಕರಾದ ಎ.ಎಸ್.ಪೊನ್ನಣ್ಣ ಡಾ. ಮಂತರ್ ಗೌಡ, ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ ಉತ್ಸವ ಸಮಿತಿಯ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ಮಾತನಾಡಿದರು.

ಮುದ್ದಂಡ ಕಪ್ ಹಾಕಿ ಉತ್ಸವದ ಪ್ರಯುಕ್ತ ಕರಡ ಗ್ರಾಮದಿಂದ 'ಕ್ರೀಡಾ ಜ್ಯೋತಿ'ಯನ್ನು ಐನ್‌ಮನೆಗಳಿಗೆ ಕೊಂಡೊಯ್ದು 128 ಕಿಮೀ ಓಟದ ಮೂಲಕ ಕ್ರಮಿಸಲಾಯಿತು. 'ಕ್ರೀಡಾ ಜ್ಯೋತಿ'ಯ ಸಂಭ್ರಮದ ಮೆರವಣಿಗೆ ಫೀ.ಮಾ. ಕಾರ್ಯಪ್ಪ ಮೈದಾನದವರೆಗೆ ಸಾಗಿತು.

ದಿಗ್ಗಜ ಹಾಕಿ ಆಟಗಾರರನ್ನು ಸನ್ಮಾನಿಸಿದ ಹಾಕಿ ಇಂಡಿಯಾ ಸಂಸ್ಥೆ



ಮಡಿಕೇರಿ,ಏ.27–ಹಾಕಿ ಇಂಡಿಯಾ ಸಂಸ್ಥೆಗೆ ಶತಮಾನೋತ್ಸವದ ಹಿನ್ನೆಲೆಯಲ್ಲಿ ಭಾರತೀಯ ಹಾಕಿ ರಂಗದ ದಿಗ್ಗಜ ಆಟಗಾರರನ್ನು ಗಾಲ್ಫ್ ಕ್ಲಬ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಮರ್ಕೆರಾ ಡೌನ್ಸ್ ಗಾಲ್ಫ್ ಕ್ಲಬ್ ಮತ್ತು ಮದ್ರಾಸ್ ಕ್ರಿಕೆಟ್ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಕ್ಲಬ್ ಸಭಾಂಗಣದಲ್ಲಿ ಮಾಳೆಯಂಡ ಮುತ್ತಪ್ಪ ಅಂಜಪರವಂಡ ಡಾ.ಬಿ. ಸುಬ್ಬಯ್ಯ, ಮುಕ್ಕಾಟೀರ ತಿಮ್ಮಯ್ಯ ಅಪ್ಪಯ್ಯ, ಬಾಳೆಯಡ ಪೂಣಚ್ಚ, ಬುಟ್ಟಿಯಂಡ ಚಂಗಪ್ಪ, ಮುಕ್ಕಾಟೀರ ವಿನೋದ್ ಚಿಣ್ಣಪ್ಪ ಕೂತಂಡ ಪೂಣಚ್ಚ, ಪೈಕೇರ ಕಾಳಯ್ಯ, ಮನೆಯಪಂಡ ಸೋಮಯ್ಯ, ಸಿ.ಎಸ್. ಪೂಣಚ್ಚ, ಲೆಫ್ಟಿನೆಂಟ್ ಕರ್ನಲ್ ಬಾಳೆಯಡ ಕೆ.ಸುಬ್ರಮಣಿ, ಬಿ.ಪಿ.ಗೋವಿಂದ, ಮೊಹಮ್ಮದ್ ರಿಯಾಜ್, ಪದ್ಮಶ್ರೀ ವಾಸುದೇವನ್ ಭಾಸ್ಕರನ್ ಅವರನ್ನು ಮರ್ಕೆರಾ ಡೌನ್ಸ್ ಗಾಲ್ಫ್ ಕ್ಲಬ್ ಅಧ್ಯಕ್ಷ ಐಚೆಟ್ಟೀರ ಅನಿಲ್, ಗೌರವ ಕಾರ್ಯದರ್ಶಿ ಕೊಂಗೇಟೀರ ಹರೀಶ್ ಅಪ್ಪಣ್ಣ ಮದ್ರಾಸ್ ಕ್ರಿಕೆಟ್ ಕ್ಲಬ್‌ನ ಗೌರವ ಕಾರ್ಯದರ್ಶಿ ನಿರಂಜನ್ ಮುದಲಿಯಾರ್, ಕ್ರಿಕೆಟ್ ಕ್ಲಬ್‌ನ ಹಾಕಿ ಕ್ರೀಡಾ ಸಮಿತಿ ಅಧ್ಯಕ್ಷ ರಾಜೀವ್ ರೆಡ್ಡಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಬಸವ ಜಯಂತಿ ಅಂಗವಾಗಿ ವಾರ್ಷಿಕ ಕ್ರೀಡಾಕೂಟ

ವಿರಾಜಪೇಟೆ,ಏ.27–ಬಸವ ಜಯಂತಿ ಅಂಗವಾಗಿ ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ಪೊನ್ನಂಪೇಟೆ ತಾಲೂಕು ಘಟಕದ ವತಿಯಿಂದ ಮೇ 18 ರಂದು ಮಾಯಮುಡಿ ಶಾಲಾ ಮೈದಾನದಲ್ಲಿ ಸಮಾಜ ಬಾಂಧವರಿಗೆ ವಾರ್ಷಿಕ ಕ್ರೀಡಾಕೂಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಅಧ್ಯಕ್ಷ ಎನ್.ಎಮ್.ರಾಜೇಶ್ ತಿಳಿಸಿದರು.

ವಿರಾಜಪೇಟೆ ಸಮಾಜದ ಕಚೇರಿಯ ಸಭಾಂಗಣದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾದ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಬಸವ ಜಯಂತಿ ಅಂಗವಾಗಿ ಮೇ 18 ರಂದು ಸಮಾಜ ಬಾಂಧವರಿಗೆ ಕ್ರೀಡಾಕೂಟ ಏರ್ಪಡಿಸಲಾಗುವುದು, ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘಕ್ಕೆ ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಅಖಿಲ ಭಾರತ ವೀರಶೈವ ಮಹಾಸಭಾ ಕೊಡಗು ಜಿಲ್ಲಾ ಘಟಕದ ಉಪಾಧ್ಯಕ್ಷ ಎಸ್.ಎಸ್.ಸುರೇಶ್‌ರನ್ನು ತಾಲೂಕು ವೀರಶೈವ ಸಮಾಜ ಸನ್ಮಾನಿಸಿ ಗೌರವಿಸಲಾಯಿತು. ಸಭೆಯಲ್ಲಿ ಸಮಾಜದ ಜಿಲ್ಲಾ ಉಪಾಧ್ಯಕ್ಷರಾದ ಸುರೇಶ್, ತಾಲೂಕು ಉಪಾಧ್ಯಕ್ಷ ರಘು ಶ್ರೀಕಂಠಪ್ಪ, ಕಾರ್ಯದರ್ಶಿ ವೇದಾ ಜಯರಾಜು, ಎಸ್.ಎಲ್. ಮಹದೇವಪ್ಪ, ಎಸ್.ಆರ್. ರಮೇಶ್, ಈಶಕುಮಾರ್, ಎಸ್.ಎನ್. ಮಹೇಶ್, ಲೋಕೇಶ್, ಅಶ್ವಿನ್, ರಾಜಶೇಖರ್, ನಾಗಮ್ಮ, ಉಪಸ್ಥಿತರಿದ್ದರು.

ಎನ್.ಎಂ. ರಾಜೇಶ್ ಸ್ವಾಗತಿಸಿದರೆ, ರಘು ಶ್ರೀಕಂಠಪ್ಪ ವಂದಿಸಿದರು.



ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘಕ್ಕೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಎಸ್.ಎಸ್. ಸುರೇಶ್‌ರನ್ನು, ತಾಲೂಕು ವೀರಶೈವ ಸಮಾಜ ಸನ್ಮಾನಿಸಲಾಯಿತು.

ಪಹಲ್ಗಾಮ್ ಹತ್ಯೆ ಖಂಡಿಸಿ ಹಿಂದೂಪರ ಸಂಘಟನೆಗಳ ಪ್ರತಿಭಟನೆ

ಸುಂಟಿಕೊಪ್ಪ: ಹಿಂದೂಗಳ ಮೇಲೆ ನಡೆದ ಹತ್ಯೆಯನ್ನು ಖಂಡಿಸಿ ಹಿಂದೂಪರ ಸಂಘಟನೆಗಳು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದವು. ಇಲ್ಲಿನ ಕನ್ನಡ ವೃತ್ತದಲ್ಲಿ ಜಮಾವಣೆಗೊಂಡ ಹಿಂದೂ ಕಾರ್ಯಕರ್ತರು ಪಹಲ್ಗಾಮ್‌ನಲ್ಲಿ ಭಯೋತ್ಪಾದಕರಿಂದ ಗುಂಡೇಟಿಗೆ ಬಲಿಯಾದ 26 ಮಂದಿ ಹಿಂದೂಗಳಿಗೆ ದೀಪವನ್ನು ಹಚ್ಚಿ ಮೌನ ಪ್ರಾರ್ಥನೆಯೊಂದಿಗೆ ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಿದರು.



ವಿಶ್ವ ಹಿಂದೂ ಪರಿಷತ್‌ನ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ನರಸಿಂಹ ಮಾತನಾಡಿ, ಪಾಕಿಸ್ತಾನ ಪರ ಘೋಷಣೆ ಕೂಗುವ ಕೆಲ ದೇಶದ್ರೋಹಿಗಳು ಇದೊಂದು ಭದ್ರತಾ ವೈಫಲ್ಯ ಎಂದು ಕೂಗಾಡುತ್ತಿರುವುದು ದುರಾದೃಷ್ಟಕರ. ಭಾರತದ ನೆಲದಲ್ಲಿದ್ದು ನೆರೆಯ ಪಾಕಿಸ್ತಾನದೊಂದಿಗೆ ನಂಟು ಬೆಳೆಸಿಕೊಂಡಿರುವ ದೇಶದ್ರೋಹಿಗಳನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಗ್ರಾಪಂ ಅಧ್ಯಕ್ಷ ಪಿ.ಆರ್.ಸುನಿಲ್ ಕುಮಾರ್ ಮಾತನಾಡಿ, ಭಯೋತ್ಪಾದಕರ ವಿರುದ್ಧ ಸರ್ಜಿಕಲ್ ಸ್ಟ್ರೈಕ್ ಮಾಡುವ ಮೂಲಕ ಪಾಕಿಸ್ತಾನದ ಭಯೋತ್ಪಾದಕರನ್ನು ಹತ್ತಿಕ್ಕಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ನಗರಾಧ್ಯಕ್ಷ ಧನುಕಾವೇರಪ್ಪ, ಭಜರಂಗದಳದ ಅಧ್ಯಕ್ಷ ವಿಘ್ನೇಶ್, ಕಾರ್ಯಕರ್ತರಾದ ಬಿ.ಕೆ.ಪ್ರಶಾಂತ್, ಸುದೇಶ್, ಬಿ.ಕೆ.ಮೋಹನ್, ಪುನಿತ್, ಸಿ.ಸಿ. ಸುನಿಲ್, ಅಶೋಕ್, ಪಿ.ಅನಿಲ್, ಕೆ.ಎಸ್.ಅನಿಲ್ ಕುಮಾರ್, ಬಿ.ಎಂ.ಸುರೇಶ್ ಸೇರಿದಂತೆ ಹಿಂದೂ ಕಾರ್ಯಕರ್ತರು ಹಾಜರಿದ್ದರು.

ಪಾಲೂರು ಚಾಮುಂಡಿ ವಾರ್ಷಿಕ ಉತ್ಸವ ಶ್ರದ್ಧಾ ಭಕ್ತಿಯಿಂದ ಸಂಪನ್ನ

ನಾಪೋಕ್ಲು: ಇಲ್ಲಿಗೆ ಸಮೀಪದ ಪಾಲೂರು ಗ್ರಾಮದ ಶ್ರೀ ಮಹಾಲಿಂಗೇಶ್ವರ ವಾರ್ಷಿಕ ಉತ್ಸವದ ಅಂಗವಾಗಿ ಪ್ರತಿ ವರ್ಷ ನಡೆಯುವ ಚಾಮುಂಡಿ (ಚೌಂಡಿ) ತರೆ ಉತ್ಸವ ವಿಜ್ರಂಭಣೆಯಿಂದ ನೆರವೇರಿತು.

5 ಮೂರ್ತಿಗಳ ಕೋಲ ಜರುಗಿದ ಬಳಿಕ ಚಾಮುಂಡಿ ತೆರೆ ಮೇಲೇರಿ ಸಾಂಪ್ರದಾಯಕವಾಗಿ ಶ್ರದ್ಧಾ ಭಕ್ತಿಯಿಂದ ಜರುಗಿತು. ಉತ್ಸವದಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥದಂತೆ ಹರಕೆ ಕಾಣಿಕೆ ಒಪ್ಪಿಸಿ ಪ್ರಸಾದ ಸ್ವೀಕರಿಸಿದರು.



ಚಾಮುಂಡಿ ತರೆ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ವಿಜೃಂಭಣೆಯ ಪಟ್ಟಲದಮ್ಮ ಜಾತ್ರಾ ಮಹೋತ್ಸವ



ಗುಂಡ್ಲುಪೇಟೆ ಪಟ್ಟಲದಮ್ಮನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಗುಂಡ್ಲುಪೇಟೆ,ಏ.27– ಪಟ್ಟಣದಲ್ಲಿ ಶ್ರೀ ಪಟ್ಟಲದಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆಯ ಅಂಗವಾಗಿ ಪಟ್ಟಲದಮ್ಮನವರ ದೇವಾಲಯ ಹಾಗೂ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಹಾಗೂ ತಳಿರು ತೋರಣಗಳಿಂದ ಅಲಂಕರಿಸಿ ವಿಶೇಷ ಪೂಜೆಗಳನ್ನು ನಡೆಸಲಾಯಿತು. ಪಟ್ಟಣ ಸೇರಿದಂತೆ ತಾಲೂಕಿನ ಸುತ್ತಮುತ್ತಲ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಿ ಅಮ್ಮನ ದರ್ಶನ ಪಡೆದು ಕೃತಾರ್ಥರಾದರು.

ಮಧ್ಯಾಹ್ನ ದೇವಾಲಯದಿಂದ ಹೊರಟ ಅಮ್ಮನ ಉತ್ಸವ ಮೂರ್ತಿಯ ಮೆರವಣಿಗೆ ಮೈಸೂರು ದಸರಾ ನೆನಪಿಸುವಂತಿತ್ತು. ಕೇರಳದ ಚೆಂಡೆಮದ್ದಳೆ, ಬ್ಯಾಂಡ್, ಗಾರುಡಿಗೊಂಬೆ, ದೈವ ನರ್ತಕರು, ಪೌರಾಣಿಕ ಪಾತ್ರಗಳು ಸೇರಿದಂತೆ ನಾನಾ ವೇಷಧಾರಿಗಳು, ಹುಲಿಕುಣಿತ, ಬ್ಯಾಂಡ್ ವಾದನ, ಮಂಗಳ ವಾದ್ಯಗಳ ಜತೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿತು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಆಕ್ಸಿಜನ್ ದುರಂತ: 14 ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಕೊಡಿಸಿ

ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆಯಲ್ಲಿ ನೊಂದ ಕುಟುಂಬ ಒತ್ತಾಯ

ಚಾಮರಾಜನಗರ, ಏ.27– ನಗರದ ಜಿಲ್ಲಾಸ್ಪತ್ರೆಯಲ್ಲಿ ನಡೆದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ ನ್ಯಾಯಯುತ ಪರಿಹಾರ ನೀಡಿಲ್ಲ, ಸರ್ಕಾರಿ ಉದ್ಯೋಗವನ್ನೂ ಕೊಟ್ಟಿಲ್ಲ ಎಂದು ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮುಖಂಡರ ಕುಂದುಕೊರತೆ ಆಲಿಕೆ ಸಭೆಯಲ್ಲಿ ದಲಿತ ಮುಖಂಡ ಸಿ.ಎಂ. ಕೃಷ್ಣಮೂರ್ತಿ ಆಕ್ಷೇಪ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗಳ ಸಭಾಂಗಣದಲ್ಲಿ ಬೆಳಿಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮುಖಂಡರ ಕುಂದುಕೊರತೆ ಆಲಿಕೆ ಸಭೆಯಲ್ಲಿ ದಲಿತ ಮುಖಂಡ ಸಿ.ಎಂ. ಕೃಷ್ಣಮೂರ್ತಿ ಮಾತನಾಡಿ, ಉಗ್ರರಿಂದ ಮೃತರಾದವರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡಿದ್ದರೆ, ಆಕ್ಸಿಜನ್ ಸಂತ್ರಸ್ತರಿಗೆ ಮಾತ್ರ 2 ಲಕ್ಷ ರೂ. ಪರಿಹಾರ ನೀಡಿರುವುದು ತಾರತಮ್ಯವಾಗಿದೆ. ಈ ಕುಟುಂಬಗಳಿಗೆ ನ್ಯಾಯಯುತ ಪರಿಹಾರ ಕೊಡಿಸಿ ಎಂದು ಒತ್ತಾಯಿಸಿದರು.



ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಂದು ಕೊರತೆ ಆಲಿಕೆ ಸಭೆ ಡಾ. ಬಿ.ಟಿ.ಕವಿತಾ ಅಧ್ಯಕ್ಷತೆಯಲ್ಲಿ ನಡೆಯಿತು.

ಆಕ್ಸಿಜನ್ ದುರಂತದ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ಯಾವುದೇ ದಾಖಲೆಗಳಿಲ್ಲ. ಜಿಲ್ಲಾಧಿಕಾರಿಗಳೇ ಸರ್ಕಾರಕ್ಕೆ ಎಲ್ಲ ವರದಿ ನೀಡಿದ್ದಾರೆ. ಅವರಿಂದ ಮಾಹಿತಿ ಪಡೆದು ಮುಂದಿನ ಸಭೆಯಲ್ಲಿ ಮಾಹಿತಿ ನೀಡಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ಭರವಸೆ ನೀಡಿದರು.

ಸುಳವಾಡಿ ವಿಷ ಪ್ರಸಾದ ಸೇವನೆ ಪ್ರಕರಣದ ಸಂತ್ರಸ್ತರಿಗೂ ನಿವೇಶನ ನೀಡುವುದು ವಿಳಂಬವಾಗುತ್ತಿದೆ. ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತರಿಂದ ಪರಿಹಾರ ವಾಪಸ್ ಪಡೆಯುವುದು ಸರಿಯಲ್ಲ. ಈ ಬಗ್ಗೆ ಕ್ರಮ ವಹಿಸಬೇಕು ಎಂದು ದೊಡ್ಡಿಂದುವಾಡಿ ಸಿದ್ದರಾಜು ಮನವಿ ಮಾಡಿದರು.

ಸಂತೇಮರಹಳ್ಳಿಯಲ್ಲಿ ಕೊಲೆಯಾದ ನಂಜಯ್ಯ ಪುತ್ರಿ ಜಯಮ್ಮರಿಗೆ ಸಮಾಜ ಕಲ್ಯಾಣ ಇಲಾಖೆ ಎಡವಟ್ಟಿನಿಂದ ಸರಿಯಾದ ನೌಕರಿ ನೀಡಿಲ್ಲ. ಮತ್ತೊಂದು ಸಂತ್ರಸ್ತ ಕುಟುಂಬಕ್ಕೆ ನೀಡಿರುವ ಜಮೀನಿಗೆ ಹೋಗಲು ದಾರಿಯಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು ಸಭೆಯ ಗಮನಕ್ಕೆ ತಂದರು. ಈ ಕುರಿತು ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಎಸ್ಪಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮುನಿರಾಜು ಭರವಸೆ ನೀಡಿದರು.

ಸಭೆಯಲ್ಲಿ ಎಎಸ್ಪಿ ಎಂ.ಎನ್. ಶಶಿಧರ, ಡಿವೈಎಸ್‌ಪಿಗಳಾದ ಲಕ್ಷ್ಮಯ್ಯ, ಧರ್ಮೇಂದ್ರ, ಎಸ್ಸಿ, ಎಸ್ಟಿ ಹೊನ್ನೂರು ಕೃಷ್ಣಮೂರ್ತಿ, ಬ್ಯಾಡಮೂಡ್ಲು ಬಸವಣ್ಣ, ಅಂಬರೀಶ್, ಶಿವರಾಜ್, ಸಾಗಡೆ ನಂಜುಂಡ ನಾಯಕ ಇತರರಿದ್ದರು.

ಉಗ್ರರ ದಾಳಿ ಖಂಡಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ



ಚಾಮರಾಜನಗರ, ಏ.27– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಶ್ರೀನಿವಾಸ ಗೌಡ ಅವರ ನೇತೃತ್ವದಲ್ಲಿ ಸಮಾವೇಶ ಗೊಂಡ ಪ್ರತಿಭಟನಾಕಾರರು ಮಟ್ಟ ಹಾಕಿ ಮಟ್ಟಹಾಕಿ ಭಯೋತ್ಪಾದನೆ ಮಟ್ಟಹಾಕಿ, ಗುಂಡಿಕ್ಕಿ ಗುಂಡಿಕ್ಕಿ ಉಗ್ರರಿಗೆ ಗುಂಡಿಕ್ಕಿ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಗುಂಪನ್ನು ಗುರುಯಾಗಿಸಿಕೊಂಡು ಹತ್ಯೆ ಮಾಡಿರುವ ಉಗ್ರರನ್ನು ಕೇಂದ್ರ ಸರ್ಕಾರ ಗುಂಡಿಕ್ಕಿ ಕೊಲ್ಲುವ ಮೂಲಕ ನಿರ್ನಾಮ ಮಾಡಬೇಕು. ದೇಶದಲ್ಲಿ ಉಗ್ರರನ್ನು ಮಟ್ಟ ಹಾಕಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದ, ಪಣ್ಯದಹುಂಡಿ ರಾಜು, ಮುತ್ತಿಗೆ ಗೋವಿಂದರಾಜ, ರವಿಚಂದ್ರಪ್ರಸಾದ್ ಕಹಳೆ, ಮಹೇಶ್ ಗೌಡ, ರಾಜಪ್ಪ, ಸಿದ್ದರಾಜು, ಲಿಂಗರಾಜು, ತಾಂಡವಮೂರ್ತಿ, ವೀರಭದ್ರ ಇತರರು ಭಾಗವಹಿಸಿದ್ದರು.

ಸಂಪುಟ ಸಭೆ ಯಶಸ್ವಿ ಅಧಿಕಾರಿಗಳ ಕಾರ್ಯಕ್ಕೆ ಪ್ರಶಂಸೆ

ಹನೂರು, ಏ.27–ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಏ.24 ರಂದು ನಡೆದ ರಾಜ್ಯ ಸರ್ಕಾರದ 9ನೇ ಐತಿಹಾಸಿಕ ಸಚಿವ ಸಂಪುಟ ಸಭೆ ಯಶಸ್ವಿಯಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್, ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು ಸೇರಿದಂತೆ ಜಿಲ್ಲೆಯ ಅಧಿಕಾರಿಗಳ ಕಾರ್ಯವೈಖರಿಗೆ ಸಾರ್ವಜನಿಕ ವಲಯದಿಂದ ಪ್ರಶಂಸೆ ವ್ಯಕ್ತವಾಗಿದೆ.

ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಿಗದಿಯಾಗುತ್ತಿದ್ದಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಕಾರ್ಯ ಪ್ರವೃತ್ತರಾಗಿ 20 ಸಮಿತಿಗಳು ಹಾಗೂ ಸಚಿವರು, ಹಿರಿಯ ಅಧಿಕಾರಿಗಳೊಂದಿಗೆ ವ್ಯವಸ್ಥಿತವಾಗಿ ಸಭೆಯ ನಡೆಯಲು ಕಾರಣೀಭೂತರಾದರು.

ಜಿಲ್ಲಾಧಿಕಾರಿಗಳು ಹಾಗೂ ಪ್ರಾಧಿಕಾರಕ್ಕೆ ಶಾಸಕ ಎಂ.ಆರ್. ಮಂಜುನಾಥ್ ಸಹ ಎಲ್ಲಾ ರೀತಿಯ ಸಹಕಾರ ನೀಡಿ ಸಚಿವ ಸಂಪುಟ ಸಭೆಯ ಯಶಸ್ವಿಗೆ ಪ್ರಮುಖ ಪಾತ್ರವಹಿಸಿದ್ದಾರೆ.

ಡಿಸಿಎಂ ಮೆಚ್ಚುಗೆ: ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಗೆ ಜಿಲ್ಲಾಡಳಿತ ಹಾಗೂ ಪ್ರಾಧಿಕಾರದ ವತಿಯಿಂದ ಸಚಿವ ಸಂಪುಟ ಸಭೆಯ ಎಲ್ಲಾ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು ಇದಲ್ಲದೆ ಶ್ರೀ ಕ್ಷೇತ್ರದಲ್ಲಿ ನಡೆಯುವ ಜಾತ್ರಾ ಮಹೋತ್ಸವಗಳಿಗಿಂತಲೂ ವಿಭಿನ್ನವಾಗಿ ಆಕರ್ಷಕ ವಿದ್ಯುತ್ ದೀಪ ಅಲಂಕಾರ, ಸ್ವಾಗತ ಕಮಾನು, ರಾಜಗೋಪುರ ಮಾದರಿಯಲ್ಲಿ ವಿಶಿಷ್ಟವಾಗಿ ಮಾಡಲಾಗಿದ್ದ ಬ್ಯಾನರ್ ನೋಡುಗರ ಕಣ್ಮನ ಸೆಳೆಯುತ್ತಿತ್ತು. ಇವೆಲ್ಲವನ್ನೂ ನೋಡಿ ಡಿಸಿಎಂ ಡಿಕೆ ಶಿವಕುಮಾರ್ ಜಿಲ್ಲಾಧಿಕಾರಿಗಳ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆ ಶ್ರೀ ಕ್ಷೇತ್ರ ಮಲೆ ಮಾದೇಶ್ವರ ಬೆಟ್ಟದಲ್ಲಿ ನಡೆದ ಐತಿಹಾಸಿಕ ಸಚಿವ ಸಂಪುಟ ಸಭೆ ಯಶಸ್ವಿಯಾಗಿದೆ. ಈ ಸಭೆಯ ಯಶಸ್ವಿಗೆ ಹಗಲಿರುಳು ಶ್ರಮಿಸಿದ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು, ಸಿಬ್ಬಂದಿವರ್ಗದವರಿಗೂ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ

ಕನ್ನಡದ ಅಸ್ಮಿತೆ ಸಾಕಾರಗೊಳಿಸಿದ ಡಾ. ರಾಜ್

ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅಭಿಮತ



ಡಾ. ರಾಜ್‌ಕುಮಾರ್ ಕುರಿತು ಆಯೋಜಿಸಲಾಗಿದ್ದ 'ನಮ್ಮೂರ ವರನಟ' ವಿಚಾರ ಸಂಕಿರಣ ಕಾರ್ಯಕ್ರಮವನ್ನು ನಿರ್ದೇಶಕ ಟಿ.ಎಸ್. ನಾಗಾಭರಣ ಉದ್ಘಾಟಿಸಿ ಮಾತನಾಡಿದರು.

ಚಾಮರಾಜನಗರ, ಏ.27– ನಡೆ, ನುಡಿಯಲ್ಲಿ ವಿನಯತೆ, ವೈಚಾರಿಕತೆ ಮೈದುಂಬಿಕೊಂಡಿದ್ದ ಡಾ. ರಾಜ್‌ಕುಮಾರ್ ಅವರು ಪೌರಾಣಿಕ, ಐತಿಹಾಸಿಕ, ಹಾಗೂ ಸಾಮಾಜಿಕ ಪಾತ್ರಗಳಲ್ಲಿ ಕಲಾಕೌಶಲ್ಯ, ನಟನೆ, ಗಾಯನದ ಮೂಲಕ ಕನ್ನಡದ ಅಸ್ಮಿತೆಯನ್ನು ಸಾಕಾರಗೊಳಿಸಿದ್ದಾರೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಕರ್ನಾಟಕ ಸಾಹಿತ್ಯ ಅಕಾಡಮಿ ಮತ್ತು ರಂಗವಾಹಿನಿ ಸಂಸ್ಥೆ ಹಾಗೂ ಚಕೋರ ಸಾಹಿತ್ಯ ವೇದಿಕೆ ಸಂಯುಕ್ತಾಶ್ರಯದಲ್ಲಿ ಪದ್ಮಭೂಷಣ ಡಾ. ರಾಜ್‌ಕುಮಾರ್ ಕುರಿತು ಆಯೋಜಿಸಲಾಗಿದ್ದ 'ನಮ್ಮೂರ ವರನಟ' ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಉತ್ತಮ ಕಲಾಕೌಶಲ್ಯವನ್ನೇ ವೃತ್ತಿಯಾಗಿಸಿಕೊಂಡು ವಿಭಿನ್ನ ವ್ಯಕ್ತಿತ್ವ ರೂಪಿಸಿಕೊಂಡ ಡಾ. ರಾಜ್ ಪ್ರಭಾವಿ ಬದುಕಿನ ಆದರ್ಶ ಮಾದರಿಯನ್ನು ಇಡೀ ಭಾರತೀಯ ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಹೊಟ್ಟೆಪಾಡಿಗಾಗಿ ಚಿತ್ರರಂಗಕ್ಕೆ ಬಂದೆ ಎನ್ನುವಷ್ಟು ಸರಳತೆ ಅವರಲ್ಲಿತ್ತು. ನುಡಿದಂತೆ ನಡೆದ ರಾಜ್‌ಕುಮಾರ್ ಅವರು ಪ್ರತಿಯೊಬ್ಬ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ಜಾಗ ಪಡೆದಿದ್ದು, ನಮ್ಮೂರಿನ ವರನಟ ವಿಚಾರಸಂಕಿರಣ ಪ್ರಸ್ತುತತೆಯಿಂದ ಕೂಡಿದೆ ಎಂದರು.

ಆಶಯ ನುಡಿಗಳನ್ನಾಡಿದ ಹಿರಿಯ ಸಾಹಿತಿ ಕೆ.ವೆಂಕಟರಾಜು, ಭಾರತೀಯ ಚಿತ್ರರಂಗದಲ್ಲಿ ಜಾತಿ, ಧರ್ಮ ಎಲ್ಲವನ್ನು ಮೀರಿ ಜನರ ಪ್ರೀತಿ ಗಳಿಸಿದ ಏಕೈಕ ಮೇರುನಟ ಎಂದರೇ ರಾಜ್‌ಕುಮಾರ್ ಮಾತ್ರ. ಬೀದರ್‌ನಿಂದ ಚಾಮರಾಜನಗರದವರೆಗೂ ಜನರು ಅವರನ್ನು ಪ್ರೀತಿಸುತ್ತಾರೆ, ವಿಶ್ವಾಸದಿಂದ ಸ್ಮರಿಸುತ್ತಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ದೀನಬಂಧು ಸಂಸ್ಥೆ ಪ್ರೊ. ಜಿ.ಎಸ್. ಜಯದೇವ ಮಾತನಾಡಿ ಇತ್ತೀಚಿನ ಸಿನಿಮಾಗಳಲ್ಲಿ ಬದುಕಿನ ವೈಚಾರಿಕತೆ, ಸೃಜನಶೀಲತೆ ಇಲ್ಲವಾಗಿದ್ದು, ಕ್ರೂರತ್ವವನ್ನು ವೈಭವೀಕರಿಸಲಾಗುತ್ತಿದೆ. ಜನರ ದೌರ್ಬಲ್ಯವನ್ನು ಬಂಡವಾಳವನ್ನಾಗಿಸುವ ವ್ಯಾಪಾರಿ ಮನೋಭಾವವನ್ನು ಬಿಡಬೇಕು ಎಂದರು.

ವೇದಿಕೆ ಕಾರ್ಯಕ್ರಮದ ಬಳಿಕ ವರನಟ ಡಾ.ರಾಜ್‌ಕುಮಾರ್ ಕುರಿತ ಗೋಷ್ಠಿಗಳು ನಡೆದವು. ನಂತರ ಸಮಾರೋಪ ಸಮಾರಂಭವನ್ನು ಖ್ಯಾತ ಕಾದಂಬರಿಕಾರ ಬಿ.ಎ. ಮಧು ನಡೆಸಿಕೊಟ್ಟರು. ತದಬಳಿಕ ಡಾ. ರಾಜ್‌ಕುಮಾರ್ ಗೀತೆಗಳ ಗಾಯನ ಕಾರ್ಯಕ್ರಮ ನಡೆಯಿತು.

ಖ್ಯಾತ ಚಲನಚಿತ್ರ ಕಥೆಗಾರ ಬಿ.ಎ. ಮಧು, ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಪಾಪು ವೆಂಕಟರಮಣಸ್ವಾಮಿ, ಚಲನಚಿತ್ರ ನಿರ್ಮಾಪಕ ಎಸ್.ಎ. ಶ್ರೀನಿವಾಸ್, ಪ್ರೊ.ಎ.ಎಂ.ಶಿವಸ್ವಾಮಿ, ಚಲನಚಿತ್ರ ಸಾಹಿತಿ ಡಾ.ಕೃಷ್ಣಮೂರ್ತಿ ಚಮರಂ, ನಟ ಹಾಗೂ ಮೈಸೂರಿನ ರಂಗ ಸಂಘಟಕ ಮಂಡ್ಯ ರಮೇಶ್, ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯ ಸಂಚಾಲಕ ಪ್ರಕಾಶ್ ರಾಜ್ ಮೇಹು, ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ, ಸಮಾಜ ಸೇವಕರು ಹಾಗೂ ರಾಣಿ ಐಶ್ವರ್ಯ ಗ್ರೂಪ್‌ನ ಎಚ್.ಎಲ್.ಸತೀಶ್ ಮುದ್ದೂರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲೆಗೆ ಬಂಪರ್ ಕೊಡುಗೆ ಕೊಟ್ಟ ಸರ್ಕಾರಕ್ಕೆ ಅಭಿನಂದನೆ

ಚಾಮರಾಜನಗರ: ಮಹದೇಶ್ವರ ಬೆಟ್ಟದಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ನೀಡಿದ್ದು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು, ಹೆಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದ ಮಧುವನಹಳ್ಳಿ ಶಿವಕುಮಾರ್ ಹೇಳಿದರು.

ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ವಿಶೇಷ ಅನುದಾನ ನೀಡಿ ಅನುಮೋದನೆ ನೀಡಲಾಗಿದೆ. ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಗೆ ಹೆಚ್ಚಿನ ಯೋಜನೆಗಳು ಬರಬೇಕಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮಹದೇಶ್ವರಬೆಟ್ಟ ಪ್ರಾಧಿಕಾರದಲ್ಲಿಯೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಜಿಲ್ಲೆಯಲ್ಲಿನ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನಿಲ್ ಬೋಸ್ ಯಶಸ್ವಿಯಾಗಿದ್ದಾರೆ. ಜಿಲ್ಲೆಯ ಶಾಸಕರೊಬ್ಬರಿಗೆ ಮಂತ್ರಿ ಸ್ಥಾನ ಕೊಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಾಗಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಜಿ.ಪಂ. ಮಾಜಿ ಸದಸ್ಯರಾದ. ಕೊಪ್ಪಾಳಿ ಮಹದೇವನಾಯಕ, ಯೋಗೇಶ್, ಮುಖಂಡರಾದ ಶಾಂತರಾಜು ಮುಡಿಗುಂಡ ಕಿನಕಹಳ್ಳಿ ರಾಚಯ್ಯ, ಪುಟ್ಟರಾಜು ಹಾಜರಿದ್ದರು.

ಪಾಕಿಸ್ತಾನದ ಜೊತೆ ಯುದ್ಧ ಬೇಡ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅದಕ್ಕೆ ಸ್ಪಷ್ಟನೆ ಕೊಡಲಿ

ಬಿಜೆಪಿ ವಕ್ತಾರ ಮೋಹನ್ ಒತ್ತಾಯ



ಮೈಸೂರು,ಏ.27(ಎಂಟಿವೈ)– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿ ಬಳಿಕ ದೇಶದಲ್ಲಿ ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯುದ್ಧ ಬೇಡ ಎಂದು ಶಾಂತಿಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ನೀಡಿರುವ ಹೇಳಿಕೆಗೆ ಸ್ಪಷ್ಟನೆ ನೀಡಬೇಕು ಎಂದು ಬಿಜೆಪಿ ವಕ್ತಾರ ಮೋಹನ್ ಒತ್ತಾಯಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುದ್ಧ ಮಾಡುವ ಉದ್ದೇಶ ಯಾರಿಗೂ ಇಲ್ಲ. ಆದರೆ, ಪಾಕಿಸ್ತಾನಕ್ಕೆ ಪಾಠ ಕಲಿಸಬೇಕೆಂಬುದು ನಮ್ಮ ಒತ್ತಾಯವಾಗಿದೆ. ಪಹಲ್ಗಾಮ್ ಘಟನೆಯಲ್ಲಿ ಭಯೋತ್ಪಾದಕರು ಅಮಾಯಕರನ್ನು ಗುರಿಯಾಗಿಸಿಕೊಂಡು ಹತ್ಯೆ ಮಾಡಿದ್ದಾರೆ. ಯಾರಿಗೆ ನಮಾಜ್ ಮಾಡಲು ಬರುವುದಿಲ್ಲವೋ ಅಂತಹವರನ್ನು ಗುರಿಯಾಗಿಸಿ ಹತ್ಯೆ ಮಾಡಿದ್ದಾರೆ. ಇದರಿಂದ ದೇಶದಾದ್ಯಂತ ಪಾಕಿಸ್ತಾನದ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತಿದ್ದಾರೆ. ಆದರೆ, ಸಿಎಂ ಸಿದ್ದರಾಮಯ್ಯ ಶಾಂತಿಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಯಾವ ಕಾರಣಕ್ಕೆ ಶಾಂತಿ ಮಾತನಾಡಿದ್ದಾರೆ ಎಂದು ದೇಶದ ಜನರಿಗೆ ಸಿಎಂ ತಿಳಿಸಬೇಕು ಎಂದು ಒತ್ತಾಯಿಸಿದರು.

ಭಯೋತ್ಪಾದಕರು ಧರ್ಮಾಧಾರಿತ, ಜಾತ್ಯಾತೀತವಾಗಿ ಹತ್ಯೆ ಮಾಡಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಓಲೈಸಿಕೊಳ್ಳಲು ಲಕ್ಷ್ಮಣ ಈ ಹೇಳಿಕೆ ನೀಡಿದ್ದಾರೆ. ಯುದ್ಧ ಬೇಡ ಎನ್ನುವ ಮೂಲಕ ನೋಬೆಲ್ ಶಾಂತಿ ಪ್ರಶಸ್ತಿ ಪಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಭಾರತದ ಹಿಂದೂಗಳು ಯುದ್ಧದ ಮನಸ್ಸಿನಲ್ಲಿದ್ದು, ಪಾಕ್‌ಗೆ ತಕ್ಕ ಉತ್ತರ ಕೊಡಲಿ ಎನ್ನುತ್ತಿದ್ದಾರೆ ಎಂದರು.

ವಿಶ್ವದ ಎಲ್ಲಾ ಉಗ್ರರ ಮೂಲ ಪಾಕಿಸ್ತಾನವೇ ಆಗಿದೆ. ಪಾಕಿಸ್ತಾನದ ವಿದೇಶಾಂಗ ಮಂತ್ರಿ ನಾವು ಕಾಂಗ್ರೆಸ್ ಸರ್ಕಾರ ಬೆಂಬಲಿಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಅಂತರರಾಷ್ಟ್ರೀಯ ಕಾರಿಡಾರ್ ಭದ್ರತಾ ಲೋಪದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರಿಗೆ ಉದಯಗಿರಿ ಪ್ರಕರಣದಲ್ಲಿ ಭದ್ರತಾ ವೈಫಲ್ಯದ ಲೋಪ ಕಾಣಲಿಲ್ಲವೆ ಎಂದು ಪ್ರಶ್ನಿಸಿದರು.

ನಾವು ಪಾಕಿಸ್ತಾನಕ್ಕೆ ಧರ್ಮರಹಿತ ನೀರು ಕೊಡುತ್ತಿದ್ದೇವೆ. ಅವರು ರಕ್ತದ ಓಕಳಿ ಹರಿಸಿ ಹೋಗುತ್ತಿದ್ದಾರೆ. ಘಟನೆ ಬಳಿಕ ಕೇಂದ್ರ ಬಿಜೆಪಿ, ಪಾಕಿಸ್ತಾನ ಪ್ರಜೆಗಳನ್ನು ವಾಪಸ್ ಕಳುಹಿಸಿದ್ದಾರೆ. ಅಟಾರಿ ಬಾರ್ಡರ್ ಬಂದ್ ಮಾಡಲಾಗಿದೆ. ಬೇರೆ ಧರ್ಮ ಗೌರವಿಸೋಣ. ಆದರೆ, ನನ್ನ ದೇಶದ ಮೇಲೆ ದಾಳಿ ಮಾಡುವವರನ್ನು ಅಮಾಯಕ ಎನ್ನಬಾರದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್ ಇದ್ದರು.

ಜೆಎಸ್‌ಎಸ್ ಪದವಿ ಕಾಲೇಜಿನ ಸಾಫ್ಟ್‌ಬಾಲ್ ತಂಡಕ್ಕೆ ದ್ವಿತೀಯ ಬಹುಮಾನ



ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ 2024–25ನೇ ಸಾಲಿನ ಅಂತರ ವಲಯ ಅಂತರ ಕಾಲೇಜುಗಳ ಪುರುಷರ ಸಾಫ್ಟ್‌ಬಾಲ್ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳು ಕು. ಕೆ. ಎಲ್. ಸಚಿನ್ ನಾಯಕತ್ವದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ. ಎಂ. ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ. ಕಾರ್ತಿಕ್, ಸಿ.ಎಸ್. ನಿರಂಜನ್, ಬೋಧಕ, ಬೋಧಕೇತರರು ಅಭಿನಂದಿಸಿದ್ದಾರೆ.

ಸೇವಾಯಾನ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ



ಮೈಸೂರಿನ ವಿಜಯನಗರದಲ್ಲಿರುವ ಸೇವಾಯಾನ ಟ್ರಸ್ಟ್ ಹಾಗೂ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾಡಲಾಯಿತು. ಜೆಎಸ್‌ಎಸ್ ಮನೋವೈದ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾದ ಡಾ.ಎಂ.ಕಿಶೋರ್ ಕಾರ್ಯಕ್ರಮ ಉದ್ಘಾಟಿಸಿದರು. ಶಾರದಾ ವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಎ.ಶಶಿಕಲಾ, ಸೇವಾಯಾನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಪ್ರಭಾಮಣಿ, ಮಾತೃಮಂಡಳಿ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕಿ ಶುಭಾಮಣಿ, ಸೇವಾಯಾನ ಸಂಸ್ಥೆಯ ಸಮಾಜ ಸೇವಕರಾದ ಕಿರಣ್, ಡಾ.ಸೌಮ್ಯ, ನಿವೃತ್ತ ಹಿರಿಯ ನರ್ಸ್ ಚಂದ್ರಮತಿ, ಹಿರಿಯರಾದ ವೇದ, ಸದಾಶಿವಪ್ಪ, ಚನ್ನಬಸಪ್ಪ, ಧರ್ಮದರ್ಶಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಎ.ವಿ.ಸುಧಾ ನಿಧನ

ಮೈಸೂರು, ಏ.27– ಮೈಸೂರಿನ ಮಾನಸಿನಗರದ ನಿವಾಸಿ ಎ.ವಿ.ಸುಧಾ(57) ಅವರು ಶನಿವಾರ ನಿಧನರಾದರು.



ಇವರು ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಗಣಿತ ಶಿಕ್ಷಕಿಯಾಗಿ ಹಾಗೂ ಗೀತಾ ಶಿಶು ಶಿಕ್ಷಣ ಸಂಸ್ಥೆಯ ಗೀತಾ ಭಾರತೀ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಂಶುಪಾಲೆಯಾಗಿ, ನಂತರ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಹೊಂದಿದ್ದರು.

ಇವರ ಪತಿ ಎಸ್.ಸುಬ್ರಹ್ಮಣ್ಯ ಮೈಸೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ನಿವೃತ್ತರಾಗಿದ್ದಾರೆ. ಮೃತರು ಪತಿ, ಪುತ್ರಿ ಎಸ್.ಸುರಭಿ, ಅಳಿಯ ಎಸ್.ರಾಕೇಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಶನಿವಾರ ಸಂಜೆ ಸುಧಾ ಅವರ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಲಕ್ಷ್ಮಣ್ ಪಾಕಿಸ್ತಾನ ಪರ ಮಾತನಾಡುತ್ತಿರುವುದು ಖಂಡನೀಯ

ಮೈಸೂರು,ಏ.27(ಎಂಟಿವೈ)– ಪಹಲ್ಗಾಮ್‌ದಲ್ಲಿ ಉಗ್ರರು ನಡೆಸಿದ ನರಮೇಧ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕರೆದ ಸರ್ವಪಕ್ಷಗಳ ಸಭೆಯಲ್ಲಿ ಎಲ್ಲಾ ಪಕ್ಷದ ಮುಖಂಡರು ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರೂ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪಾಕ್ ಪರ ಮಾತನಾಡುತ್ತಿರುವುದು ಖಂಡನೀಯ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಕಿಡಿಕಾರಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಅಮಾಯಕ ಪ್ರವಾಸಿಗರು ಮೃತಪಟ್ಟಿದ್ದಾರೆ. ಇದು ಕ್ರೂರ ಘಟನೆಯಾಗಿದ್ದು, ಉಗ್ರರನ್ನು ಸದೆ ಬಡಿಯಲು ಪ್ರಧಾನಿ ನರೇಂದ್ರ ಮೋದಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಿದ್ದಾರೆ. ಉಗ್ರರು ನಡೆಸಿದ ನರಮೇಧದ ಹಿನ್ನೆಲೆಯಲ್ಲಿ ಚರ್ಚಿಸಲು ಸರ್ವಪಕ್ಷಗಳ ಸಭೆ ಕರೆದಿದ್ದು, ಅದರಲ್ಲಿ ಪಾಲ್ಗೊಂಡಿದ್ದ ಎಲ್ಲಾ ಪಕ್ಷದ ನಾಯಕರು ದೇಶದ ರಕ್ಷಣೆಗೋಸ್ಕರ ಕೇಂದ್ರ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧ ಎಂದು ಹೇಳಿದ್ದಾರೆ. ಅವರಿಗಿಂತಲೂ ಲಕ್ಷ್ಮಣ್ ದೊಡ್ಡವರೇ?, ಇಲ್ಲಿಂದ ಲಕ್ಷ್ಮಣ್ ಯಾವ ಸಂದೇಶ ಕೊಡುತ್ತಿದ್ದಾರೆ. ಯಾರನ್ನು ಮೆಚ್ಚಿಸಲಿಕ್ಕೆ ಇಂತಹ ಹೇಳಿಕೊಡುತ್ತಿದ್ದಾರೆ. ಪಾಕಿಸ್ತಾನದ ಏಜೆಂಟ್ ರೀತಿ ಮಾತನಾಡುವುದು ಸರಿಯಲ್ಲ. ನಮ್ಮ ಸರ್ಕಾರದ ಮೇಲೆ ಸಾಕ್ಷ್ಯ ಆರೋಪ ಮಾಡಿದರೂ ಅದನ್ನು ಸಾಬೀತು ಮಾಡಲು ಆಗಲೇ ಇಲ್ಲ. ದೇಶದ ಒಳಗೆ ಇಂಥ ಹೇಳಿಕೆ ನೀಡಿ ಜನರಿಗೆ ಗೊಂದಲ ಸೃಷ್ಟಿಸಬಾರದು ಎಂದರು.

ಮೈಸೂರು ಮಿತ್ರ

ಸೋಮವಾರ 28 ಏಪ್ರಿಲ್ 2025

ಪ್ರತಿಯೊಬ್ಬರೂ ಓದುವ ಹವ್ಯಾಸ ರೂಢಿಸಿಕೊಳ್ಳಿ

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಲಹೆ



ಕೊತ್ತಲವಾಡಿ ಶಿವಕುಮಾರ್ ಅವರ ಸಂಗಾತ ವಿಮರ್ಶಾ ಲೇಖನಗಳು ಎಂಬ ಕೃತಿ ಬಿಡುಗಡೆಗೊಳಿಸಲಾಯಿತು.

ನಂಜನಗೂಡು, ಏ.27– ಟಿವಿ, ಮೊಬೈಲ್ ಬಂದ ನಂತರ ಎಲ್ಲರಲ್ಲೂ ಓದುವ ಹವ್ಯಾಸ ಕಡಿಮೆಯಾಗಿದೆ. ಮೊಬೈಲ್, ಟಿವಿ ಬಳಕೆಯಿಂದ ಜ್ಞಾನ ಸಂಪಾದನೆ ಅಸಾಧ್ಯ. ಆದ್ದರಿಂದ ಪ್ರತಿಯೊಬ್ಬರೂ ಜ್ಞಾನ ವಿಸ್ತರಿಸಿಕೊಳ್ಳಲು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ತಿಳಿಸಿದರು.

ನಗರದ ನೀಲಕಂಠೇಶ್ವರ ಶಾಲೆಯಲ್ಲಿ ನಂಜನಗೂಡಿನ ಅಖಿಲ ಭಾರತ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ ಕೊತ್ತಲವಾಡಿ ಶಿವಕುಮಾರ್ ಅವರ ಸಂಗಾತ ವಿಮರ್ಶಾ ಲೇಖನಗಳು ಎಂಬ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪ್ರಸ್ತುತ ಬರೀ ಅಂಕಪಟ್ಟಿಗಾಗಿ, ಫಲಿತಾಂಶ ಕೇಂದ್ರಿಕೃತವಾಗಿ ಓದುವ ಪ್ರವೃತ್ತಿ ಹೆಚ್ಚಾಗಿದೆ. ಗೂಗಲ್ ಸರ್ಚ್‌ನಲ್ಲಿ ವಿಷಯಗಳ ಬಗ್ಗೆ ಆ ಕ್ಷಣದ ಮಾಹಿತಿ ಸಿಗುತ್ತದೆ. ಆದರೆ ಪುಸ್ತಕ ಓದುವುದರಿಂದ ಬಹುಕಾಲದವರೆಗೆ ಉಳಿಯುವಂತಹ ಮಾಹಿತಿ ಸಿಗುತ್ತದೆ. ಜ್ಞಾನ ಮನುಷ್ಯನನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸುತ್ತದೆ. ಯುಪಿಎಸ್ಸಿ ಪರೀಕ್ಷೆಗಳಲ್ಲಿ ಸಾಧನೆಗೈದ ಸಾಧಕರು ನಾವು ಟಿವಿ ಮತ್ತು ಮೊಬೈಲ್ ಬಳಕೆಯಿಂದ ಸಾಧನೆಗೈದೆವು ಎಂದು ಹೇಳುವುದಿಲ್ಲ. ಬದಲಾಗಿ ಸಾಧನೆಗೆ ಗ್ರಂಥಾಲಯಕ್ಕೆ ಭೇಟಿ ನೀಡುವುದು. ದಿನಪತ್ರಿಕೆಗಳನ್ನು ಓದುವುದು ನನ್ನ ಸಾಧನೆಗೆ ಸಹಾಯವಾಯಿತು ಎನ್ನುತ್ತಾರೆ. ಆದ್ದರಿಂದ ಇಂದಿನ ವಿದ್ಯಾರ್ಥಿಗಳು ಮತ್ತು ಯುವಕರು ಜ್ಞಾನಾರ್ಜನೆಗಾಗಿ ಗ್ರಂಥಾಲಯಕ್ಕೆ ಭೇಟಿ ನೀಡಿ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳವ ಮೂಲಕ ಸಾಹಿತ್ಯದ ಪೋಷಣೆ ಮಾಡಬೇಕು. ಗುರುಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿರುತ್ತಾರೆ. ಆದ್ದರಿಂದ ಪ್ರಾಧ್ಯಾಪಕರು ಕೂಡ ತಮ್ಮ ವಿದ್ಯಾರ್ಥಿಗಳ ಮೇಲೆ ಸಾಹಿತ್ಯದ ಆಸಕ್ತಿ ಬೆಳೆಸಿಕೊಳ್ಳುವಂತೆ ಪ್ರಭಾವ ಬೀರುವಂತಾಗಬೇಕು ಆಗ ಸಾಹಿತ್ಯ ಕ್ಷೇತ್ರ ಸಂಪದ್ಭರಿತವಾಗಲಿದೆ ಎಂದರು.

ಆಧುನಿಕ ತಂತ್ರಜ್ಞಾನದ ಭರಾಟೆ ನಡುವೆಯೂ ಕನ್ನಡ ಸಾಹಿತ್ಯ ಲೋಕ ಗಟ್ಟಿಯಾಗಿದ್ದು, 8 ಜ್ಞಾನಪೀಠ ಪ್ರಶಸ್ತಿ ಕನ್ನಡಕ್ಕೆ ದಕ್ಕಿರುವುದು ಇದಕ್ಕೆ ನಿದರ್ಶನ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಊಟಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಪುಸ್ತಕಕ್ಕೂ ಮಹತ್ವ ನೀಡುತ್ತಾರೆ. ಜನರಲ್ಲಿ ಇಂದಿಗೂ ಪುಸ್ತಕ, ಸಾಹಿತ್ಯದ ಬಗ್ಗೆ ಆಸಕ್ತಿ ಇರುವುದರಿಂದಲೇ ಕನ್ನಡ ಸಾಹಿತ್ಯ ಲೋಕ ಗಟ್ಟಿಯಾಗಿ ನಿಲ್ಲಲು ಕಾರಣವಾಗಿದೆ. ಕೊತ್ತಲವಾಡಿ ಶಿವಕುಮಾರ್ ಅವರು ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಸಾಹಿತ್ಯ ಓದಿದವರು ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗುವುದು ಸಹಜ. ಆದರೆ ಶಿವಕುಮಾರ್ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಪದವಿ ಗಳಿಸಿ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ಉತ್ತಮ ಬೆಳವಣಿಗೆ. ಅಂತೆಯೇ ರೈತರು, ಕೃಷಿಕರು ಸೇರಿದಂತೆ ವಿವಿಧ ರಂಗದಲ್ಲಿ ತೊಡಗಿರುವವರು ಸಾಹಿತ್ಯ ರಚನೆಯಲ್ಲಿ ತೊಡಗಬೇಕು. ಆಗ ಕನ್ನಡ ಸಾಹಿತ್ಯ ಲೋಕಕ್ಕೆ ವೈವಿಧ್ಯಮಯ ಸಾಹಿತ್ಯ ರಚನೆಯಾಗಿ ಕನ್ನಡ ಸಾಹಿತ್ಯ ಲೋಕ ಸಂಪದ್ಭರಿತವಾಗಲಿದೆ ಎಂದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸತೀಶ್ ಚಂದ್ರ ಮಾತನಾಡಿ, ಸಾಹಿತ್ಯವನ್ನು ಸೂಕ್ಷ್ಮವಾಗಿ ಗ್ರಹಿಸಿ ಸೃಜನಾತ್ಮಕತೆಯಿಂದ ವಿಮರ್ಶಾ ಲೇಖನದ ಮೂಲಕ ಓದುಗರ ಸಾಹಿತ್ಯದ ಬಗ್ಗೆ ಪ್ರೇರೇಪಣೆಗೊಳಿಸುವ ಜವಾಬ್ದಾರಿ ವಿಮರ್ಶಕರಿಗೆ ಇದೆ. ಆದರೆ ಇಂದಿನ ಕಾಲಮಾನದಲ್ಲಿ ಸಾಹಿತ್ಯವನ್ನು ಪರಿಚಯಿಸುವ ಕೆಲಸವಾಗುತ್ತಿಲ್ಲ. ಲೇಖಕರೇ ನಾನು ಇಂತಹ ಸಾಹಿತ್ಯ ರಚಿಸಿದ್ದೇನೆ ಎಂದು ಹೇಳುವಂತಹ ಸನ್ನಿವೇಶ ನಿರ್ಮಾಣವಾಗಿದೆ. ಅಂತಹ ಕೊರತೆ ನಿವಾರಿಸಿ ಕೊತ್ತಲವಾಡಿ ಶಿವಕುಮಾರ್ ಅವರು ಸಂಗಾತ ವಿಮರ್ಶಾ ಲೇಖನದ ಮೂಲಕ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ 20 ಲೇಖಕರ ಬಗ್ಗೆ ಮತ್ತು ಸಾಹಿತ್ಯವನ್ನು ಓದುಗರಿಗೆ ಪರಿಚಯಿಸಿ ಸಾಹಿತ್ಯವನ್ನು ಓದುವಂತೆ ಪ್ರೇರೇಪಣೆಗೊಳಿಸುವ ಕೆಲಸವನ್ನು ಮಾಡಿ ಉದಯೋನ್ಮುಖ ಕವಿಗಳಿಗೆ ಉತ್ತೇಜನ ನೀಡಿದ್ದಾರೆ ಎಂದರು.

ಸಮಾರಂಭದಲ್ಲಿ ಅಖಿಲ ಭಾರತ ಸಾಹಿತ್ಯ ಪರಿಷತ್‌ನ ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಅಧ್ಯಕ್ಷತೆ ವಹಿಸಿದ್ದರು. ಗೋಪಿನಾಥ್, ನೀಲಕಂಠೇಶ್ವರ ಶಾಲೆ ಕಾರ್ಯದರ್ಶಿ ಕುಮಾರಸ್ವಾಮಿ, ಮಹಿಮಾ ಪ್ರಕಾಶನ ಮುಖ್ಯಸ್ಥ ಶ್ರೀನಿವಾಸ್, ಇಂದಿರೇಶ್ ಉಪಸ್ಥಿತರಿದ್ದರು. ಸಭೆಯಲ್ಲಿ ಅಖಿಲ ಭಾರತ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸತ್ಯನಾರಾಯಣ ಪ್ರಾಥಮಿಕ ನುಡಿಗಳನ್ನಾಡಿದರು. ಶಿವಸ್ವಾಮಿ ಪ್ರಾರ್ಥಿಸಿದರು. ಶೋಭಾನಾಗಶಯನ ನಿರೂಪಿಸಿದರು. ಚೇತನ್ ಶರ್ಮ ಸ್ವಾಗತಿಸಿದರು.

ಪುಸ್ತಕಗಳು ಜ್ಞಾನ ಜಗತ್ತಿಗೆ ದ್ವಾರಗಳಿದ್ದಂತೆ



ಸರಗೂರಲ್ಲಿ ವಿಶ್ವಪುಸ್ತಕ, ಕೃತಿ ಸ್ವಾಮ್ಯ ದಿನಾಚರಣೆ ಆಚರಿಸಲಾಯಿತು.

ಸರಗೂರು, ಏ.27– ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಪಟ್ಟಣದ ಗ್ರಂಥಾಲಯದಲ್ಲಿ ವಿಶ್ವ ಪುಸ್ತಕ ಮತ್ತು ಕೃತಿ ಸ್ವಾಮ್ಯ ದಿನಾಚರಣೆ ಆಚರಿಸಲಾಯಿತು.

ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಗ್ರಂಥಾಲಯ ಮೇಲ್ವಿಚಾರಕ ಬಿಡಗಲು ಶಿವಣ್ಣ, ಪುಸ್ತಕಗಳು ಜ್ಞಾನ ಜಗತ್ತಿಗೆ ದ್ವಾರಗಳಿದ್ದಂತೆ. ಪುಸ್ತಕಗಳು ಹೊಸ ಜನರು, ಹೊಸ ಸಂಸ್ಕೃತಿ ಮತ್ತು ಹೊಸ ಆಲೋಚನೆಗಳನ್ನು ಪರಿಚಯಿಸುತ್ತವೆ. ಪುಸ್ತಕಗಳನ್ನು ಅಧ್ಯಯನ ಮಾಡುವುದರಿಂದ ಪ್ರಪಂಚ ಜ್ಞಾನವನ್ನು ಅರಿತುಕೊಳ್ಳುವುದಕ್ಕೆ ಅವಕಾಶವಿರಲಿದೆ ಎಂದರು.

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಆಯೋಗವು 1995ರಲ್ಲಿ ಮೊದಲ ಬಾರಿಗೆ ಓದುವಿಕೆ, ಪ್ರಕಾಶನ ಮತ್ತು ಕೃತಿಸ್ವಾಮ್ಯದ ಬಗ್ಗೆ ಅರಿವು ಮತ್ತು ಪ್ರಚಾರ ಹಮ್ಮಿಕೊಳ್ಳುವ ಮೂಲಕ ಯುವಜನತೆಯಲ್ಲಿ ಪುಸ್ತಕ ಪ್ರೇಮ, ಓದಿನ ಖುಷಿ ಹೆಚ್ಚಿಸುವ ಮತ್ತು ಉತ್ತಮ ಲೇಖಕರನ್ನು ಗೌರವಿಸುವ ಮೂಲಕ ಏ.23ರನ್ನು ವಿಶ್ವ ಪುಸ್ತಕ ಮತ್ತು ಕೃತಿ ಸ್ವಾಮ್ಯ ದಿನ ಎಂಬುದಾಗಿ ಘೋಷಿಸಿದೆ. ಎಂದರು.

ಸಾರ್ವಜನಿಕರಲ್ಲಿ ಓದಿನ ಅಭಿರುಚಿ ಹೆಚ್ಚಿಸುವ ಮೂಲಕ ಪುಸ್ತಕೋದ್ಯಮ ಮತ್ತು ಗ್ರಂಥಸ್ವಾಮ್ಯದ ಬಗ್ಗೆ ತಿಳುವಳಿಕೆ ಮೂಡಿಸಲು ಪ್ರತಿ ವರ್ಷ ಗ್ರಂಥಾಲಯಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಗ್ರಂಥಾಲಯದ ಉಪಯೋಗ ಪಡೆಯಬೇಕು. ಯಾವುದೇ ಪುಸ್ತಕ ಓದುವಾಗ ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿದಾಗ ಮನಸ್ಸಿಗೆ ನೆಮ್ಮದಿ ನೀಡುತ್ತದೆ ಎಂದರು. ಕಾರ್ಯಕ್ರಮದಲ್ಲಿ ಗ್ರಂಥಾಲಯ ಸಿಬ್ಬಂದಿ ವರ್ಷ, ಸಿದ್ದರಾಜು, ಮನೋಹರ್, ವಿನಯ್, ಹರೀಶ್ ಹಾಜರಿದ್ದರು.

ಸಂಘರ್ಷದ ಮೂಲಕ ಹಕ್ಕುಗಳನ್ನು ಪಡೆಯಬೇಕು

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ದೀಪಕ್



ಕಾರ್ಯಕ್ರಮವನ್ನು ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ದೀಪಕ್ ಉದ್ಘಾಟಿಸಿದರು.

ನಂಜನಗೂಡು, ಏ.27– ಅಂಬೇಡ್ಕರ್ ಅವರು ಕಾರ್ಲ್ ಮಾರ್ಕ್ಸ್‌ರಿಂದ ಪ್ರೇರಿತರಾಗಿದ್ದರೂ, ದಲಿತರು ರಕ್ತಪಾತವಿಲ್ಲದ ಸಂಘರ್ಷದ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಬೇಕು ಎಂದು ಪ್ರತಿಪಾದಿಸಿದ್ದರು ಎಂದು ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ದೀಪಕ್ ತಿಳಿಸಿದರು.

ನಗರದ ಉಡುಪಿ ಉಪಹಾರ್ ಸಭಾಂಗಣದಲ್ಲಿ ಭಾನುವಾರ ರೀಡ್ ಅಂಡ್ ಟೇಲರ್ ಕಾರ್ಮಿಕರ ಸೌಹಾರ್ದ ಸಂಘ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಲಿತರು ಇನ್ನೂ ಕೂಲಿಯವರಾಗಿಯೇ ದುಡಿಯುತ್ತಿದ್ದಾರೆ. ಅಂಬೇಡ್ಕರ್ ಹೇಳಿದಂತೆ ಆಳುವ ವರ್ಗವಾಗಿಲ್ಲ. ನಾವು ಪಡೆದ ಜ್ಞಾನವನ್ನು ನಮ್ಮವರು ತಮ್ಮ ಸಮಾಜಕ್ಕೆ ಹಂಚಲು ಸಾಧ್ಯವಾಗಿಲ್ಲ. ಹೀಗಿದ್ದರೂ ದಲಿತರಿಗೆ ಮೀಸಲಾತಿ ಬೇಡ ಎಂಬ ಕೂಗು ಕೇಳಿ ಬರುತ್ತಿದೆ. ಬಲಪಂಥೀಯರಿಗೆ ಎಡಪಂಥೀಯ ವಿಚಾರಗಳು ಅರ್ಥವಾಗಿಲ್ಲ. ಅಯೋಧ್ಯೆ ಯಲ್ಲಿ ವಿಷ್ಣುವಿನ ದಶಾವತಾರವಾಗಿ ಬುದ್ಧನ ಮೂರ್ತಿಯನ್ನು ಚಿತ್ರಿಸಿದರೂ ರಾಮ, ಕೃಷ್ಣರಿಗೆ ನೀಡುವ ಗೌರವ, ಪೂಜೆ ಬುದ್ಧನಿಗೆ ಏಕಿಲ್ಲ. ಸಾಮಾಜಿಕವಾಗಿ ಮೇಲು–ಕೀಳುಗಳನ್ನು ಹೋಗಲಾಡಿಸಲು ದುಡಿದವರು ಅಂಬೇಡ್ಕರ್. ಅವರು ಹಾಕಿಕೊಟ್ಟ ಹಾದಿಯಲ್ಲಿ ತೋರಿದ ಬೆಳಕಿನಲ್ಲಿ ಸಾಗಿದಾಗ ಮಾತ್ರ ದಲಿತರಿಗೆ ಸಮಪಾಲು, ಸಮಬಾಳು ದೊರಕಲು ಸಾಧ್ಯ ಎಂದರು.

ಮೈಲಾಕ್ ನಿವೃತ್ತ ವ್ಯವಸ್ಥಾಪಕ ಸಿ.ಹರಕುಮಾರ್ ಮಾತನಾಡಿ, ಇಂದಿಗೂ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡುವ ಪ್ರಕರಣಗಳು ನಡೆಯುತ್ತಿವೆ. ಅಂಬೇಡ್ಕರ್ ಜ್ಞಾನದ ಬೆಳಕು. ಮಾನವ ಹಕ್ಕುಗಳ ಪ್ರತಿಪಾದಕ. ಅವರು ಹೇಳಿದಂತೆ ದಲಿತರು ಸಾಮಾಜಿಕ, ಆರ್ಥಿಕವಾಗಿ ಪ್ರಗತಿ ಸಾಧಿಸಿದಾಗ ಮಾತ್ರ ಅಂಬೇಡ್ಕರ್ ಕಂಡ ಕನಸು ನನಸಾಗುತ್ತದೆ. ಅಂಬೇಡ್ಕರ್ ಹುಟ್ಟಿದ ದಿನವನ್ನು ವಿಶ್ವದಾದ್ಯಂತ ಜ್ಞಾನದ ದಿನ ಎಂದು ಆಚರಿಸಲಾಗುತ್ತದೆ. ಜಾಗತಿಕ ಮನ್ನಣೆ ಪಡೆದವರು ಅಂಬೇಡ್ಕರ್ ಅವರು ಸಂವಿಧಾನದಲ್ಲಿ ನೀಡಿದ ಹಕ್ಕುಗಳಿಂದಾಗಿ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ದಿನದ 14 ಗಂಟೆ ದುಡಿಸಿಕೊಳ್ಳುತ್ತಿದ್ದ ಬದಲಾಗಿ 8 ಗಂಟೆ ಕೆಲಸ ಜಾರಿಯಾಗಿದೆ. ಕಾರ್ಮಿಕರಿಗೆ ನ್ಯಾಯಯುತವಾದ ಹಕ್ಕುಗಳು ದೊರೆತಿವೆ ಎಂದರು. ಕಾರ್ಯಕ್ರಮದಲ್ಲಿ ಹೋರಾಟಗಾರ ರಾದ ಚೋರನಹಳ್ಳಿ ಶಿವಣ್ಣ, ಜೆ.ಚಿಕ್ಕಜವ ರಯ್ಯ, ಎಂ.ರವಿ, ಬಿ.ಶ್ರೀಕಂಠ, ಕಾಳಯ್ಯ, ರೈತ ಸಂಘದ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಸತೀಶ್ ರಾವ್, ಹಿಮ್ಮಾವು ರಘು ಉಪಸ್ಥಿತರಿದ್ದರು.

ಯುವಜನತೆ ದುಶ್ಚಟ ಬಿಟ್ಟು ಜೀವನ ರೂಪಿಸಿಕೊಳ್ಳಿ

ಜೆಎಂಎಫ್‌ಸಿ ನ್ಯಾಯಾಧೀಶ ಸಂದೇಶ್ ಪ್ರಭು



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಏ.27– ಯುವ ಜನತೆ ದೇಶ ಮುಂದುವರಿಸಿಕೊಂಡು ಹೋಗಬೇಕು. ಆದರೆ ಅವರೇ ನಶೆಯಲ್ಲಿ ತೇಲಾಡುವಂತಾಗಿದೆ ಎಂದು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರೂ ಆದ ಸಂದೇಶ್ ಪ್ರಭು ವಿಷಾದಿಸಿದರು.

ಪಟ್ಟಣದ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸರ್ಕಾರಿ ಅಭಿಯೋಜನಾ ಇಲಾಖೆ, ವಿಶ್ವ ಭಾರತಿ ಪ್ರಥಮ ದರ್ಜೆ ಕಾಲೇಜು ಹಾಗೂ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ನಡೆದ ವಿಶ್ವ ಭೂ ದಿನಾಚರಣೆ ಮತ್ತು ಮಾದಕ ವ್ಯಸನದ ಬಲಿ ಪಶುಗಳಿಗೆ ಕಾನೂನು ಸೇವೆಗಳು ಹಾಗೂ ಮಾದಕ ವ್ಯಸನದ ನಿರ್ಮೂಲನೆ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವಕರು ತಮ್ಮ ಮುಂದಿನ ಜೀವನವನ್ನು ರೂಪಿಸಿಕೊಳ್ಳಬೇಕು. ಆದರೆ ಯುವಕರಿಗೆ ಅಂಗಡಿಗಳಲ್ಲಿ ಚಾಕ್ಲೆಟ್ ಸಿಗುವ ಹಾಗೆ ಮಾದಕ ವಸ್ತುಗಳು ಸುಲಭವಾಗಿ ಸಿಗುತ್ತಿದೆ. ಇದರಿಂದ ಸಾಧ್ಯವಾದಷ್ಟು ದೂರವಿರಬೇಕು. ಆ ಮೂಲಕ ತಮ್ಮ ಜೀವನ ಹಾಳಾಗದಂತೆ ನೋಡಿಕೊಳ್ಳಬೇಕು ಎಂದರು.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿ ಸುರೇಶ್ ಎಸ್.ಎನ್ ಮಾತನಾಡಿ, ಪ್ರತಿದಿನ ಭೂಮಿ ರಕ್ಷಿಸುವ ಜೊತೆಗೆ ನಮ್ಮ ಶಕ್ತಿ ನಮ್ಮ ಗ್ರಹ ಎಂಬ ಘೋಷವಾಕ್ಯದ ಜೊತೆ ಭೂಮಿ ರಕ್ಷಿಸಬೇಕು ಹಾಗೂ ಎನ್‌ಡಿ ಪಿಎಸ್ ಆಕ್ಟ್ 1985ರ ಕುರಿತು ಯುವಕ ರಿಗೆ ಕಾನೂನು ಅರಿವು ಮೂಡಿಸಿದರು. 2ನೇ ಅಪರ ಸಿವಿಲ್ ಮತ್ತು ಜೆಎಂ ಎಫ್‌ಸಿ ನ್ಯಾಯಾಧೀಶರಾದ ಸುಷ್ಮಾ ಮಾತನಾಡಿ, ಮದ್ಯ ವ್ಯಸನದಿಂದ ಮಕ್ಕಳು ಹಾಳಾಗಬೇಡಿ. ನಿಮಗಾಗಿ ನಿಮ್ಮ ತಂದೆ ತಾಯಿ ತುಂಬಾ ಕಷ್ಟ ಪಡುತ್ತಾರೆ. ವಿದ್ಯಾರ್ಥಿ ಜೀವನ ಹಾಳು ಮಾಡಿಕೊಳ್ಳಬೇಡಿ. ಚೆನ್ನಾಗಿ ಓದಿ ಎಲ್ಲರೂ ಮುಂದೆ ಬರಬೇಕು ಎಂದರು. ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ಮತ್ತು ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಹಾಗೂ ಯುವ ಪೀಳಿಗೆ ಶಿಕ್ಷಣದಿಂದ ಹೊರಹುಳಿದು ಹಲವು ರೋಗಗಳಿಗೆ ತುತ್ತಾಗುತ್ತಿದ್ದು, ಆತ್ಮಹತ್ಯೆ ಮತ್ತು ಅಪರಾಧ ಚಟುವಟಿಕೆಗಳಲ್ಲಿ ತೊಡಗುತ್ತಿರುವುದು ಸಮಾಜಕ್ಕೆ ಮಾರಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ಮಣಿರಾಜು, ಹಿರಿಯ ವಕೀಲರಾದ ಸಂಗಮೇಶ್ವರ, ಪ್ಯಾನಲ್ ವಕೀಲರಾದ ಮಣಿರಾಜು, ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕುಮಾರಸ್ವಾಮಿ, ಕಾಲೇಜಿನ ಪ್ರಾಧ್ಯಾಪಕರು, ನ್ಯಾಯಾಲಯದ ಸಿಬ್ಬಂದಿ, ಆರೋಗ್ಯ ಇಲಾಖೆ ಸಿಬ್ಬಂದಿ, ಪೊಲೀಸರು, ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ತಿ.ನರಸೀಪುರದಲ್ಲಿ ಪುರಸಭಾ ಸದಸ್ಯರಿಗೆ ಸನ್ಮಾನ



ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಏ.27– ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ ಎಸ್.ಕೆ.ಕಿರಣ್ ಅಭಿಮಾನಿ ಬಳಗದ ಸದಸ್ಯರು ಛತ್ರಪತಿ ಶಿವಾಜಿ ವಿಗ್ರಹ ನೀಡಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಅವರನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಬಿಜೆಪಿ ಮಾಜಿ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಕಿರಣ್ ಅವರು ಪುರಸಭಾ ಸದಸ್ಯರಾಗಿ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಅಲ್ಲದೇ ವೀರಶೈವ ಮಹಾಸಭಾ ನೂತನ ಉಪಾಧ್ಯಕ್ಷರಾಗಿ ಸಮಾಜದ ಅಭಿವೃದ್ಧಿಗೆ ಪಣ ತೊಟ್ಟಿದ್ದಾರೆ. ಪಟ್ಟಣದಲ್ಲಿ ಸಮಾಜಮುಖಿ ಕಾರ್ಯಗಳ ಮೂಲಕ ಗುರ್ತಿಸಿಕೊಂಡಿರುವ ಅವರ ಜನಪರ ಸೇವಾ ಕಾರ್ಯಕ್ರಮಗಳು ನಿರಂತರವಾಗಿ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ, ನನ್ನ ಸಮಾಜ ಸೇವೆ ಗುರ್ತಿಸಿ ಅಭಿಮಾನಿ ಬಳಗದವರು ನನ್ನನ್ನು ಸನ್ಮಾನಿಸಿರುವುದು ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ನನ್ನ ಸಮಾಜ ಸೇವೆ ಮುಂದುವರೆಸುವ ಮೂಲಕ ಪಟ್ಟಣದ ಬಡಜನರ ಕಷ್ಟಗಳಿಗೆ ನೆರವಾಗುತ್ತೇನೆ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನಂದನ್ ಕುಮಾರ್, ಚೌಹಳ್ಳಿ ಸಿದ್ದರಾಜು, ಟೌನ್ ಬಿಜೆಪಿ ಅಧ್ಯಕ್ಷ ನಂಜುಂಡಸ್ವಾಮಿ, ಕೆಬ್ಬೇಹುಂಡಿ ಸೋಮಣ್ಣ, ಪಿ.ಜಿ.ಹುಂಡಿ ರಘು, ಕರೋಹಟ್ಟಿ ಬಸವರಾಜು, ವಾಟಾಳ್ ಸುರೇಶ್, ಕರೋಹಟ್ಟಿ ರಾಜಶೇಖರ್, ಮಲ್ಲಿಪುರ ಮಹೇಶ್, ಕಿರಗಸೂರು ಮಹದೇವಸ್ವಾಮಿ, ಸಂತೋಷ್, ಅಗಸ್ತ್ಯಪುರ ಸಿದ್ದರಾಜು, ಭೈರಾ, ಸೋಮಶೇಖರಪ್ಪ ಹಾಜರಿದ್ದರು.

ಯುಪಿಎಸ್‌ಸಿಯಲ್ಲಿ 263ನೇ ರ್‍ಯಾಂಕ್: ಪ್ರೀತಿಗೆ ಸನ್ಮಾನ



ಯುಪಿಎಸ್‌ಸಿಯಲ್ಲಿ 263ನೇ ರ್‍ಯಾಂಕ್ ಪಡೆದ ಪ್ರೀತಿ ಅವರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಏ.27– ಯುಪಿಎಸ್‌ಸಿ ಪರೀಕ್ಷೆಯಲ್ಲಿ 263ನೇ ರ್‍ಯಾಂಕ್ ಪಡೆದ ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಗ್ರಾಮದ ನಿವಾಸಿ ಚನ್ನಬಸವಣ್ಣ, ನೇತ್ರಾವತಿ ಅವರ ಪುತ್ರಿ ಕೆ.ಸಿ.ಪ್ರೀತಿ ಅವರನ್ನು ಬೆಟ್ಟದಪುರ, ಕೊರ್ಗಲ್ ಗ್ರಾಮದ ವೀರಶೈವ ಲಿಂಗಾಯತ ಸಮಾಜ ಹಾಗೂ ಸ್ವರ್ಣಂಬ ಚಿಟ್ ಫಂಡ್ಸ್ ಪ್ರೈ. ಲಿಮಿಟೆಡ್ ವತಿಯಿಂದ ಅಂಕನಹಳ್ಳಿಯಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಪ್ರೀತಿ, ತಂದೆ, ತಾಯಿ ಆಸೆ ಈಡೇರಿಸುವುದು ನಮ್ಮಂತಹ ಮಕ್ಕಳ ಕರ್ತವ್ಯ. ಮಕ್ಕಳ ಸಾಧನೆಗೆ ಪೋಷಕರು ಪ್ರೋತ್ಸಾಹ ನೀಡುವ ಜೊತೆಗೆ ಅವರ ಉನ್ನತ ಶಿಕ್ಷಣಕ್ಕೂ ಆದ್ಯತೆ ನೀಡಬೇಕು ಎಂದರು.

ಈ ವೇಳೆ ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ಶರಣ ಸಾಹಿತ್ಯ ಪರಿಷತ್ ಬೆಟ್ಟದಪುರ ಹೋಬಳಿ ಅಧ್ಯಕ್ಷ ಕೊರ್ಗಲ್ ಶಿವಕುಮಾರಸ್ವಾಮಿ, ಶಿವಕುಮಾರಸ್ವಾಮಿಗಳ ಸಂಘದ ಅಧ್ಯಕ್ಷ ತೋಟಪ್ಪಶೆಟ್ಟಿ ಮಾತನಾಡಿ, ಯುಪಿಎಸ್‌ಸಿಯಲ್ಲಿ 263ನೇ ರ್‍ಯಾಂಕ್ ಪಡೆದ ಪ್ರೀತಿ ಅವರ ಸಾಧನೆ ಇಡೀ ವೀರಶೈವ ಲಿಂಗಾಯತ ಸಮಾಜಕ್ಕೆ ಒಂದು ಹೆಮ್ಮೆ. ಮುಂದಿನ ದಿನಗಳಲ್ಲಿ ಸಮಾಜಕ್ಕೆ ಮತ್ತಷ್ಟು ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಬೆಟ್ಟದಪುರದ ಬಿ.ಸಿ. ರಾಜೇಂದ್ರ, ಬಿ.ಎಸ್.ಮಹಾದೇವಪ್ಪ, ಕೊರ್ಗಲ್ ಗ್ರಾಮದ ಶಾಂತಕುಮಾರ್, ಮಂಜು, ಪರಮೇಶ್, ಶ್ವೇತಾ, ಹಿಟ್ಟನಹಳ್ಳಿ ಗ್ರಾಮದ ಮಹದೇವಸ್ವಾಮಿ, ಅಂಕನಹಳ್ಳಿ ಗ್ರಾಮಸ್ಥರು ವಿದ್ಯಾರ್ಥಿನಿ ಪ್ರೀತಿ, ತಂದೆ ಚನ್ನಬಸವಣ್ಣ ಹಾಗೂ ತಾಯಿ ನೇತ್ರಾವತಿ ಅವರನ್ನು ಸನ್ಮಾನಿಸಿದರು.

ಶ್ರೀರಾಕಸಮ್ಮ ದೇವಸ್ಥಾನದ 51ನೇ ವಾರ್ಷಿಕೋತ್ಸವ



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು. ಏ.27– ನಗರದ ಶ್ರೀರಾಕಸಮ್ಮನ ವಾರ್ಷಿಕೋತ್ಸವವನ್ನು ಪ್ರತಿವರ್ಷ ವಿಜೃಂಭಣೆಯಿಂದ ಆಚರಿಸುತ್ತಿರುವುದು ಸಂತೋಷದ ವಿಷಯ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ 20ನೇ ವಾರ್ಡ್‌ನ ನಾಲ್ ಬಂದ್ ಮೊಹಲ್ಲಾ ಹಾಗೂ ಶಿವಜ್ಯೋತಿ ಶ್ರೀರಾಕಸಮ್ಮ ದೇವಸ್ಥಾನದ 51ನೇ ವಾರ್ಷಿಕೋತ್ಸವದಲ್ಲಿ ಮಾತನಾ ಡಿದ ಅವರು ಸಮುದಾಯ ಒಗ್ಗೂಡಿ ಹಬ್ಬ ಆಚರಿಸಬೇಕೆಂದು ತಿಳಿಸಿದರು.

ಇದೇ ವೇಳೆ ನಗರದ ರಾಜಬೀದಿಯಲ್ಲಿ ದೇವರ ಮೆರವಣಿಗೆ ನಡೆಯಿತು. ನಂತರ ದೇವಸ್ಥಾನ ಸಮಿತಿಯಿಂದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಮರ್‌ನಾಥ್, ನಗರಸಭೆ ಸದಸ್ಯರಾದ ಪರ್ವಿನ್ ತಾಜ್, ಶರವಣ, ಮಾಜಿ ನಗರಸಭೆ ಸದಸ್ಯ ರಿಜ್ವಾನ್ ಪಾಷ, ಟಿಎಪಿಎಂಎಸ್ ಅಧ್ಯಕ್ಷ ಬಾಬು, ಮುಖಂಡರಾದ ಇಂಟಕ್ ರಾಜು, ಪ್ರಸಾದ್, ಮಹದೇವಸ್ವಾಮಿ, ಶಿವಸ್ವಾಮಿ, ಶಿವಣ್ಣ, ಮುಜೀಬ್ ಅಹಮದ್, ಅಮಾನ್, ವಸೀಂ ಇನ್ನಿತರರಿದ್ದರು.

ನಾಳೆ ಡಾ.ಅಂಬೇಡ್ಕರ್ ವಿಚಾರ ಯಾತ್ರೆ ಕಾರ್ಯಕ್ರಮ

ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ: ಬಿಜೆಪಿ ಮುಖಂಡ ಡಾ.ರೇವಣ್ಣ ಕರೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿದರು.

ತಿ.ನರಸೀಪುರ, ಏ.27– ಕಾಂಗ್ರೆಸ್ ಒಂದು ಸುಡುವ ಮನೆ ಎಚ್ಚರ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಏಕೆ ಹೇಳಿದ್ದರು ಎಂಬುದು ಸೇರಿದಂತೆ ಅವರ ವಿಚಾರಧಾರೆಗಳ ಬಗ್ಗೆ ಏ.29ರಂದು ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಡಾ.ಅಂಬೇಡ್ಕರ್ ವಿಚಾರ ಯಾತ್ರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮುಖಂಡ ಡಾ.ರೇವಣ್ಣ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ವಿಚಾರಗೋಷ್ಠಿಯಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಭಾಗವಹಿಸಲಿದ್ದು, ಎಲ್ಲಾ ಪ್ರಗತಿಪರ, ದಲಿತ ಸಂಘಟನೆಗಳು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಅಭಿವೃದ್ಧಿ ಪಥದಲ್ಲಿ ನಮ್ಮ ದೇಶ ಸಾಗುತ್ತಿದೆ. ಇದಕ್ಕೆ ಕಾರಣ ಅಂಬೇಡ್ಕರ್ ಸಂವಿಧಾನ. ಬಿಜೆಪಿಯು ಡಾ.ಅಂಬೇಡ್ಕರ್ ವಿಚಾರಕ್ಕೆ ಅವರ ಹೋರಾಟಕ್ಕೆ ಮನ್ನಣೆ ಕೊಟ್ಟು ಬಾಬಾ ಸಾಹೇಬರ ವಿಚಾರಧಾರೆ, ಅನುಭವಿಸಿದ ಕಷ್ಟ, ಆದಂತಹ ಅವಮಾನ, ಸನ್ಮಾನ ಇವೆಲ್ಲವನ್ನು ಜನತೆಯ ಮುಂದಿಡಲಿದೆ ಎಂದರು.

ಬಿಜೆಪಿ ಜನತೆಗೆ ಸತ್ಯಾಸತ್ಯತೆ ಹಾಗೂ ಅವರ ವಿಚಾರಧಾರೆಗಳನ್ನು ತಿಳಿಸುವ ನಿಟ್ಟಿನಲ್ಲಿ ಕಳೆದ 2 ವರ್ಷಗಳಿಂದ ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಕಾಂಗ್ರೆಸ್ ಸರ್ಕಾರ ಅಂಬೇಡ್ಕರ್ ಹೆಸರೇಳಿಕೊಂಡು ಪ.ಜಾತಿ, ಪಂಗಡ, ಓಬಿಸಿ ಜನಾಂಗವನ್ನು ಓಲೈಸಿಕೊಂಡು ಓಟ್‌ಬ್ಯಾಂಕ್ ರಾಜಕಾರಣ ಮಾಡಿಕೊಂಡಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜನತೆಗೆ ದ್ರೋಹವೆಸಗಿತು. ಕಾಂಗ್ರೆಸ್ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪ್ರತಿ ಹಂತದಲ್ಲೂ ನೋವು ನೀಡಿದೆ. ಬಾಬಾ ಸಾಹೇಬರು ಮತದಾನದ ಹಕ್ಕು ಮಂಡನೆ ಮಾಡಿದಾಗ ವಿರೋಧ ಮಾಡಿತ್ತು. ಅಂಬೇಡ್ಕರ್ ಅವರು ಗೆದ್ದು ಪಾರ್ಲಿಮೆಂಟಿಗೆ ಬಂದರೆ ಕಷ್ಟವಾಗುತ್ತದೆ ಎಂದು ಅವರನ್ನು ಸೋಲಿಸಿದ ಪಕ್ಷ ಕಾಂಗ್ರೆಸ್ ಎಂದು ತಿಳಿಸಿದರು. ಆಧುನಿಕ ಭಾರತ ಕಟ್ಟುವ ನಿಟ್ಟಿನಲ್ಲಿ ಬಾಬಾ ಸಾಹೇಬರ ಕೊಡುಗೆ ಅಪಾರವಾಗಿದೆ. ಅವರು ಅಧಿ ಕಾರಕ್ಕೆ ಎಂದೂ ಆಸೆ ಪಟ್ಟವರಲ್ಲ. ಹಾಗೇನಾದರೂ ಆಗಿದ್ದರೆ ಅವರು ಎಂದೋ ಪ್ರಧಾನಿಯಾಗಿರುತ್ತಿದ್ದರು. ಕಾಂಗ್ರೆಸ್ ಪಕ್ಷ ಅವರ ಪರಿಕಲ್ಪನೆಗೆ ಧ್ವನಿಯಾಗಿದ್ದರೆ ಆರ್ಥಿಕ ಸುಧಾರಣೆಗಳು, ಅಂತರರಾಷ್ಟ್ರೀಯ ಸಂಬಂಧಗಳು ಸೇರಿದಂತೆ ಅವರ ಎಲ್ಲಾ ಕನಸು ನನಸಾಗುತ್ತಿತ್ತು. ಆದರೆ ಕಾಂಗ್ರೆಸ್ ಪಕ್ಷ ಅವರ ಆಶಯಕ್ಕೆ ಬೆಂಬಲಿಸಲಿಲ್ಲ ಎಂದರು. ಡಾ.ಅಂಬೇಡ್ಕರ್‌ಗೆ ಅತೀ ಹೆಚ್ಚು ಗೌರವ ಕೊಟ್ಟು ಅವರ ದೃಷ್ಟಿಕೋನದಲ್ಲಿ ಪ್ರಧಾನಿ ಮೋದಿಯವರು ಸಾಗುತ್ತಿದ್ದು ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಬಿಜೆಪಿ ಕ್ಷೇತ್ರಾಧ್ಯಕ್ಷ ಸತ್ಯಪ್ಪ, ಮಾಜಿ ಅಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ದಾಸಯ್ಯ, ಟೌನ್ ಅಧ್ಯಕ್ಷ ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಟಿ.ಎಸ್.ಡಾ.ಮಲ್ಲಿಕಾರ್ಜುನಸ್ವಾಮಿ, ರೈತ ಮೋರ್ಚಾ ಅಧ್ಯಕ್ಷ ಕೆಬ್ಬೇಹುಂಡಿ ಸೋಮಶೇಖರಪ್ಪ ಪುರಸಭಾ ಮಾಜಿ ಸದಸ್ಯ ಎನ್.ಲೋಕೇಶ್, ಮುಖಂಡರಾದ ಎಸ್‌ಎಂಆರ್ ಪ್ರಕಾಶ್, ಕರೋಹಟ್ಟಿ ರಾಜಶೇಖರ್, ತೊಂಟೇಶ್, ವಾಟಾಳ್ ಸುರೇಶ್, ಡಿ.ಎನ್.ಲಕ್ಷ್ಮಣ್ ಮತ್ತಿತರರಿದ್ದರು.

ದೇಶ ಪ್ರೇಮಕ್ಕಿಂತ ಮುಸ್ಲಿಂ ಮೇಲಿನ ಪ್ರೇಮವೇ ಹೆಚ್ಚು

“ಪಹಲ್ಗಾಮ್ ಮಾರಣ ಹೋಮ ನಿಜಕ್ಕೂ ಖಂಡನೀಯ. ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರೇ ಭಯೋತ್ಪಾದಕ ಚಟುವಟಿಕೆ ಹತ್ತಿಕ್ಕಲು ಸರ್ಕಾರಕ್ಕೆ ಬೆಂಬಲ ವ್ಯಕ್ತಪಡಿಸಿರುವಾಗ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಓಟ್ ಬ್ಯಾಂಕ್‌ಗಾಗಿ ಯುದ್ಧ ಬೇಡ ಎನ್ನುವ ಸ್ಟೇಟ್‌ಮೆಂಟ್ ಕೊಡುತ್ತಾರಲ್ಲ ಅವರ ಈ ಹೇಳಿಕೆಯನ್ನು ಬಿಜೆಪಿ ಖಂಡಿಸುತ್ತದೆ. ಇವರು ರಾಷ್ಟ್ರೀಯ ಅಧ್ಯಕ್ಷರಿಗಿಂತ ದೊಡ್ಡವರೇನು, ಸಿದ್ದರಾಮಯ್ಯಗೆ ದೇಶ ಪ್ರೇಮ ಕಿಂಚಿತ್ತೂ ಇಲ್ಲ. ಅವರಿಗಿರುವುದು ಬರೀ ಮುಸ್ಲಿಂರ ಮೇಲಿನ ಪ್ರೇಮ ಅಷ್ಟೆ. ಹಾಗಂದ ಮಾತ್ರಕ್ಕೆ ನಮಗೆ ಮುಸಲ್ಮಾನರೂ ಬೇಡ ಎಂತಲ್ಲ. ನಮ್ಮ ಪಕ್ಷದಲ್ಲೂ ಸಾಕಷ್ಟು ಮಂದಿ ಮುಸಲ್ಮಾನರಿದ್ದಾರೆ. ಆದರೆ ಸಿದ್ದುರಂತೆ ಓಲೈಕೆ ರಾಜಕಾರಣ ಮಾಡಲಾಗದು.

-ಸಿ.ರಮೇಶ್,
ವಿಧಾನಪರಿಷತ್ ಮಾಜಿ ಸದಸ್ಯ.

ಐಪಿಎಲ್ ಹಂಗಾಮ

ಲಕ್ನೋ ಜೈಂಟ್ಸ್ ವಿರುದ್ಧ ಮುಂಬೈಗೆ ಭರ್ಜರಿ ಜಯ



ಮುಂಬೈ, ಏ.27– ಸೂರ್ಯಕುಮಾರ್ ಯಾದವ್, ರಯಾನ್ ರಿಕಲ್ಟನ್ ಅವರ ಅರ್ಧಶತಕ ಹಾಗೂ ಬೂಮ್ರಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಮುಂಬೈ ಇಂಡಿಯನ್ಸ್, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 54 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಸತತ ಸೋಲಿನಿಂದ ಕಂಗೆಟ್ಟಿದ್ದ ಮುಂಬೈ ಇದೀಗ ಸತತ 5ನೇ ಗೆಲುವು ಸಾಧಿಸುವ ಮೂಲಕ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದ್ದು, ಪ್ರಶಸ್ತಿ ಗೆಲ್ಲುವ ಫೇವರಿಟ್ ಆಗಿ ಹೊರ ಹೊಮ್ಮಿದೆ. ಮತ್ತೊಂದೆಡೆ ಆಡಿರುವ 10 ಪಂದ್ಯಗಳಲ್ಲಿ ತಲಾ 5 ಗೆಲುವು, ಸೋಲಿನೊಂದಿಗೆ 10 ಅಂಕಗಳೊಂದಿಗೆ ಲಕ್ನೋ 6ನೇ ಸ್ಥಾನದಲ್ಲಿದ್ದು, ಪ್ಲೇಆಫ್ ಗೇರಲು ರಿಷಬ್ ಪಂತ್ ಬಳಗ ಹರಸಾಹಸ ಪಡಬೇಕಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿತು. 216 ರನ್ ಗುರಿ ಬೆನ್ನತ್ತಿದ ಲಕ್ನೋ 20 ಓವರ್‌ಗಳಲ್ಲಿ 161 ರನ್‌ಗೆ ಆಲೌಟ್ ಆಗಿ ಹೀನಾಯ ಸೋಲು ಅನುಭವಿಸಿತು.

ಮುಂಬೈ ಪರ ರಯಾನ್ ರಿಕೆಲ್ಟನ್ 32 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಒಳಗೊಂಡ 58 ರನ್ ಗಳಿಸಿ ನಿರ್ಗಮಿಸಿದರೇ, ಸೂರ್ಯಕುಮಾರ್ ಯಾದವ್ 28 ಎಸೆತಗಳಲ್ಲಿ ತಲಾ 4 ಬೌಂಡರಿ, ಸಿಕ್ಸರ್ ಒಳಗೊಂಡ 54 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದಂತೆ ರೋಹಿತ್ ಶರ್ಮಾ 12, ವಿಲ್ ಜಾಕ್ಸ್ 29, ನಮನ್ ಧೀರ್ 25, ಕಾರ್ಬಿನ್ ಬಾಷ್ 20 ರನ್ ಗಳಿಸಿದರು. ಲಕ್ನೋ ಪರ ಮಯಾಂಕ್ ಯಾದವ್, ಆವೇಶ್ ಖಾನ್ ತಲಾ 2, ಪ್ರಿನ್ಸ್ ಯಾದವ್, ದಿಗ್ವೇಶ್ ರಾಥಿ, ರವಿ ಬಿಷ್ಣೋಯ್ ತಲಾ 1 ವಿಕೆಟ್ ಪಡೆದರು.

ಮುಂಬೈ ನೀಡಿದ ಗುರಿ ಬೆನ್ನಟ್ಟಿದ ಲಕ್ನೋ ಆರಂಭದಲ್ಲೇ 9 ರನ್ ಗಳಿಸಿದ್ದ ಏಡನ್ ಮಾಕ್ರಂ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಂತರ ಬಂದ ನಿಕೋಲಸ್ ಪೂರನ್ ಬಿರುಸಿನ 27 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ನಾಯಕ ರಿಷಬ್ ಪಂತ್ ಕೇವಲ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಆಟಗಾರರು ಬೃಹತ್ ಮೊತ್ತ ದಾಖಲಿಸುವಲ್ಲಿ ವಿಫಲರಾದರು. ಅಂತಿಮವಾಗಿ ಮಿಚೆಲ್ ಮಾರ್ಷ್ 34, ಆಯುಷ್ ಬದೋನಿ 35, ಡೇವಿಡ್ ಮಿಲ್ಲರ್ 24, ರವಿ ಬಿಷ್ಣೋಯಿ 13 ರನ್ ಗಳಿಸಿದರು. ಮುಂಬೈ ಪರ ಜಸ್ಪ್ರೀತ್ ಬುಮ್ರಾ 4, ಬೌಲ್ಟ್ 3, ವಿಲ್ ಜಾಕ್ಸ್ 2, ಕಾರ್ಬಿನ್ ಬಾಷ್ 1 ವಿಕೆಟ್ ಪಡೆದರು. ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ವಿಲ್ ಜಾಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಗ್ರಸ್ಥಾನಕ್ಕೇರಿದ ಆರ್‌ಸಿಬಿ

ತವರಿನ ಸೋಲಿಗೆ ಡೆಲ್ಲಿಯಲ್ಲಿ ಸೇಡು ತೀರಿಸಿಕೊಂಡ ಬೆಂಗಳೂರು

ದೆಹಲಿ, ಏ.27– ವಿರಾಟ್ ವಿರಾಟ್ ಕೊಹ್ಲಿ, ಕೃನಾಲ್ ಪಾಂಡ್ಯ ಅವರ ಅರ್ಧಶತಕಗಳ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ.

ಆ ಮೂಲಕ ತವರಿನಲ್ಲಿ ಡೆಲ್ಲಿ ವಿರುದ್ಧ ಎದುರಾಗಿದ್ದ ಸೋಲಿನ ಸೇಡು ತೀರಿಸಿಕೊಳ್ಳುವುದರ ಜೊತೆಗೆ ಆಡಿರುವ 10 ಪಂದ್ಯಗಳಲ್ಲಿ 7 ಗೆಲುವು, 3 ಸೋಲಿನೊಂದಿಗೆ 14 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಮತ್ತೊಂದೆಡೆ ಆಡಿರುವ 9 ಪಂದ್ಯಗಳಲ್ಲಿ 6 ಗೆಲುವು, 3 ಸೋಲಿನೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ 4ನೇ ಸ್ಥಾನದಲ್ಲಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. 163 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ 18.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿ ಜಯದ ನಗೆ ಬೀರಿತು.

ಸಾಧಾರಣ ಮೊತ್ತ ಚೇಸಿಂಗ್ ಮಾಡಲು ಹೊರಟ ಆರ್‌ಸಿಬಿ ಆರಂಭ ಕೆಟ್ಟದಾಗಿತ್ತು. ತಂಡದ ಮೊತ್ತ 26 ರನ್ ಆಗುವಷ್ಟರಲ್ಲಿ ಆರ್‌ಸಿಬಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. 10 ಓವರ್ ಕಳೆದರೂ 100 ರನ್‌ಗಳ ಗಡಿ ದಾಟದ ಆರ್‌ಸಿಬಿ ಪಂದ್ಯ ಗೆಲ್ಲುವುದು ಅನುಮಾನ ಎನ್ನಲಾಗುತ್ತಿತ್ತು. ಆದರೆ ವಿರಾಟ್ ಕೊಹ್ಲಿ ಹಾಗೂ ಕೃನಾಲ್ ಪಾಂಡ್ಯ ಅವರ ಶತಕದ ಜೊತೆಯಾಟ ತಂಡದ ಗೆಲುವಿನ ಹಾದಿಯನ್ನು ಸುಗಮವಾಗಿಸಿತು. 4ನೇ ವಿಕೆಟ್‌ಗೆ ಕೃನಾಲ್ ಪಾಂಡ್ಯ, ವಿರಾಟ್ ಕೊಹ್ಲಿ ಜೋಡಿ 84 ಎಸೆತಗಳಲ್ಲಿ 119 ರನ್‌ಗಳ ಜೊತೆಯಾಟ ತಂಡದ ಗೆಲುವಿಗೆ ಕಾರಣವಾಯಿತು. ವಿರಾಟ್ ಕೊಹ್ಲಿ 4 ಬೌಂಡರಿ ಒಳಗೊಂಡ 51 ರನ್ ಗಳಿಸಿ ನಿರ್ಗಮಿಸಿದರೇ, ಕೃನಾಲ್ ಪಾಂಡ್ಯ 47 ಎಸೆತಗಳಲ್ಲಿ 5 ಬೌಂಡರಿ, 4ಸಿಕ್ಸರ್ ಒಳಗೊಂಡ ಅಜೇಯ 73 ಹಾಗೂ ಟೀಂ ಡೇವಿಡ್ 5 ಎಸೆತಗಳಲ್ಲಿ ಅಜೇಯ 19 ರನ್ ಗಳಿಸಿದರು. ಡೆಲ್ಲಿ ಪರ ಅಕ್ಷರ್ ಪಟೇಲ್ 2, ದುಷ್ಮಂತ ಚಮೀರಾ 1 ವಿಕೆಟ್ ಪಡೆದರು.



ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಪರ ಅಭಿಷೇಕ್ ಪೊರೇಲ್ 28 ಮತ್ತು ಫಫ್ ಡುಪ್ಲೆಸಿ 22 ರನ್ ಸಿಡಿಸಿದರು. ಕರುಣ್ ನಾಯರ್ 4 ರನ್‌ಗೆ ಪೆವಿಲಿಯನ್ ಸೇರಿಕೊಂಡರು. ಉತ್ತಮವಾಗಿ ಆಡಿದ ಕೆ.ಎಲ್. ರಾಹುಲ್ 41 ರನ್‌ಗಳ ಕೊಡುಗೆ ನೀಡಿದರು. ಉಳಿದಂತೆ ಅಕ್ಷರ್ ಪಟೇಲ್ 15, ಟ್ರಿಸ್ಟನ್ ಸ್ಟಬ್ಸ್ 34, ವಿಪ್ರಾಜ್ ನಿಗಮ್ 12 ರನ್ ಗಳಿಸಿದರು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 3, ಹೇಜಲ್ವುಡ್ 2, ಯಶ್ ದಯಾಳ್, ಕೃನಾಲ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದರು. ಕೃನಾಲ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	10	7	3	0	14
ಗುಜರಾತ್	8	6	2	0	12
ಮುಂಬೈ	10	6	4	0	12
ಡೆಲ್ಲಿ	9	6	3	0	12
ಪಂಜಾಬ್	9	5	3	0	11
ಲಕ್ನೋ	10	5	5	0	10
ಕೋಲ್ಕತ್ತಾ	9	3	5	0	7
ಹೈದರಾಬಾದ್	9	3	6	0	6
ರಾಜಸ್ಥಾನ್	9	2	7	0	4
ಚೆನ್ನೈ	9	2	7	0	4

ಇಂದಿನ ಪಂದ್ಯ

ರಾಜಸ್ಥಾನ್ ರಾಯಲ್ಸ್
V/S
ಗುಜರಾತ್ ಟೈಟಾನ್

ಸಮಯ: ಸಂಜೆ 7.30

ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್‌ನಲ್ಲಿ ಪದೇ ಪದೇ ತಾಂತ್ರಿಕ ದೋಷ

ಮೆಟ್ಟಿಲು ಮೂಲಕ ಹೋಗಲು ಪ್ರಯಾಸ ಪಡುತ್ತಿರುವ ವಿಕಲಚೇತನರು, ವೃದ್ಧರು, ಮಕ್ಕಳು



ಮೈಸೂರು, ಏ.27(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣದಲ್ಲಿ ಅಳವಡಿಸಿರುವ ಎಸ್ಕಲೇಟರ್ ಪದೇ ಪದೇ ಕೆಟ್ಟು ಹೋಗುತ್ತಿದ್ದು, ವಿಕಲಚೇತನರು, ವೃದ್ಧರು, ಮಕ್ಕಳು ಸೇರಿದಂತೆ ಹಲವರು ಮೆಟ್ಟಿಲು ಹತ್ತಿ ಹೋಗಲು ತೀವ್ರ ಪ್ರಯಾಸ ಪಡುತ್ತಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದ ಟಿಕೆಟ್ ಕೌಂಟರ್ ಪಕ್ಕದಲ್ಲಿರುವ ಎರಡು ಎಸ್ಕಲೇಟರ್‌ಗಳು ಪದೇ ಪದೇ ಕೆಟ್ಟು ಹೋಗುತ್ತಿವೆ. ಹಾಗೆಯೇ ಸಿಎಫ್‌ಟಿಆರ್‌ಐ ಪ್ರವೇಶ ದ್ವಾರದ ರೈಲ್ವೆ ನಿಲ್ದಾಣದಲ್ಲಿರುವ ಎಸ್ಕಲೇಟರ್ ಕೂಡ ಚಾಲನೆಗೊಳ್ಳದೆ ನಿಂತು ಹೋಗುತ್ತಿದೆ.

ಎಸ್ಕಲೇಟರ್ ಕೆಟ್ಟಿರುವ ಹಿನ್ನೆಲೆ ವಿಕಲಚೇತನರು, ವೃದ್ಧರು ಹಾಗೂ ಮಕ್ಕಳು ಮೆಟ್ಟಿಲು ಮೂಲಕವೇ ಅನಿವಾರ್ಯವಾಗಿ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ವಿಕಲಚೇತನರೊಬ್ಬರು ತೀವ್ರ ಪ್ರಯಾಸ ಪಟ್ಟು ಊರುಗೋಲಿನಿಂದ ಮೆಟ್ಟಿಲು ಹತ್ತಿ ಹೋಗುವಾಗ ಬೀಳುತ್ತಿರುವ ದೃಶ್ಯ ಮನಕರಲಕುವಂತಿತ್ತು.

ಎಸ್ಕಲೇಟರ್ ಕೆಟ್ಟು ನಿಲ್ಲುವುದು ಒಂದು ದಿನದ ಸಮಸ್ಯೆಯಲ್ಲ. ಪ್ರತಿದಿನ ಎಸ್ಕಲೇಟರ್‌ನಲ್ಲಿ ತಾಂತ್ರಿಕ ದೋಷ ಕಂಡು ಬರುತ್ತಿದೆ. ಇದರಿಂದ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಅಳವಡಿಸಿರುವ ಎಸ್ಕಲೇಟರ್‌ನಿಂದ ಯಾವ ಪ್ರಯೋಜನ? ಎಂಬ ಪ್ರಶ್ನೆ ಎದುರಾಗಿದೆ.


ಎಸ್ಕಲೇಟರ್ ಅಳವಡಿಸಿರುವ ಕಂಪನಿಗೆ ಅದರ ನಿರ್ವಹಣೆಯ ಜವಾಬ್ದಾರಿ ವಹಿಸಲಾಗಿರುತ್ತದೆ. ಯಾವುದೇ ತಾಂತ್ರಿಕ ಸಮಸ್ಯೆ ಬಾರದಂತೆ ಕಂಪನಿಯವರು ಆಗಾಗ ಬಂದು ಪರಿಶೀಲನೆ ಮಾಡಿ ಹೋಗಬೇಕಾಗುತ್ತದೆ. ಇದಕ್ಕಾಗಿ ರೈಲ್ವೆ ಇಲಾಖೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡುತ್ತದೆ. ಆದರೆ ಸೂಕ್ತ ನಿರ್ವಹಣೆ ಮಾಡದ ಕಾರಣ ತಾಂತ್ರಿಕ ಸಮಸ್ಯೆ ಕಂಡು ಬರುತ್ತಿದೆ.

ಇಂತಹ ಸಮಯದಲ್ಲಿ ರೈಲ್ವೆ ಇಲಾಖೆಯು ಕಂಪನಿಯ ನಿರ್ವಹಣೆ ಗುತ್ತಿಗೆಯನ್ನು ರದ್ದು ಮಾಡಿದರೆ ಪ್ರಾಯಶಃ ಇಂತಹ ಸಮಸ್ಯೆ ಎದುರಾಗುವುದಿಲ್ಲ. ಆದರೆ ರೈಲ್ವೆ ಇಲಾಖೆ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆ ಎಸ್ಕಲೇಟರ್ ಕೆಟ್ಟು ಜನ ಸಾಮಾನ್ಯರು ಪ್ರಯಾಸ ಪಡುವಂತಾಗಿದೆ.

ಎಸ್ಕಲೇಟರ್‌ನಲ್ಲಿ ಸಾಗುವ ವೇಳೆ ಯಾರಾದರೂ ಜಾರಿ ಬಿದ್ದ ಸಂದರ್ಭದಲ್ಲಿ ಎಮರ್ಜೆನ್ಸಿ ಬಟನ್ ಒತ್ತುತ್ತಾರೆ. ಇದರಿಂದ ಎಸ್ಕಲೇಟರ್ ಚಾಲನೆ ಗೊಳ್ಳುವುದಿಲ್ಲ ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಎಲೆಕ್ಟ್ರಿಕಲ್ ಸಿನಿಯರ್ ಸೆಕ್ಷನ್ ಇಂಜಿನಿಯರ್ ನಾಯಕ್ ಅವರು ಸ್ಪಷ್ಟನೆ ನೀಡಿದರು.


ಅಲ್ಲದೆ ಎಸ್ಕಲೇಟರ್‌ಗೆ ಸೆನ್ಸಾರ್ ಅಳವಡಿಸಲಾಗಿದೆ. ಕೆಲವರಿಗೆ ಅದರ ಬಳಕೆ ತಿಳಿಯದ ಕಾರಣ ಚಾಲನೆ ಗೊಳ್ಳುವುದಿಲ್ಲ ಎಂದು ತಿಳಿಸಿದರು.

ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿರುವ ಎಸ್ಕಲೇಟರ್ ಯಾವಾಗಲೂ ಚಾಲನೆಯಲ್ಲೇ ಇರುತ್ತದೆ ಅದೂ ಅಲ್ಲಿ ಯಾವುದೇ ತಾಂತ್ರಿಕ ತೊಂದರೆ ಕಂಡು ಬರುವುದಿಲ್ಲ. ಆದರೆ ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್‌ನಲ್ಲಿ ಏಕೆ ತಾಂತ್ರಿಕ ತೊಂದರೆ ಎದುರಾಗುತ್ತದೆ ಎಂಬ ಪ್ರಶ್ನೆ ಎದುರಾಗಿದೆ.



ಮೆಟ್ಟಿಲು ಹತ್ತುತ್ತಿರುವ ಅಂಗವಿಕಲ

ಸರ್ಕಾರಿ ಗೌರವದೊಂದಿಗೆ ಇಸ್ರೋ ಮಾಜಿ ಅಧ್ಯಕ್ಷ ಕಸ್ತೂರಿರಂಗನ್ ಅಂತ್ಯಕ್ರಿಯೆ



ಬೆಂಗಳೂರು, ಏ.27– ಶುಕ್ರವಾರ ನಿಧನರಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಕೆ. ಕಸ್ತೂರಿ ರಂಗನ್ ಅವರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 2.30ರ ವೇಳೆಗೆ ಹೆಬ್ಬಾಳದ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಇದಕ್ಕೂ ಮುನ್ನ ಕಸ್ತೂರಿರಂಗನ್ ಅವರ ಪಾರ್ಥಿವ ಶರೀರವನ್ನು ಸದಾಶಿವನಗರದ ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ಬೆಳಿಗ್ಗೆ 9ರಿಂದ 12ರ ವರೆಗೆ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ. ಮಹದೇವಪ್ಪ, ಬೋಸರಾಜು, ಜಮೀರ್ ಅಹಮದ್ ಖಾನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಸಿ.ಎನ್. ಅಶ್ವತ್ಥ ನಾರಾಯಣ ಸೇರಿದಂತೆ ಹಲವು ರಾಜಕೀಯ ನಾಯಕರು ಅಂತಿಮ ನಮನ ಸಲ್ಲಿಸಿದರು.

ಪಾರ್ಥಿವ ಶರೀರದ ಮೇಲೆ ತ್ರಿವರ್ಣ ಧ್ವಜವನ್ನು ಹೊದಿಸಲಾಯಿತು. ಪೊಲೀಸರು ಗೌರವಾರ್ಥ ಆಗಸದತ್ತ ಮೂರು ಸುತ್ತು ಗುಂಡು ಹಾರಿಸಿದರು. ನಂತರ ಪಾರ್ಥಿವ ಶರೀರವನ್ನು ಹೆಬ್ಬಾಳದ ಚಿತಾಗಾರಕ್ಕೆ ಕೊಂಡೊಯ್ದು, ಅಂತಿಮ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಪುತ್ರರಾದ ಸಂಜಯ್ ಮತ್ತು ರಾಜೇಶ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.



ಅಂಬೇಡ್ಕರ್ ಪ್ರತಿಮೆ, ಭಾವಚಿತ್ರಕ್ಕೆ ಅಪಮಾನ

ನಾಳೆ ವಾಜಮಂಗಲದಿಂದ ಮೈಸೂರಿನ ಸಿದ್ಧಾರ್ಥನಗರದವರೆಗೆ ಪ್ರತಿಭಟನಾ ಮೆರವಣಿಗೆ

● ಅವಮಾನ ಮಾಡಿದ ಕಿಡಿಕೇಡಿಗಳ ಬಂಧನಕ್ಕೆ ಆಗ್ರಹ ● ಕೇಂದ್ರ, ರಾಜ್ಯ ಸರ್ಕಾರ ಪ್ರತಿಮೆ ಅಪಮಾನ ಮಾಡುವವರ ಶಿಕ್ಷೆಗೆ ವಿಶೇಷ ಕಾನೂನು ಮಾಡಲಿ ● ಅಂಬೇಡ್ಕರ್ ಪ್ರತಿಮೆ ಇರುವೆಡೆ ಸಿಸಿ ಕ್ಯಾಮರ ಅಳವಡಿಸಲಿ ● ರಾಜಕಾರಣಿಗಳು, ಮುಖಂಡರುಗಳ ಮೌನವೇಕೆ ?

ಮೈಸೂರು, ಏ.27(ಜಿಎ)–ಮೈಸೂರು ತಾಲೂಕು ವಾಜಮಂಗಲ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮತ್ತು ಭಾವಚಿತ್ರಕ್ಕೆ ಅವಮಾನ ಮಾಡಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಏ.29ರಂದು ಬೆಳಿಗ್ಗೆ 10ಕ್ಕೆ ವಾಜಮಂಗಲ ಗ್ರಾಮದಿಂದ ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯಲ್ಲಿರುವ ಬುದ್ಧ ಪ್ರತಿಮೆ ಮುಂಭಾಗದ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನಾ ಮೆರವಣಿಗೆಗೆ ಎಲ್ಲಾ ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಸಂಪೂರ್ಣ ಬೆಂಬಲ ಸೂಚಿಸಿದ್ದು, ಸಾವಿರಾರು ಸಂಖ್ಯೆಯಲ್ಲಿ ಭೀಮ ಬಂಧುಗಳು ಪಾಲ್ಗೊಳ್ಳಲಿದ್ದಾರೆ. ಪ್ರತಿಭಟನೆ ಬಳಿಕ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಧಾನಮಂತ್ರಿ, ಮುಖ್ಯಮಂತ್ರಿ, ರಾಜ್ಯಪಾಲ ಹಾಗೂ ಗೃಹ ಮಂತ್ರಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅವಮಾನ ಮಾಡಿದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ, ಕಾನೂನು ರೀತಿಯಲ್ಲಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಗುತ್ತದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮತ್ತು ಭಾವಚಿತ್ರಕ್ಕೆ ಅಪಮಾನಗೊಳಿಸಿದ ಕಿಡಿಗೇಡಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಶಿಕ್ಷೆ ವಿಧಿಸುವ ಸಲುವಾಗಿ ವಿಶೇಷ ಕಾನೂನನ್ನು ರೂಪಿಸಬೇಕು. ಎಲ್ಲೆಲ್ಲಿ ಅಂಬೇಡ್ಕರ್ ಅವರ ಪುತ್ಥಳಿಗಳಿವೆ ಅಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ, ಸಾಧನೆ ಮತ್ತು ತತ್ವಾದರ್ಶಗಳನ್ನು ತಿಳಿಸುವ ಪಾಠ ಪ್ರವಚನಗಳನ್ನು ಶಾಲಾ–ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು ಎಂದು ಆಗ್ರಹಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಮತ್ತು ನೀಡಿದ ಮೀಸಲಾತಿಯಿಂದ ರಾಜಕೀಯ ಅಧಿಕಾರ, ಮತ್ತಿತರ ಅವಕಾಶಗಳನ್ನು ಪಡೆದ ರಾಜಕಾರಣಿಗಳು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅವಮಾನವಾದರೂ ಯಾವುದೇ ರೀತಿಯ ಪ್ರತಿರೋಧ ವ್ಯಕ್ತಪಡಿಸುತ್ತಿಲ್ಲ. ಅಂಬೇಡ್ಕರ್ ಅವರ ಹೆಸರಿನಲ್ಲಿ ನಾಲ್ಕು ತಲೆಮಾರು ಕುಳಿತು ತಿಂದುಂಡರೂ ಮುಗಿಯದಷ್ಟು ಆಸ್ತಿ ಸಂಪಾದಿಸಿರುವ ರಾಜಕೀಯ ಮುಖಂಡರು ಅಂಬೇಡ್ಕರ್ ಅವರ ಪ್ರತಿಮೆಗಳ ಮೇಲೆ ಕಿಡಿಗೇಡಿಗಳು ದಾಳಿ ನಡೆಸುತ್ತಿದ್ದರೂ ಪ್ರತಿಭಟನೆ ನಡೆಸದೆ ಸುಮ್ಮನಿರುವಂತಹ ದುಃಖದ ಸಂಗತಿ ಮತ್ತೊಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೊಲೆ, ಸುಲಿಗೆ, ದರೋಡೆ ಮಾಡಿದವರನ್ನು ಪೊಲೀಸರು ಕೆಲವೇ ಗಂಟೆಗಳಲ್ಲಿ ಬಂಧಿಸುತ್ತಾರೆ. ಆದರೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ, ಭಾವಚಿತ್ರಗಳಿಗೆ ಅವಮಾನ ಮಾಡಿದ ನೀಚ ಮನಸ್ಥಿತಿಯ ಕಿಡಿಗೇಡಿಗಳನ್ನು ಬಂಧಿಸದೆ ನಿರ್ಲಕ್ಷ್ಯ ವಹಿಸುತ್ತಿರುವುದನ್ನು ಗಮನಿಸಿದರೆ ಪೊಲೀಸ್ ಇಲಾಖೆಯೂ ಸಹಾ ಅಂಬೇಡ್ಕರ್ ಅವರ ವಿರೋಧಿಯಾಗಿದೆ ಎಂಬ ಅನುಮಾನ ಮೂಡುತ್ತದೆ ಎಂದು ಹೇಳಿದರು.

ಅಂಬೇಡ್ಕರ್ ಅವರು ದೇಶದ ಎಲ್ಲಾ ಸಮುದಾಯಗಳೂ ಘನತೆ–ಗೌರವದಿಂದ ಬಾಳ್ವೆ ನಡೆಸಲು ಅನುಕೂಲವಾಗುವ ಸಕಲ ಸವಲತ್ತುಗಳನ್ನು ಸಂವಿಧಾನದ ಮೂಲಕ ಕಲ್ಪಿಸಿಕೊಟ್ಟಿದ್ದಾರೆ. ಅಂತಹ ಮಹಾನ್ ಚೇತನದ ಭಾವಚಿತ್ರಗಳನ್ನು ಹರಿದು ಹಾಕಿ, ಪ್ರತಿಮೆಗಳನ್ನು ಧ್ವಂಸಗೊಳಿಸುವುದನ್ನು ಗಮನಿಸಿದರೆ ಅತೀವ ದುಃಖವಾಗುತ್ತದೆ. ಭಾರತೀಯರ ಬದುಕನ್ನು ಹಸನು ಮಾಡಲು ಹಗಲಿರುಳು ಶ್ರಮಿಸಿ, ತನ್ನ ಬದುಕನ್ನೇ ತ್ಯಾಗ ಮಾಡಿದ ತ್ಯಾಗಮಯಿ ಡಾ.ಬಿ. ಆರ್. ಅಂಬೇಡ್ಕರ್ ಅವರನ್ನು ಅವಮಾನಿಸುವಷ್ಟು ನೀಚತನದ ಮನಸ್ಸು ಇವರಿಗೇಕೆ ಬಂತು? ಎಂಬ ಪ್ರಶ್ನೆ ನಿರಂತರವಾಗಿ ಕಾಡುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಮಣಿ, ವಾಜಮಂಗಲ ಗ್ರಾಮ ಪಂಚಾಯಿತಿ ಸದಸ್ಯ ಕೆ.ಶಿವು, ವಾಜಮಂಗಲ ಗ್ರಾಮದ ಮುಖಂಡರಾದ ಚಿನ್ನಸ್ವಾಮಿ, ಸುರೇಶ್, ಮಂಜು, ಸಿದ್ದಪ್ಪ, ಸಣ್ಣಪ್ಪ, ಮಹದೇವ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಗಂಧದ ಗುಡಿ (ಕ)+ ಒಡೆಲಾ–2 (ತೆ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದಾಸರಹಳ್ಳಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗ್ಯಾಂಗರ್ಸ್ (ತ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ದಾಸರಹಳ್ಳಿ (ಕ) + ರಿಕ್ಷಾ ಚಾಲಕ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ. ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀ ಗಾನಯೋಗಿ ಪಂ.ಪಂಚಾಕ್ಷರಿ ಗವಾಯಿಗಳ, ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ ಜಯಂತೋತ್ಸವ



ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ಶ್ರೀ ಗಾನಯೋಗಿ ಪಂ.ಪಂಚಾಕ್ಷರಿ ಗವಾಯಿಗಳ 134ನೇ, ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ 111ನೇ ಜಯಂತೋತ್ಸವ ಹಾಗೂ ಸಂಗೀತೋತ್ಸವ ನಡೆಸಲಾಯಿತು.

ಮೈಸೂರು, ಏ.27(ಜಿಎ)– ಮೈಸೂರಿನ ಶ್ರೀಗಾನಯೋಗಿ ಕಲಾ ಟ್ರಸ್ಟ್ ದ್ವಿತೀಯ ವಾರ್ಷಿಕೋತ್ಸವ ಮತ್ತು ಶ್ರೀ ಅಮರೇಶ್ವರ ಸಂಗೀತ ಮತ್ತು ಸಾಂಸ್ಕೃತಿಕ ಕಲಾ ಸಂಸ್ಥೆಯ 15ನೇ ವಾರ್ಷಿಕೋತ್ಸವದ ಅಂಗವಾಗಿ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ಶ್ರೀ ಗಾನಯೋಗಿ ಪಂ.ಪಂಚಾಕ್ಷರಿ ಗವಾಯಿಗಳ 134ನೇ, ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳ 111ನೇ ಜಯಂತೋತ್ಸವ ಹಾಗೂ ಸಂಗೀತೋತ್ಸವ ನಡೆಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಕುಂದೂರು ಮಠದ ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷ ಮ.ಗು.ಸದಾನಂದಯ್ಯ ವಹಿಸಿದ್ದರು.

ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಇಂದು ಎಲ್ಲಾ ಕ್ಷೇತ್ರದಲ್ಲಿ ಗುರು ಶಿಷ್ಯ ಪರಂಪರೆ ನಶಿಸಿ ಹೋಗುತ್ತಿದೆ. ಆದರೆ, ನೃತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಗುರು, ಶಿಷ್ಯರ ಪರಂಪರೆ ಅಮರವಾಗಿದೆ. ಅದಕ್ಕೆ ಶ್ರೀಗಾನಯೋಗಿ ಪಂ.ಪಂಚಾಕ್ಷರಿ ಗವಾಯಿ ಮತ್ತು ಡಾ.ಪಂ.ಪುಟ್ಟರಾಜ ಗವಾಯಿಯವರು ಸಾಕ್ಷಿಯಾಗಿದ್ದಾರೆ ಎಂದರು.

ಸಂಗೀತ ಕ್ಷೇತ್ರಕ್ಕೆ ಶರಣಾಗುವವರಿಗೆ ಸಾವಿಲ್ಲ. ಅವರು ಸಂಗೀತದ ಮೂಲಕ ಅಮರರಾಗಿರುತ್ತಾರೆ. ಇಂದು ರಾಜ್ಯದ ಯಾವುದೇ ಮೂಲೆಯಲ್ಲಿ ನೋಡಿದರು, ಶ್ರೀಗಳ ಶಿಷ್ಯ ಗಣ ಸಂಗೀತದ ಕಂಪನ್ನು ಹರಡುತ್ತಿದ್ದಾರೆ. ಸಂಗೀತ, ನೃತ್ಯ ರಾಜ್ಯದಾದ್ಯಂತ ಹರಡಿಕೊಂಡರೆ ರಾಜ್ಯಕ್ಕೆ ಅದು ಉತ್ತಮ ಬೆಳವಣಿಗೆಯಾಗಲಿದೆ ಎಂದು ತಿಳಿಸಿದರು.

ಸಂಗೀತೋತ್ಸವದಲ್ಲಿ ರಾಜ್ಯದ ವಿವಿಧ ಭಾಗದಿಂದ ಆಗಮಿಸಿದ್ದ ಪ್ರಸಿದ್ಧ ಕಲಾವಿದರೂ ಸಂಗೀತ ಸುಧೆ ಹರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ.ಪಂ.ಪುಟ್ಟರಾಜ ಗವಾಯಿಗಳ ಶಿಷ್ಯ ಡಾ.ವೆಂಕಟೇಶ್ ಪೂಜಾರ್, ಕಳಕಪ್ಪ ವಿ.ಮುದ್ಲಾಪುರ, ಡಿ.ಜಿ.ಸೋಮಶೇಖರ ಮೂರ್ತಿ, ಶಾರದ ಶಿವಲಿಂಗಸ್ವಾಮಿ, ಡಾ.ಲೋಕೇಶ್ವರಪ್ಪ, ಆನಂದಕುಮಾರ್ ಕಂಬಳಿಹಾಳ, ಬಿ.ಎನ್.ವಿರೂಪಾಕ್ಷ ರತ್ನಮ್ಮ ಎಲ್.ಹೂಗಾರ ಮತ್ತಿತರರು ಪಾಲ್ಗೊಂಡಿದರು.

ಅಧಿಕಾರ ಹೋಗುತ್ತದೆ ಎಂಬ ಮೌಢ್ಯದಿಂದ

ಚಾಮರಾಜನಗರ ಬಿಟ್ಟು ಮಲೆ ಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ!

● ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ● ಮೈಸೂರಲ್ಲಿ ಈಡುಗಾಯಿ ಚಳವಳಿ
● ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರನ್ನು ಅದ್ಭುತವಾಗಿ ಅಭಿವೃದ್ಧಿ ಮಾಡಬಹುದಿತ್ತು!



ಮೈಸೂರಿನಲ್ಲಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಈಡುಗಾಯಿ ಒಡೆಯುವ ಚಳವಳಿ ನಡೆಯಿತು.

ಮೈಸೂರು,ಏ.27(ಪಿಎಂ)– ಸಚಿವ ಸಂಪುಟ ಸಭೆಯನ್ನು ಚಾಮರಾಜನಗರದಲ್ಲೇ ಮಾಡಬೇಕಿತ್ತು. ಆದರೆ ಅಧಿಕಾರ ಹೋಗುತ್ತದೆ ಎಂಬ ಮೌಢ್ಯದಿಂದ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಾಡಿದ್ದಾರೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ದೂರಿದರು.

ಎಂಇಎಸ್ ನಿಷೇಧಿಸಬೇಕು, ಗಡಿನಾಡು ಬೆಳಗಾವಿ ಅಭಿವೃದ್ಧಿಯಾಗಬೇಕು, ಮೆಟ್ರೋ ದರ ಇಳಿಸಬೇಕು ಎಂಬುದು ಸೇರಿದಂತೆ ಕನ್ನಡಿಗರ ಸಮಗ್ರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಶನಿವಾರ ಈಡುಗಾಯಿ ಒಡೆಯುವ ಚಳವಳಿ ನಡೆಸಿ, ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಪೂಜೆ ಮಾಡಿಸಿಕೊಂಡು ಚಾ.ನಗರದಲ್ಲಿ ಸಚಿವ ಸಂಪುಟದ ಸಭೆ ಮಾಡಬೇಕಿತ್ತು. ಆದರೆ ಮೂಢನಂಬಿಕೆಯಿಂದ ಹಾಗೆ ಮಾಡಲಿಲ್ಲ. ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ ಉಪಮುಖ್ಯಮಂತ್ರಿಯಿಂದ ಹಿಡಿದು ಹತ್ತಾರು ಜನ ಚಾ.ನಗರಕ್ಕೆ ಬರಲು ಹಿಂದು–ಮುಂದು ನೋಡಿದ್ದಾರೆ. ಕಾರಣ, ಚಾ.ನಗರಕ್ಕೆ ಬಂದರೆ ಅಧಿಕಾರ ಹೋಗುತ್ತದೆ ಎಂಬ ಮೌಢ್ಯ ಎಂದು ಕಿಡಿಕಾರಿದರು.

ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಅಭಿವೃದ್ಧಿಯಾಗಬೇಕು. ಮೊನ್ನೆ ಚಾಮರಾಜನಗರದಲ್ಲಿ ಸಚಿವ ಸಂಪುಟ ಸಭೆ ಮಾಡಿರುವುದು ಏನೂ ಪ್ರಯೋಜನ ವಿಲ್ಲ. ಚಾಮರಾಜನಗರದ ಬೆಳವಣಿಗೆಗೆ ವಿಶೇಷ ಪ್ಯಾಕೇಜ್ ಕೊಡಬೇಕಿತ್ತು. ಆದರೆ ಕೊಡಲಿಲ್ಲ ಎಂದರು.

ಈಗ ಸಿಎಂ ಸಿದ್ದರಾಮಯ್ಯನವರಿಗೆ ಪೂಜೆ ಬಗ್ಗೆ ಬಹಳ ಗೌರವ ಬಂದಿದೆ. ಕುಂಕುಮ ಹಚ್ಚಿಕೊಳ್ಳುತ್ತಾರೆ. ತೀರ್ಥ ಕುಡಿಯುತ್ತಾರೆ ಇದನ್ನು ನಾನು ಮೊದಲು ನೋಡೇ ಇರಲಿಲ್ಲ ಇತ್ತೀಚೆಗೆ 2 ವರ್ಷಗಳಿಂದ ದೇವಸ್ಥಾನಕ್ಕೆ ಹೋದ ತಕ್ಷಣ ಜೇಬಿಗೆ ಕೈ ಹಾಕುತ್ತಾರೆ. ನಾನು ಈ ಎಲ್ಲವನ್ನೂ ವಿರೋಧ ಮಾಡುತ್ತಿಲ್ಲ. ಆದರೆ ಅವರು ಬದಲಾವಣೆ ಆಗಿದ್ದಕ್ಕೆ ನನಗೆ ಬಹಳ ಖುಷಿಯಾಗಿದೆ ಎಂದು ಕಿಚಾಯಿಸಿದರು.

ನನ್ನ ಅಧಿಕಾರದ ಅವಧಿಯಲ್ಲಿ ಚಾಮರಾಜನಗರ ದಲ್ಲಿ ಜೋಡಿ ರಸ್ತೆ ಮಾಡಿದ್ದು ನಾನೇ. ಜಿಲ್ಲಾಧಿಕಾರಿ ಕಚೇರಿ ಕಟ್ಟಿಸಿದ್ದು ಕಾವೇರಿ ನೀರು ತಂದಿದ್ದು ನಾನೇ. ಆದರೆ ಇವರು ನಾಟಕೀಯವಾಗಿ ಅಲ್ಲಿ ಮಂತ್ರಿ ಮಂಡಲ ಸಭೆ ಮಾಡಿದ್ದಾರೆ ಎಂದರಲ್ಲದೆ, ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ, ಸೋಲಿಸಿದರೂ ನಾನು ಚಾ.ನಗರದ ಜನರ ಪರವೇ. ಭ್ರಷ್ಟ ರಾಜಕಾರಣಿಗಳು ಕೋಟಿ ಕೋಟಿ ಹಣ ಹರಿಸಿದ್ದು ನನ್ನ ಸೋಲಿಗೆ ಕಾರಣ ಎಂದರು.

ಎಂಎಲ್‌ಸಿಗೆ 25 ಕೋಟಿ ದರ ನಿಗದಿ: ನಿಮ್ಮ ಕೊಡುಗೆ ಪರಿಗಣಿಸಿ ಎಂಎಲ್‌ಸಿಯಾದರೂ ಮಾಡಬಹುದಿತ್ತಲ್ಲವೇ ಎಂಬುದಕ್ಕೆ ಉತ್ತರಿಸಿ, ಎಂಎಲ್‌ಸಿ ನಾಮನಿರ್ದೇಶನಕ್ಕೂ 25 ಕೋಟಿ ದರ ನಿಗದಿಯಾಗಿದೆ. ಬಹುಶಃ ನನಗೆ ಐದು ಕೋಟಿ ಕಡಿಮೆ ಮಾಡಬಹುದೇನೋ ಎಂದು ವ್ಯಂಗ್ಯವಾಡಿದರು.

ಮೈಸೂರನ್ನು ಅದ್ಭುತವಾಗಿ ಅಭಿವೃದ್ಧಿ ಮಾಡಬಹುದಿತ್ತು: ಮೈಸೂರಿನವರೇ ಆಗಿ ಸಿದ್ದರಾಮಯ್ಯನವರು ಮೈಸೂರಿಗೆ ಒಂದು ಅದ್ಭುತ ಒಂದು ಯೋಜನೆ ಮಾಡಲಿಲ್ಲ. ಮೈಸೂರು ಬೆಳವಣಿಗೆ ಬಗ್ಗೆ ಸಿದ್ದರಾಮಯ್ಯನವರು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಇದು ನೋವಿನ ಸಂಗತಿ. ಇಡೀ ಮೈಸೂರು ಜಿಲ್ಲೆಯನ್ನು ಅದ್ಭುತವಾಗಿ ಅಭಿವೃದ್ಧಿಪಡಿಸಬಹುದಿತ್ತು. ಆದರೆ ಯಾವುದೇ ಯೋಜನೆ ಮಾಡಲಿಲ್ಲ ಎಂದು ದೂರಿದರು.

ಮೈಸೂರಿನ ದೊಡ್ಡ ಗಡಿಯಾರ ವೃತ್ತದ ಹೆಸರನ್ನು ಬದಲಾವಣೆ ಮಾಡುತ್ತಿದ್ದಾರೆ ಎಂದು ಕೆಲವರು ಗಮನಕ್ಕೆ ತಂದಾಗ, ದೊಡ್ಡ ಗಡಿಯಾರ ಎಂದರೆ ಅದು ಐತಿಹಾಸಿಕವಾದುದು. ಹೆಸರು ಬದಲಾವಣೆಗೆ ಮುಂದಾದರೆ ಬಾರೀ ಚಳವಳಿ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಮುಂದಿನ ತಿಂಗಳು ತಳವಾಡಿ ಕರ್ನಾಟಕಕ್ಕೆ ಸೇರಬೇಕೆಂದು ಒತ್ತಾಯಿಸಿ ಚಾಮರಾಜ ನಗರ ಗಡಿಯಲ್ಲಿ ತಮಿಳುನಾಡು ಗಡಿಗೆ ಮುತ್ತಿಗೆ ಹಾಕಲಾಗುವುದು. ಮೇ 30ರಂದು ಅಖಂಡ ಕರ್ನಾಟಕದಲ್ಲಿ ಈಡುಗಾಯಿ ಚಳವಳಿ ನಡೆಸಲಾಗುವುದು ಎಂದು ತಿಳಿಸಿದರು. ಕನ್ನಡಪರ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ತೇಜಸ್‌ಲೋಕೇಶ್‌ಗೌಡ, ಪಾರ್ಥ ಸಾರಥಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಶೇಷಾದ್ರಿಪುರಂ ಇಂಜಿನಿಯರಿಂಗ್ ಕಾಲೇಜಲ್ಲಿ ಉಚಿತ ಡಿಸಿಇಟಿ ತರಬೇತಿ

ಮೈಸೂರು, ಏ.27(ಎಂಟಿವೈ)– ಮೈಸೂರು ತಾಲೂಕಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿರುವ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಮೇ.5 ರಿಂದ 15 ರವರೆಗೆ ಉಚಿತವಾಗಿ ಡಿಸಿಇಟಿ ತರಬೇತಿಯನ್ನು ನಡೆಸಲಾಗುತ್ತಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಪ್ರಹ್ಲಾದ್ ರಾವ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಜಿನಿಯರಿಂಗ್ ಶಿಕ್ಷಣ ಪಡೆಯಲು ಉತ್ತೇಜನ ನೀಡುವ ನಿಟ್ಟಿನಲ್ಲಿ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಡಿಸಿಇಟಿ ತರಬೇತಿ ನೀಡಲಾಗುತ್ತಿದೆ. ಇಂಜಿನಿಯರಿಂಗ್ ಶಿಕ್ಷಣ ಪಡೆದರೆ ಉದ್ಯೋಗಾವಕಾಶ ಸಿಗುತ್ತದೆ. ಹೆಚ್ಚಿನ ಸಂಭಾವನೆ ದೊರೆಯುವುದರಿಂದ ಆರ್ಥಿಕವಾಗಿ ಏಳಿಗೆ ಹೊಂದಬಹುದಾಗಿದೆ. ಈ ಹಿನ್ನೆಲೆಯಲ್ಲಿ ಡಿಸಿಇಟಿ ತರಬೇತಿ ನೀಡಲಾಗುತ್ತಿದೆ ಎಂದರು.

ತರಬೇತಿಯು ಪ್ರತಿದಿನ ಬೆಳಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದ್ದು, 60 ವಿದ್ಯಾರ್ಥಿಗಳು ಪಾಲ್ಗೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳು ಡಿಪ್ಲೊಮಾ ನಂತರ ಎಂಜಿನಿಯರಿಂಗ್ ಪದವಿಯನ್ನು ಪಡೆಯುವುದರಿಂದ ವಿಶೇಷ ಉದ್ಯೋಗಾವಕಾಶ, ಹೆಚ್ಚಿನ ಸಂಭಾವನೆ ಮತ್ತು ಎಂಜಿನಿಯರಿಂಗ್ ಬಗ್ಗೆ ಆಳವಾದ ಜ್ಞಾನ ಸೇರಿದಂತೆ ಹಲವಾರು ಅನುಕೂಲಗಳಿವೆ. ಆದ ಕಾರಣ ಎಂಜಿನಿಯರಿಂಗ್ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶವನ್ನು ಹೆಚ್ಚಿಸುವ ಸಲುವಾಗಿ, ಗ್ರಾಮೀಣ ಭಾಗದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಪ್ರವೇಶ ಪಡೆಯಲು ಅನುಕೂಲವಾಗಲು ಈ ಉಚಿತ ತರಬೇತಿಯನ್ನು ನಡೆಸಲಾಗುತ್ತಿದೆ ಎಂದರು.

ತರಬೇತಿಯು ಮುಗಿದ ನಂತರ ಮೇ.19 ರಂದು ಮಾಕ್ ಡಿಪ್ಲೊಮಾ ಸಿಇಟಿ ಪರೀಕ್ಷೆ ನಡೆಸಿ, ಅತ್ಯುತ್ತಮ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗುವುದು. ಈ ತರಬೇತಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಮೇ.3ರೊಳಗೆ ಮೊ.ಸಂ. 9606496400, 9606450925ಕ್ಕೆ ಹೆಸರು ಮತ್ತು ಕಾಲೇಜು ವಿಳಾಸವನ್ನು ಸಲ್ಲಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಟಿ. ವೆಂಕಟೇಗೌಡ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ.ಸುಮನ್ ಜಯಕುಮಾರ್ ಇದ್ದರು.

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ಇಂತಿ ದುಃಖಿತಪ್ತರು:
ತಂದೆ: ಬೀರೇಗೌಡ ಬಿ. ನಿವೃತ್ತ ಎಎಸ್‌ಐ, ಪೋಲೀಸ್ ಇಲಾಖೆ
ತಾಯಿ: ಸಾವಿತ್ರಮ್ಮ ಮತ್ತು ತಂಗಿಯರು, ಮಕ್ಕಳಾದ ನಯನ, ಚಂದನ ಮತ್ತು ಕುಟುಂಬವರ್ಗ.

ಶ್ರೀಮತಿ ಸಿ.ಬಿ. ಪವಿತ್ರ

BEFORE HONOURBLE 5TH ADD DISTRICT AND SESSIONS JUDGE AT MYSORE

P&Sc: 38/2025

Petitioner: Alfrad Christopher S/o James Christopher Aged about 42 years Residing at No 287, 2nd Cross Kaveri Main Road Raghavendranagar Mysore. Vs Respondents: NIL

PUBLIC NOTICE

Petitioner has filed the above petition seeking Probate on the Will dated 23.09.1997 Executed by Rathnamma in favour the petitioner, with respect to Schedule property. Any one wish to raise objection for issue of Probate, on will dated 23.09.1997, can raise such objection, before the Honourable Court on 05/06/2025 at 11 Am either in personal presence at or through Advocate.

SCHEDULE

Property Bg No 177, situated at Kyathanahalli Village, Kasba Hobli, Mysore Taluk Block No 4, Muncipal Door No 287, measuring East to WEST 55+51/2 Feet, North to South 60 feet and is bounded on East by: Road
West by: House of Martin
North by: House of Marigowda
South by: Road.
Given under the Seal of this Honourable Court on 25/04/2025

By The Order of the Court
Sd/- Chief Administrative Officer District & Sessions Court Mysore.

Sd/- H.V.Sreenath
Sd/- S. Harsha & Colleagues, Advocate No 1499, 1st Floor, Kabir Road, Mandi Mohalla, Mysore



ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 17-04-2025 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ: 28-04-2025ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ಸ್ಥಳ: ಶ್ರೀ ಮರುಳೇಶ್ವರಸ್ವಾಮಿ ಸಮುದಾಯ ಭವನ ಕಾವೇರಿ ಸ್ಕೂಲ್ ಹತ್ತಿರ, ಜಯನಗರ, ಮೈಸೂರು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರ ಶಾಂತಿ ಕೋರಬೇಕೆಂದು ಪ್ರಾರ್ಥಿಸುತ್ತೇವೆ.

ಶ್ರೀಮತಿ ಮಾದಮ್ಮನವರು
ಭೋಜನ: ಮಧ್ಯಾಹ್ನ 12.30 ಗಂಟೆಗೆ

ದುಃಖತಪ್ತರು : ಶ್ರೀ ಲೇ॥ ಚಿಕ್ಕಣ್ಣರವರ ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

6ನೇ ವರ್ಷದ ಸವಿನೆನಪು



ನಿಮ್ಮ ಅಗಲಿಕೆ ನಮ್ಮನ್ನು ಭಾದಿಸುತ್ತಿದೆ ನಿಮ್ಮ ನಡೆ, ನುಡಿ, ಆದರ್ಶ ನಮಗೆ ದಾರಿದೀಪವಾಗಿದೆ.
ದುಃಖತಪ್ತರು: ನಾಗಲಕ್ಷ್ಮಿ, ಸಹೋದರ–ಸಹೋದರಿಯರು, ಮಕ್ಕಳು ಹಾಗೂ ಕುಟುಂಬವರ್ಗದವರು

ಕು॥ ಶಂಕರಮ್ಮ ಎಂ
(ಪರಿಸರ ವಾಯು ಮಾಲಿನ್ಯ ಇಲಾಖೆ) ಗಾಂಧಿನಗರ, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ



ಶ್ರೀ ಸ್ವಾಮಿ ಎಸ್

ಇವರು ದಿನಾಂಕ 17-04-2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 28-04-2025ರ ಸೋಮವಾರ ಬೆಳಗ್ಗೆ 10-00 ಗಂಟೆಗೆ ಮಂಚೇಗೌಡನ ಕೊಪ್ಪಲು ಸಮುದಾಯ ಭವನ, ಮಯೂರ ಸರ್ಕಲ್, ಹೆಬ್ಬಾಳ್, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಜಯಮ್ಮ ಮತ್ತು ಮೃತರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೃತರ ಅಕ್ಕ–ತಂಗಿಯರು, ಅಣ್ಣತಮ್ಮಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಗೌರವಾನ್ವಿತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು

ಸಿ.ಸಿ.ಸಂಖ್ಯೆ : 1436/2023

ಫಿರ್ಯಾದುದಾರರು : ಶ್ರೀ ಶ್ರೀಧರ್, ವಿರುದ್ಧ

ಆರೋಪಿ : ಶ್ರೀ ಪುಟ್ಟಸ್ವಾಮಿ ಮತ್ತು ಇನ್ನೊಬ್ಬರು

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಫಿರ್ಯಾದನ್ನು ಫಿರ್ಯಾದುದಾರರು ಆರೋಪಿಯ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದ್ದು. ಮುಂದುವರೆದು ಮಂಜುನಾಥ್ ಆದ ನಾನು ಅಕ್ಷಯ ಮಿತ್ರ ಮಾಸಿಕ ಪತ್ರಿಕೆಯನ್ನು ನಡೆಸುತಿದ್ದು, ಸದರಿ ಪತ್ರಿಕೆಯಲ್ಲ ಅಂದರೆ ಫಿರ್ಯಾದುದಾರರ ವಿರುದ್ಧ ಅಂದರೆ ಎಸ್.ವಿ.ಎಸ್. ಇಂಡಸ್ಟ್ರೀಸ್ 2017ರಲ್ಲ ಹಾಗೂ ಇದರ ಮಾಲೀಕರದ ಶ್ರೀಧರ್ ರವರ ಮೇಲೆ 2017ನೇ ಸಾಲಿನಲ್ಲ ಪ್ರಕಟಿಸಿರುವ ಸಾರ್ವಜನಿಕ ವಿಷಯವಸ್ತು ವಿಚಾರವಾಗಿ ಯಾವುದೇ ಆಪಾದನೆ ಮಾಡಿರುವುದಿಲ್ಲ. ಇದರಿಂದಾಗಿ ಶ್ರೀಧರ್ ಮತ್ತು ಅವರ ಇಂಡಸ್ಟ್ರೀಸ್ ವಿರುದ್ಧ ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಿ ಯಾವುದೇ ಮಾನಹಾನಿ ಮಾಡಿರುವುದಿಲ್ಲ, ಈ ಬಗ್ಗೆ ಎಸ್.ವಿ.ಎಸ್. ಇಂಡಸ್ಟ್ರೀಸ್ ಹಾಗೂ ಅದರ ಮಾಲೀಕರು ನಾವು ಪ್ರಕಟಿಸಿರುವ ವಿಚಾರವನ್ನು ತಪ್ಪಾಗಿ ತಿಳಿದುಕೊಂಡಿರುವ ಅಭಿಪ್ರಾಯಗಳು ಸುಳ್ಳು ಎಂದು ಭಾವಿಸಬೇಕೆಂದು, ಈ ಬಗ್ಗೆ ತಪ್ಪಾಗಿ ಗ್ರಹಿಸಿಕೊಂಡಿರುವ ಅವರ ಅಭಿಪ್ರಾಯಕ್ಕೆ ಮಂಜುನಾಥ್ ಎಂ. ಮತ್ತು ಪುಟ್ಟಸ್ವಾಮಿ ಎಂ. ರವರುಗಳು ವಿಷಾಧಿಸುತ್ತಾರೆ, ಇದರಿಂದ ಸಂಬಂಧಪಟ್ಟ ಫಿರ್ಯಾದುದಾರರು ಮತ್ತು ಅವರ ಕಂಪನಿಗೆ ನೋವಾಗುವ ರೀತಿಯಲ್ಲ ನಮ್ಮ ಪತ್ರಿಕೆಯಲ್ಲ ಪ್ರಕಟಣೆ ಮಾಡಿರುವ ವಿಚಾರವಾಗಿ ತಪ್ಪು ಇದಲ್ಲಿ ಕ್ಷಮೆಯಾಚಿಸುತ್ತಾರೆ ಎಂದು ಈ ಮೂಲಕ ತಿಳಿಯಬೇಕೆಂದು ವ್ಯಕ್ತಪಡಿಸುತ್ತಾರೆ.

ಆದ್ದರಿಂದ, ನಾವು ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲೀ ಫಿರ್ಯಾದುದಾರರ -ಇಂಡಸ್ಟ್ರೀಸ್ ವಿರುದ್ಧ ಯಾವುದೇ ಮಾನಹಾನಿ ವಿಷಯವನ್ನು ಪತ್ರಿಕೆಯಲ್ಲಲ್ಲ ಪ್ರಕಟಿಸಿರುವುದಿಲ್ಲ

ಈ ದಿನ ಅಂದರೆ 23 ನೇ ಏಪ್ರಿಲ್ ಮಾಹೆ 2025 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಪುಟ್ಟಸ್ವಾಮಿ ಎಂ.
ಸಹಿ/-ಮಂಜುನಾಥ್ ಎಂ.

By The Order of the Court
Sd/- Chief Ministerial Officer,
Civil Judge and JMFC Court Mysore

ದಿನಾಂಕ : 23/4/2025
ಸ್ಥಳ: ಮೈಸೂರು.